ಬುಡಕಟ್ಟು ಮಹಿಳೆಯರ ಆರ್ಥಿಕ ಸುಧಾರಣೆಯಲ್ಲಿ 'ಸ್ವ-ಶಕ್ತಿ' ಯೋಜನೆಯ ಪಾತ್ರ

(ಕೂಡ್ಲಿಗಿ ತಾಲೂಕನ್ನು ಅನುಲಕ್ಷಿಸಿ)

ಅರ್ಥಶಾಸ್ತ್ರದಲ್ಲಿ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ನಿಬಂಧ

ಸಂಶೋಧಕ

ಬೊಮ್ಮಯ್ಯ ಬಿ.

ಮಾರ್ಗದರ್ಶಕರು

ಡಾ. ಹಿ.ಚಿ. ಬೋರಲಿಂಗಯ್ಯ

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

12

ಪರಾಮರ್ಶೆಗೆ ಮಾತ್ರ

'ಸಿರಿಗನ್ನಡ' ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

12

'ಸಿರಿಗನ್ನಡ' ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ,

ವಿದ್ಯಾರಣ್ಯ ೫೮೩ ೨೭೬.

[illegible]

12

12

[illegible] ಗ್ರಂಥಾಲಯ,
ಕನ್ನಡ ವಿಶ್ವವಿದ್ಯಾಲಯ, ಹಂಪಿ

12

19

ಬುಡಕಟ್ಟು ಮಹಿಳೆಯರ ಆರ್ಥಿಕ ಸುಧಾರಣೆಯಲ್ಲಿ 'ಸ್ವ-ಶಕ್ತಿ' ಯೋಜನೆಯ ಪಾತ್ರ

(ಕೂಡ್ಲಿಗಿ ತಾಲೂಕನ್ನು ಅನುಲಕ್ಷಿಸಿ)

ಅರ್ಥಶಾಸ್ತ್ರದಲ್ಲಿ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ನಿಬಂಧ

ಸಂಶೋಧಕ

ಬೊಮ್ಮಯ್ಯ ಬಿ.

ಮಾರ್ಗದರ್ಶಕರು

ಡಾ. ಹಿ.ಚಿ. ಬೋರಲಿಂಗಯ್ಯ

AKSHARA GRANTHALAYA
ACC.NO. 054693

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

307.772
BOM

054693

ದೃಢೀಕರಣ ಪತ್ರ

"ಬುಡಕಟ್ಟು ಮಹಿಳೆಯರ ಆರ್ಥಿಕ ಸುಧಾರಣೆಯಲ್ಲಿ "ಸ್ವ-ಶಕ್ತಿ" ಯೋಜನೆಯ ಪಾತ್ರ" ಎಂಬ ಶೀರ್ಷಿಕೆಯ ನಿಬಂಧವನ್ನು ಶ್ರೀ ಬೊಮ್ಮಯ್ಯ ಬಿ. ಇವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ನಿಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ :
ಸ್ಥಳ : ವಿದ್ಯಾರಣ್ಯ

(ಡಾ. ಹಿ.ಚಿ. ಬೋರಲಿಂಗಯ್ಯ)
ಮಾರ್ಗದರ್ಶಕರು ಮತ್ತು ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಪ್ರಮಾಣ ಪತ್ರ

"ಬುಡಕಟ್ಟು ಮಹಿಳೆಯರ ಆರ್ಥಿಕ ಸುಧಾರಣೆಯಲ್ಲಿ 'ಸ್ವ-ಶಕ್ತಿ' ಯೋಜನೆಯ ಪಾತ್ರ" ಎಂಬ ಶೀರ್ಷಿಕೆಯ ನಿಬಂಧವನ್ನು ಅರ್ಥಶಾಸ್ತ್ರದಲ್ಲಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೦೨-೦೩ನೇ ಶೈಕ್ಷಣಿಕ ಸಾಲಿನಲ್ಲಿ ಡಾ. ಹಿ.ಚಿ.ಬೋರಲಿಂಗಯ್ಯ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ನಿಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

B. Bommaiah

ದಿನಾಂಕ :

ಸ್ಥಳ : ವಿದ್ಯಾರಣ್ಯ

(ಬೊಮ್ಮಯ್ಯ ಬಿ.)
ಎಂ.ಫಿಲ್. ಸಂಶೋಧನಾ ವಿದ್ಯಾರ್ಥಿ

ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಪರಿವಿಡಿ

ಅಧ್ಯಾಯ ೧

ಬುಡಕಟ್ಟು ಮಹಿಳೆಯರ ಆರ್ಥಿಕ ಸುಧಾರಣೆಯಲ್ಲಿ 'ಸ್ವ-ಶಕ್ತಿ' ಯೋಜನೆಯ ಪಾತ್ರ

ಪ್ರಸ್ತಾವನೆ

ಅಧ್ಯಯನದ ಉದ್ದೇಶ

ಅಧ್ಯಯನದ ಮಹತ್ವ

ಅಧ್ಯಯನದ ವ್ಯಾಪ್ತಿ ಮತ್ತು ವಿಧಾನ

ಪ್ರಸ್ತಾವನೆ

ಜಗತ್ತಿನಲ್ಲಿ ಇಂದು ಒಟ್ಟು ಜನಸಂಖ್ಯೆಯ ಅರ್ಧದಷ್ಟು ಮಹಿಳೆಯರು ಇದ್ದಾರೆ. ಆದರೆ ಪುರುಷರೊಂದಿಗೆ ಸಮಾನವಾಗಿ ಹೋಲಿಸಿ ನೋಡಿದಾಗ ಮಹಿಳೆಯರು ಸಮಾನತೆಯಲ್ಲಿ ಸಮಪಾಲಿನಿಂದ ವಂಚಿತರಾಗಿರುವುದು ನಮ್ಮ ಕಣ್ಣು ಮುಂದೆ ಗೋಚರವಾಗುತ್ತದೆ. ಒಂದು ಕಾಲಕ್ಕೆ ಪುರುಷರಿಗಾಗಿಯೇ ಮೀಸಲಾಗಿದ್ದ ಪೋಲಿಸ್, ಡ್ರೈವರ್, ಪೈಲಟ್, ಮಿಲಿಟರಿ, ಏರ್‌ಪೋರ್ಟ್ ಇತ್ಯಾದಿ ಕ್ಷೇತ್ರಗಳಲ್ಲಿ ಇಂದು ಮಹಿಳೆಯರು ತಮ್ಮ ಅಸ್ಥಿತ್ವವನ್ನು ಸ್ಥಾಪಿಸಿ ಪುರುಷರಿಗಿಂತ ತಾವೇನು ಕಡಿಮೆ ಇಲ್ಲ ಎಂಬುದನ್ನು ದೃಢಪಡಿಸಿ ಯಶಸ್ವಿಕಂಡಿದ್ದಾರೆ.

ಆದರೂ ಜಗತ್ತು ಹಿಂದಿನ ಮತ್ತು ಈಗಿನ ಸಾಮಾಜಿಕ ವ್ಯವಸ್ಥೆಯಲ್ಲಿ ಸಮಾಜ ಸರ್ವರಿಗೂ ಸಮಾನವಾಗಿ ಬದುಕುವ ಅವಕಾಶ ಕಲ್ಪಿಸಿಕೊಟ್ಟಿದೆಯೇ? ಎಂದು ಒಂದು ಕ್ಷಣ ಆಲೋಚಿಸುವುದಾದರೆ ನೂರಾರು ಸಮಸ್ಯೆಗಳು ನಮ್ಮ ಮುಂದೆ ಗೋಚರವಾಗುತ್ತವೆ. ಅದರಲ್ಲಿಯೂ ಮಹಿಳೆಯರ ಹಕ್ಕಿನ ಬಗ್ಗೆ ವಿಚಾರ ಮಾಡುವಾಗ ಭಾರತ ಸ್ವಾತಂತ್ರ್ಯಗಳಿಸಿ ಅರ್ಧಶತಮಾನ ಗತಿಸಿದರೂ ಕೂಡ ಮಹಿಳೆ ತಮ್ಮ ಸಮಾನ ಹಕ್ಕಿಗಾಗಿ ಹೋರಾಡಬೇಕಾಗಿ ಬಂದಿದೆ. ಇಂದು ವಿಶ್ವದ ಎಲ್ಲಾ ರಂಗಗಳಲ್ಲಿಯೂ ಇತರೆ ಸಮುದಾಯದ ಮಹಿಳೆಯರು ಮಾತ್ರವಲ್ಲ, ಬುಡಕಟ್ಟು ಮಹಿಳೆಯು ಸಹ ಕತ್ತಲ ಕೋಣೆಯಿಂದ ಬೆಳಕಿನ ಕಡೆಗೆ ಬಂದಿದ್ದಾಳೆ ಎಂದು ಹೇಳಬಹುದು. ಪುರುಷನಿಗಿಂತ ತಾವೇನು ಕಡಿಮೆ ಇಲ್ಲ ಎಂಬುದನ್ನು ಆಕೆ ನಿಚ್ಚಳವಾಗಿ ಸಾಬೀತು ಪಡಿಸಿದ್ದಾಳೆ. ಅನೇಕ ಕೆಲಸ ಕಾರ್ಯಗಳಲ್ಲಿ ಪುರುಷನಿಗಿಂತ ಮಹಿಳೆಗೆ ಪ್ರಥಮ ಪ್ರಾಶಸ್ತ್ಯ ನೀಡಲಾಗಿದೆ.

ಯಾವುದೇ ಒಂದು ದೇಶವು ಅಭಿವೃದ್ಧಿಯಾಗುವಲ್ಲಿ ಪುರುಷರಷ್ಟೆ ಮಹಿಳೆಯರು ತಮ್ಮ ಕೊಡುಗೆಯನ್ನು ನೀಡಿದ್ದಾರೆ. ಒಂದು ಕುಟುಂಬದಿಂದ ಹಿಡಿದು ಸಮಾಜದ ಎಲ್ಲಾ ಕಾರ್ಯ ಚಟುವಟಿಕೆಗಳಲ್ಲಿ ಬುಡಕಟ್ಟು ಮಹಿಳೆಯರ ಪಾಲು ಅಪಾರ. ಪ್ರಚಲಿತ ಸಮಾಜದಲ್ಲಿ ಇತರೆ ಸಮುದಾಯದ ಮಹಿಳೆಯರು ಹಲವಾರು ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡು ಆರ್ಥಿಕವಾಗಿ ಅಭಿವೃದ್ಧಿಯಾಗುತ್ತಿರುವುದನ್ನು ನಾವು ಕಾಣುತ್ತೇವೆ. ಅದರಂತೆ ಬುಡಕಟ್ಟು ಮಹಿಳೆಯರು ಸಹ ತಾವು ಯಾರಿಗಿಂತ ಕಡಿಮೆಯಿಲ್ಲ ಎಂದು ತಿಳಿದು ಅವರು ಕೂಡ ಆರ್ಥಿಕವಾಗಿ ಅಭಿವೃದ್ಧಿಯಾಗುವಲ್ಲಿ ಮುಂದೆ ಬಂದಿರುವುದನ್ನು ಕಾಣುತ್ತೇವೆ.

[illegible]

[illegible]

[illegible]

[illegible]

೧೯ನೆಯ ಶತಮಾನದಲ್ಲಿ ಮಹಿಳೆಯರು ಬದುಕುವ ಮಾದರಿಗಳಲ್ಲಿ ಬದಲಾವಣೆಗಳು ಬರತೊಡಗಿದವು. ಇನ್ನೂ ಸರಿಯಾಗಿ ಹೇಳಬೇಕೆಂದರೆ ಆದರ್ಶ ಸತಿಯ ಪರಿಕಲ್ಪನೆಯನ್ನು ನವೀನವಾಗಿ ನಿರ್ವಚಿಸಲಾಯಿತು. ಮಹಿಳೆಯರು ಕ್ರಿಯಾಶೀಲರಾಗಬಹುದಾದ ಕ್ಷೇತ್ರಗಳನ್ನು ವಿಸ್ತರಿಸಲಾಯಿತು. ಮೊದಲಿಗೆ ಹೆಣ್ಣೊಬ್ಬಳ ಬದುಕಿನ ವಿವಿಧ ಹಂತಗಳಲ್ಲಿ ಅವಳು ತೊಡಗಿಕೊಳ್ಳಬಹುದಾದ ಕಾರ್ಯಚಟುವಟಿಕೆಗಳನ್ನು ಗುರುತಿಸುವುದರಲ್ಲಿ, ಎರಡನೆಯದಾಗಿ ಅವರ ಕಾರ್ಯಕ್ಷೇತ್ರಗಳನ್ನು ವಿಸ್ತರಿಸುವುದರಲ್ಲಿ, ಮೂರನೆಯದಾಗಿ ವ್ಯಕ್ತಿತ್ವದ ಬೆಳವಣಿಗೆಯನ್ನು ಒಪ್ಪುವ ಚಿಂತನೆಯಲ್ಲಿ ಸಾಕಷ್ಟು ಬದಲಾವಣೆಗಳು ಬಂದವು. ಈ ಬದಲಾವಣೆಗಳಿಗೆ ಮುಖ್ಯ ಕಾರಣ ಇತ್ತೀಚಿಗೆ ಸ್ಥಾಪನೆಗೊಳ್ಳುತ್ತಿರುವ ಸಂಘ ಸಂಸ್ಥೆಗಳು ಎಂದು ಹೇಳಬಹುದು.

ಭಾರತದ ಚರಿತ್ರೆಯಲ್ಲಿ ಈ ಬುಡಕಟ್ಟು ಮಹಿಳೆಯರು ಮೊಟ್ಟ ಮೊದಲಬಾರಿಗೆ ತಮ್ಮ ಜಾತಿಯ ಮಹಿಳೆಯರೊಂದಿಗೆ ಮಾತ್ರವಲ್ಲದೆ ಇತರ ಮಹಿಳಾ ಸಮುದಾಯದೊಂದಿಗೆ ಬೆರೆಯುವಂತೆ ಆಗಿದ್ದಾರೆ. ಒಂದೆಡೆ ಇವರು ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡಿರುವುದರಿಂದ ಅನೇಕರು ಅನಕ್ಷರಸ್ಥರಾಗಿದ್ದವರು ಈಗ ಅಕ್ಷರ ಜ್ಞಾನವನ್ನು ಪಡೆದುಕೊಂಡಿರುವುದು ಕಂಡು ಬರುತ್ತದೆ. ಇವರು ಅನೇಕ ಕ್ಷೇತ್ರಗಳಲ್ಲಿ ಭಾಗವಹಿಸಿ ಸಹಜವಾಗಿ ಬೇರೂರಿ ಬೆಳೆದು ಬರುತ್ತಿದ್ದಾರೆಂಬುದು ತುಂಬಾ ಸಂತೋಷದ ಹಾಗೂ ಕೂತೂಹಲದ ಸಂಗತಿ ಎಂದು ಹೇಳಿದರೆ ತಪ್ಪಾಗಲಾರದು.

ಈ ಹಿನ್ನೆಲೆಯಲ್ಲಿ ಕೂಡ್ಲಿಗಿ ತಾಲೂಕಿನ "ಬುಡಕಟ್ಟು ಮಹಿಳೆಯರ ಆರ್ಥಿಕ ಸುಧಾರಣೆಯಲ್ಲಿ 'ಸ್ವ-ಶಕ್ತಿ' ಯೋಜನೆಯ ಸ್ಥಾನವನ್ನು ಗುರುತಿಸುವ ಒಂದು ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ. ಹಾಗೆಯೇ ಈ ಬುಡಕಟ್ಟು ಮಹಿಳೆಯರು 'ಸ್ವ-ಶಕ್ತಿ' ಯೋಜನೆಯ ಕಡೆಯಿಂದ ಸ್ವ ಸಹಾಯ ಸಂಘಗಳನ್ನು ಕಟ್ಟಿಕೊಂಡು ಯಾವ ರೀತಿ ಆಧುನಿಕ ಸಮಾಜದಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಹಾಗೂ ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದುತ್ತಿದ್ದಾರೆ ಎಂಬುದನ್ನು ಪ್ರಸ್ತುತ ಅಧ್ಯಯನದಲ್ಲಿ ಗುರುತಿಸಲಾಗಿದೆ.

ನಂತರ ಮಹಿಳೆಯರ ಸ್ಥಾನವನ್ನು ಕೇವಲ ಆದಾಯ ಆಧಾರಿತ ನೆಲೆಗಳಿಗೆ ಸೀಮಿತಗೊಳಿಸದೆ ಅವರ ಶಿಕ್ಷಣ, ಗಂಡದಿರ ಶಿಕ್ಷಣ, ಮಕ್ಕಳ ಶಿಕ್ಷಣ ಹಾಗೂ ಅವರ ಆರೋಗ್ಯ ಇನ್ನು ಮುಂತಾದವುಗಳನ್ನು ಒಳಗೊಂಡಂತೆ ಇತ್ತೀಚಿನ ದಿನಗಳಲ್ಲಿ ವಿಶ್ವದಾದ್ಯಂತ ಪ್ರಚಲಿತದಲ್ಲಿರುವ ಮಹಿಳೆಯರ ಅಭಿವೃದ್ಧಿ ಮತ್ತು ಅವರ ನಿಶ್ಕೃಷ್ಟೀಕರಣ ನೆಲೆಗಳಲ್ಲಿ ಗುರುತಿಸುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ.

ಅಧ್ಯಯನದ ಉದ್ದೇಶ

ಜಗತ್ತಿನಲ್ಲಿ ಬೃಹತ್ ಪ್ರಜಾಪ್ರಭುತ್ವ ಎಂದು ಕರೆಯುವ ಭಾರತ ಮೂಲತಃ ಹಳ್ಳಿಗಳಿಂದ

ಕೂಡಿದ ದೇಶವೆಂದು ಹೇಳಬಹುದು. ಈ ಹಳ್ಳಿಗಳು ಪ್ರಗತಿಯಾಗದ ಹೊರತು ದೇಶದ ಅಭಿವೃದ್ಧಿ ಸಾಧ್ಯವಾಗುವುದಿಲ್ಲ. ಅದರಂತೆ ಒಂದು ದೇಶ ಅಭಿವೃದ್ಧಿಯಾಗಬೇಕಾದರೆ ಪುರುಷನಷ್ಟೇ ಸ್ತ್ರೀಗೆ ಸಮಪಾಲಿದೆ. ನಮ್ಮ ಸಮಾಜದಲ್ಲಿ ಮಹಿಳೆಯರಿಗೆ ಸಂಬಂಧಿಸಿದ ಅಂಶಗಳು ವಿಪುಲ. ಆದರೆ ಪ್ರಾಚೀನ ಕಾಲದಿಂದಲೂ ಮಹಿಳಾ ವರ್ಗ ಒಂದು ಮುಖ್ಯ ಅಂಗವಾಗಿ ಕಾರ್ಯನಿರ್ವಹಿಸುತ್ತಾ ಬಂದಿದೆ. ಬದಲಾಗುತ್ತಿರುವ ಸಮಾಜದಲ್ಲಿ ಆರ್ಥಿಕ, ರಾಜಕೀಯ ಹಾಗೂ ಸಾಮಾಜಿಕ ಪರಿಸ್ಥಿತಿಗನುಗುಣವಾಗಿ ಅಭಿವೃದ್ಧಿಯ ಪರಿಕಲ್ಪನೆಯೂ ಬದಲಾಗುತ್ತಿರುವುದನ್ನು ನಾವು ಕಾಣುತ್ತೇವೆ.

ಮಾನವ ಸಂಪನ್ಮೂಲಗಳು ಮತ್ತು ಸಾಮಾಜಿಕ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿದ್ದು ತೊಂಬತ್ತರ ದಶಕದ ಮಹತ್ತರ ಬದಲಾವಣೆ ಸುಸ್ಥಿರ ಹಾಗೂ ಸಮಾನತೆ, ಆರ್ಥಿಕ ಪ್ರಗತಿಯ ತಳಹದಿ ಮಾನವ ಸಂಪನ್ಮೂಲಗಳ ಅಭಿವೃದ್ಧಿ ಎಂಬುದನ್ನು ಮನಗಾಣಲಾಯಿತು. ಈ ನಿಟ್ಟಿನಲ್ಲಿ ಜನಸಂಖ್ಯೆಯ ಶೇಕಡಾ ೪೮ ರಷ್ಟಿರುವ ಮಹಿಳೆಯರ ಸಶಕ್ತತೆ ಹಾಗೂ ಅಭಿವೃದ್ಧಿ ಆಗಬೇಕಾಗಿರುವುದು ಅವಶ್ಯವೆಂದು ತಿಳಿದು, ಮಹಿಳಾ ಅಭಿವೃದ್ಧಿ ನಿಗಮವು ಗ್ರಾಮೀಣ ಮಹಿಳೆಯರನ್ನು ಗುರುತಿಸಿ ಇವರನ್ನು ಅಭಿವೃದ್ಧಿ ಪಡಿಸಲು 'ಸ್ವ-ಶಕ್ತಿ' ಯೋಜನೆಯನ್ನು ಸ್ಥಾಪಿಸಲಾಯಿತು.

ಈ ಯೋಜನೆಯು ಆರ್ಥಿಕವಾಗಿ ಹಿಂದುಳಿದ ಗ್ರಾಮೀಣ ಮಹಿಳೆಯರನ್ನು ಹಾಗೂ ಬುಡಕಟ್ಟು ಮಹಿಳೆಯರನ್ನು ಸಬಲರನ್ನಾಗಿ ಹಾಗೂ ಸ್ವಾವಲಂಬಿಗಳಾಗಿ ಮಾಡಲು, ನಂತರ ಬುಡಕಟ್ಟು ಮಹಿಳೆಯರ ಆರ್ಥಿಕ ಅಭಿವೃದ್ಧಿಯನ್ನು ಮತ್ತು ಸಾಮಾಜಿಕ ಬದಲಾವಣೆಗೆ ಪೂರಕ ಪರಿಸರವನ್ನು ಸೃಷ್ಟಿಸುವ ಪ್ರಕ್ರಿಯೆಗಳನ್ನು ಯಾವ ರೀತಿ ಬಲಪಡಿಸುವುದು ಎಂಬುದನ್ನು ಕಂಡು ಕೊಳ್ಳುವುದು. ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ನಂತರ ಮಹಿಳೆಯರಲ್ಲಿ ರಚನಾತ್ಮಕ ಚಟುವಟಿಕೆಗಳ ಮೂಲಕ ಕ್ರಿಯಾಶೀಲತೆ ತುಂಬುವ ಹಾಗೂ ವೃತ್ತಿ ಕೌಶಲ್ಯ ವೃದ್ಧಿಸುವ ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳು ಮಹಿಳೆಯರನ್ನು ಆರ್ಥಿಕವಾಗಿ, ಸ್ವಾವಲಂಬಿಗಳಾನ್ನಾಗಿ ಯಾವರೀತಿ ರೂಢಿಸುತ್ತವೆ ಎಂಬುದನ್ನು ಕಂಡುಕೊಳ್ಳುವುದು ಈ ಅಧ್ಯಯನದ ಉದ್ದೇಶವಾಗಿದೆ.

ಈ ಹಿನ್ನೆಲೆಯಲ್ಲಿ ಅಧ್ಯಯನದ ಮುಖ್ಯ ರೂಪರೆ‌ೇಷೆಗಳನ್ನು ಹೀಗೆ ಪಟ್ಟಿ ಮಾಡಬಹುದಾಗಿದೆ.

* ಮಹಿಳೆಯರಿಗೆ ಆರ್ಥಿಕ ಪ್ರಗತಿ ಸಾಧಿಸುವುದಕ್ಕೆ ಈ ಯೋಜನೆ ಯಾವರೀತಿ ನೆರವು ನೀಡುವುದು ಹಾಗೂ ಬ್ಯಾಂಕ್ ಮೂಲಕ ಸಾಲವನ್ನು ಯಾವರೀತಿ ಸಿಗುವಂತೆ ಮಾಡುತ್ತದೆ ಎಂಬುದನ್ನು ಕಂಡುಕೊಳ್ಳುವುದು.

* ಈ ಯೋಜನೆಯ ಮುಖಾಂತರ ಮಹಿಳೆಯರಲ್ಲಿ ಆತ್ಮವಿಶ್ವಾಸ, ಆತ್ಮ ಗೌರವ ಹಾಗೂ ಸ್ವಾಯತ್ತತೆಯನ್ನು ಯಾವರೀತಿ ಹೆಚ್ಚಿಸಲಾಗಿದೆ ಎಂಬುದನ್ನು ಕಂಡುಕೊಳ್ಳುವುದು.

* 'ಸ್ವ-ಶಕ್ತಿ' ಯೋಜನೆಯ ಉದ್ದೇಶಗಳು ಈಡೇರುತ್ತಿವೆಯೇ ಅಥವಾ ಇಲ್ಲವೇ ಎಂಬುದನ್ನು ಕಂಡುಕೊಳ್ಳುವುದು.

* ಈ ಯೋಜನೆಯ ಸೌಲಭ್ಯ ಪಡೆದ ನಂತರ ಬುಡಕಟ್ಟು ಮಹಿಳೆಯರ ಜೀವನಮಟ್ಟ ಸುಧಾರಿಸಿದೆಯೇ ಎಂಬುದನ್ನು ಕಂಡುಕೊಳ್ಳುವುದು.

* 'ಸ್ವ-ಶಕ್ತಿ' ಯೋಜನೆಯು ಗ್ರಾಮೀಣ ಮಹಿಳೆಯರಿಗೆ ಅವಕಾಶ ಕಲ್ಪಸಿ ಕೊಟ್ಟಿದೆಯೋ ಅಥವಾ ನಗರ ಪ್ರದೇಶದ ಮಹಿಳೆಯರಿಗೆ ಅವಕಾಶ ಕಲ್ಪಿಸಿಕೊಟ್ಟಿದೆಯೋ ಎಂಬುದನ್ನು ಕಂಡುಕೊಳ್ಳುವುದು.

* ಈ ಯೋಜನೆಯು ಬಡತನ ರೇಖೆಗಿಂತ ಕೆಳಗಿರುವ ಗ್ರಾಮೀಣ ಬುಡಕಟ್ಟು ಮಹಿಳೆಯರ ಸರ್ವತೋಮುಖ ಅಭಿವೃದ್ಧಿ ಹಾಗೂ ಸ್ವಾವಲಂಬನೆಗೆ ಯಾವರೀತಿ ಆಧ್ಯತೆ ನೀಡಿದೆ ಎಂಬುದನ್ನು ಕಂಡುಕೊಳ್ಳುವುದು.

* ಸ್ವ-ಸಹಾಯ ಸಂಘದಿಂದ ಬುಡಕಟ್ಟು ಮಹಿಳೆಯರಲ್ಲಿ ಆಗಿರುವ ಒಟ್ಟಾರೆ ಬದಲಾವಣೆ ಏನು ಎಂಬುದನ್ನು ಕಾಣುವುದು.

ಅಧ್ಯಯನದ ಮಹತ್ವ

ಜಗತ್ತಿನ ಇತಿಹಾಸದಲ್ಲಿ ಶತ ಶತಮಾನಗಳಿಂದ ಅಂಟಿಸಲಾಗಿದ್ದ ಅಬಲೆ ಎಂಬ ಹಣೆಪಟ್ಟಿಯನ್ನು ಮಹಿಳೆ ಈಗ ಕಿತ್ತೆಸೆದಿದ್ದಾಳೆ. ಕೆಲ ಉದ್ಯೋಗಗಳಲ್ಲಂತೂ ಹೆಣ್ಣಿಗೆ ಮಾತ್ರವೆ ಪ್ರವೇಶ ಅಲ್ಲಿ ಗಂಡಸರಿಗೆ ನೋ ಎಂಟ್ರಿ! ಹಿಂದಿನ ಕಾಲದಲ್ಲಿ "ಹೆಣ್ಣು ಎಷ್ಟು ಕಲಿತರೇನು ಏನು ಮಾಡಿದರೇನು ಗಡಗಿ ತೊಳೆಯೋದು ತಪ್ಪಿತೇನು" ಎಂಬ ಮೂಢ ಮಾತನ್ನು ಇಂದು ನಮ್ಮ ಬುಡಕಟ್ಟು ಮಹಿಳೆಯರು ಮತ್ತು ಇತರ ಸಮುದಾಯದ ಮಹಿಳೆಯರು ಸುಳ್ಳಾಗಿಸಿದ್ದಾರೆ. ತನಗೂ ಈ ಸಮಾಜದಲ್ಲಿ ಪುರುಷನಷ್ಟೇ ಸಾಮರ್ಥ್ಯ ಇದೆ ಎಂಬುದನ್ನು ಸರ್ವ ರೀತಿಯಿಂದಲೂ ಸಾಧಿಸಿತೋರಿಸುತ್ತಾ ಬಂದಿರುವುದನ್ನು ಕಾಣುತ್ತೇವೆ.

ಪ್ರಸಕ್ತ ಜಾಗತೀಕರಣ ನೆಲೆಯಲ್ಲಿ ರಾಜಕೀಯ, ಶಿಕ್ಷಣ, ಸಾಹಿತ್ಯ, ಕಲೆ, ಕ್ರೀಡೆ, ವಿಜ್ಞಾನ ಸೇರಿದಂತೆ ಜಗತ್ತಿನ ಯಾವುದೇ ಕ್ಷೇತ್ರದಲ್ಲಿ ಮಹಿಳೆಯರು ತಮ್ಮ ಅತ್ಯದ್ಭುತ ಸಾಧನೆ ಮಾಡಿ ಪ್ರಪಂಚವೇ ಬೆರಗುಗೊಳಿಸುವಂತೆ ಮಾಡಿದ್ದಾರೆ. ಅಲ್ಲದೇ ಬಹುತೇಕ ಕಡೆಗಳಲ್ಲಿ ಪುರುಷರಿಗಿಂತ ಹೆಚ್ಚಿನ ವೇಗದಲ್ಲಿ ಬೆಳೆದು ನಿಂತಿದ್ದಾಳೆ. ಗಂಡಸರಿಗಿಂತ ಹೆಚ್ಚು ಶ್ರದ್ಧೆ ದಕ್ಷತೆಗಳಿಂದ ಕೆಲಸ ಮಾಡಿ ಸಾಧನೆಯಲ್ಲಿ ಮೇಲುಗೈ ಹೊಂದಿದ್ದಾಳೆ ಎಂದು ಹೇಳಿದರೆ ತಪ್ಪಾಗಲಾರದು.

ಪ್ರಾಚೀನ ಕಾಲದಿಂದಲೂ ನಡೆದ ಘಟನೆಗಳತ್ತ ಸೂಕ್ಷ್ಮವಾಗಿ ಗಮನಿಸುತ್ತ ಬಂದರೆ ಬಹುತೇಕ

ಪ್ರತಿಯೊಂದು ಘಟನೆ ಪ್ರಸಂಗಗಳಲ್ಲಿ ಹೆಣ್ಣಿನ ಮಹತ್ವಗಳು ನಮಗೆ ಗೋಚರವಾಗುತ್ತಾ ಬರುತ್ತವೆ. ಪುರಾಣ ಕಾಲದಲ್ಲಿ ಹೆಣ್ಣು ಶಕ್ತಿ ದೇವತೆಯಾಗಿ ಕೆಲಸ ಮಾಡಿದ್ದಾಳೆ. ಮಹಿಳೆಯರ ಶಕ್ತಿ, ಪ್ರೋತ್ಸಾಹಗಳು ಒಂದಲ್ಲೊಂದು ರೀತಿಯಲ್ಲಿ ಕೆಲಸ ಮಾಡುತ್ತಲೇ ಬಂದಿವೆ. ಕೆಲಬಾರಿ ಸಲ್ಲದ ಅವಘಡಗಳು ಆಗಿವೆ. ಆದರೂ ಅವುಗಳ ಸಂಖ್ಯೆ ಕಡಿಮೆ. ಮಹಿಳೆ ಕೇವಲ ಅಡುಗೆ ಮನೆಯ ಆಳು, ಮನೆಯ ಹೊಸ್ತಿಲನ್ನು ದಾಟಿ ಈಚೆ ಬರುವ ಹಕ್ಕು ಆಕೆಗಿಲ್ಲ ಎಂಬ ಸ್ವಯಂ ಘೋಷಿತ ಕಾನೂನೊಂದನ್ನು ಈ ಪುರುಷ ಪ್ರಧಾನ ವ್ಯವಸ್ಥೆ ಅವಳ ಮೇಲೆ ಹೇರಿತ್ತು.

ಇದನ್ನು ಪ್ರತಿಭಟಿಸಿ ಮಹಿಳೆಗೆ ಸಮಾನ ಸ್ಥಾನಮಾನ ಕಲ್ಪಿಸುವ ಮತ್ತೊಂದು ಪುರುಷ ವರ್ಗವೂ ಇತ್ತು. ಇದೀಗ ಭಾರತದಲ್ಲಿ ಬುಡಕಟ್ಟು ಮಹಿಳೆಯರಿಲ್ಲದ ಯಾವುದೊಂದು ಕ್ಷೇತ್ರವು ನಮಗೆ ಸಿಗಲಾರದು. ಕೇಂದ್ರ ರಾಜ್ಯ ಸರ್ಕಾರಗಳ ಯಾವುದೇ ಕಛೇರಿಯಲ್ಲಿ ಹೋದರೂ ಅಲ್ಲಿ ಶೇ ೨೫ರಷ್ಟಾದರೂ ಮಹಿಳೆಯರು ಗೋಚರಿಸುತ್ತಾರೆ. ಪ್ರತಿ ಯಶಸ್ವಿ ಪುರುಷನ ಹಿಂದೆ ಓರ್ವ ಹೆಣ್ಣಿನ ಆಶೀರ್ವಾದ, ಮಾರ್ಗದರ್ಶನ, ಸಹಕಾರ, ಸಹಾಯ ಇರುತ್ತದೆ. ಆ ಹೆಣ್ಣು ತಾಯಿ, ಸೋದರಿ, ಪತ್ನಿ, ಸ್ನೇಹಿತೆಯಾದರೂ ಆಗಿರಬಹುದು.

ಅದರಂತೆ ಅನೇಕ ಸ್ತ್ರೀಯರ ಯಶಸ್ಸಿನ ಹಿಂದೆ ಓರ್ವ ಪುರುಷನ ಪ್ರೋತ್ಸಾಹ ಇರುವ ಉದಾಹರಣೆಗಳು ಇವೆ ಎಂದು ಹೇಳಿದರೆ ತಪ್ಪಾಗಲಾರದು. ನಮ್ಮ ಭಾರತೀಯ ಸಂಸ್ಕೃತಿ ಸಂಪ್ರದಾಯಗಳಲ್ಲಿ ಮಹಿಳೆಗೆ ಮಹತ್ವವಿದೆ, ಎಂಬುದಕ್ಕಿಂತ ಪೂಜ್ಯ ಸ್ಥಾನ ನೀಡಲಾಗಿದೆ. "ಎಲ್ಲಿ ಹೆಣ್ಣಿಗೆ ಮಾನ ಸನ್ಮಾನಗಳು ಸಿಗುವವೋ ಅಲ್ಲಿ ಸಕಲ ದೇವಾನು ದೇವತೆಗಳು ಸಂತೃಪ್ತಿಯಿಂದಿರುವರು". ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ಇಷ್ಟೆಲ್ಲಾ ಸಾಮಾಜಿಕ, ಐತಿಹಾಸಿಕ, ಪೌರಾಣಿಕ ಹಿನ್ನೆಲೆ ಇರುವಾಗ್ಯೂ "ಸ್ತ್ರೀ-ಶೋಷಣೆ" ನಮ್ಮಲ್ಲಿ ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದಿದೆ ಎಂದು ಹೇಳಬಹುದು.

ಕೆಲವೊಂದು ಸಂದರ್ಭಗಳಲ್ಲಿ ಹೆಣ್ಣಿಗೆ ಹೆಣ್ಣೆ ಶತ್ರುವಾಗಿ ಕಾಡಿದ ಪ್ರಸಂಗಗಳು ನಮ್ಮ ಭಾರತೀಯ ಪರಂಪರೆಯಲ್ಲಿ ನಾವು ನೋಡಬಹುದು. ಈ ಎಲ್ಲವನ್ನೂ ಮೀರಿ ಹೆಣ್ಣಿಗಿರುವ ದೊಡ್ಡದೊಂದು ಗುಣ ಮಾತೃಹೃದಯ, ತಾಯಿಯ ಆಶೀರ್ವಾದ ಮತ್ತು ಸಹಧರ್ಮಿಣಿಯ ಒಲವು. ಭಾರತದ ಜನಸಂಖ್ಯೆಯಲ್ಲಿ ಶೇಕಡಾ ೪೮ರಷ್ಟು ಮಹಿಳೆಯರು ಇದ್ದಾರೆ. ಈ ನಿಟ್ಟಿನಲ್ಲಿ ಮಹಿಳೆಯರ ಸಶಕ್ತತೆ ಮತ್ತು ಕಲ್ಯಾಣ ಕಾರ್ಯಕ್ರಮಗಳಿಗೆ ನೀಡುತ್ತಿದ್ದ ಪ್ರಾಮುಖ್ಯತೆಯು ಕ್ರಮೇಣ ಸರ್ಕಾರದ ನೀತಿಯಲ್ಲಿ ಆದ್ಯತೆಯನ್ನು ಪಡೆದಿರುವುದು ಒಂದು ಗಮನಾರ್ಹವಾದ ಸಂಗತಿ.

ಮಹಿಳೆಯರ ಸಮಾನತೆ ಮತ್ತು ಸಶಕ್ತತೆ, ಮಹಿಳಾ ಹಕ್ಕುಗಳು ಹಾಗೂ ಸೌಲಭ್ಯಗಳ ಕುರಿತು ಅರಿವು ಮೂಡಿಸುವುದು ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ತರಬೇತಿ ನೀಡುವುದು

ತನ್ಮೂಲಕ ಉದ್ಯೋಗಾವಕಾಶಗಳು ಮತ್ತು ರಾಷ್ಟ್ರದ ಅಭಿವೃದ್ಧಿಯ ಮುಖ್ಯ ವಾಹಿನಿಯಲ್ಲಿ ಮಹಿಳೆಯರನ್ನು ಅದರಲ್ಲಿಯೂ ಗ್ರಾಮೀಣ ಪ್ರದೇಶದ ಬುಡಕಟ್ಟು ಮಹಿಳೆಯರನ್ನು ಸಮಗ್ರಗೊಳಿಸುವ ಅಂಶಗಳಿಗೆ ಪ್ರಾಮುಖ್ಯತೆಯನ್ನು ನೀಡಲಾಯಿತು. ಈ ದಿಶೆಯಲ್ಲಿ ಬಡತನದ ರೇಖೆಗಿಂತಲೂ ಕೆಳಗಿರುವ ಗ್ರಾಮೀಣ ಮಹಿಳೆಯರು ಹಾಗೂ ಬುಡಕಟ್ಟು ಮಹಿಳೆಯರ ಸರ್ವತೋಮುಖ ಅಭಿವೃದ್ಧಿ ಹಾಗೂ ಸ್ವಾವಲಂಬನೆಗೆ ಆದ್ಯತೆಯನ್ನು ನೀಡಿದೆ.

ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನ "ಬುಡಕಟ್ಟು ಮಹಿಳೆಯರ ಆರ್ಥಿಕ ಸುಧಾರಣೆಯಲ್ಲಿ 'ಸ್ವ-ಶಕ್ತಿ' ಯೋಜನೆಯ ಪಾತ್ರದ" ಒಂದು ಅಧ್ಯಯನವಾಗಿದೆ. ಮಹಿಳೆಯರು ಇಂದು ಈ ಯೋಜನೆಯಿಂದ ಭಾರತದಂತಹ ಅಭಿವೃದ್ಧಿ ಹೊಂದಿತ್ತಿರುವ ದೇಶದಲ್ಲಿ, ಅದರಲ್ಲಿಯೂ ಬುಡಕಟ್ಟು ಮಹಿಳೆಯರು ಯಾವ ರೀತಿ ಅಭಿವೃದ್ಧಿಯನ್ನು ಹೊಂದುತ್ತಿದ್ದಾರೆ ಎಂಬುದನ್ನು ಕಂಡುಕೊಳ್ಳುವುದು ಈ ಅಧ್ಯಯನದ ಮುಖ್ಯ ವಿಷಯವಾಗಿದೆ. ಈ ಪರಿಸ್ಥಿತಿಗೆ ಅನುಗುಣವಾಗಿ ಅಧ್ಯಯನ ಕ್ಷೇತ್ರವನ್ನು ಕರ್ನಾಟಕ ರಾಜ್ಯದ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿಗೆ ಮಾತ್ರ ಸೀಮಿತಗೊಳಿಸಲಾಗಿದೆ.

ಪ್ರಸ್ತುತದಲ್ಲಿ, ಈ ಯೋಜನೆಯು ದೇಶದ ೬ ರಾಜ್ಯಗಳಲ್ಲಿ ಇರುವುದು ಕಂಡುಬರುತ್ತದೆ. ಅವು ಉತ್ತರ ಪ್ರದೇಶ, ಬಿಹಾರ, ಗುಜರಾತ, ಹರಿಯಾಣ, ಮಧ್ಯಪ್ರದೇಶ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಏಕಕಾಲದಲ್ಲಿ ಆರಂಭಗೊಂಡಿದೆ. ಈ ಯೋಜನೆಯ ಅವಧಿ ೫ ವರ್ಷಗಳು ಈ ಅವಧಿಯಲ್ಲಿ ಕನಿಷ್ಠ ೬೪೦೦ ಹಾಗೂ ೧೨೦೦ ಮಹಿಳಾ ಸ್ವ-ಸಹಾಯ ಸಂಘಗಳನ್ನು ರಚಿಸಿ, ಬಡತನದಿಂದ ನರಳುವ ಬುಡಕಟ್ಟು ಮಹಿಳೆಯರನ್ನು ಮತ್ತು ಆರ್ಥಿಕವಾಗಿ ಹಿಂದುಳಿದಿರುವ ಇತರ ದುರ್ಬಲ ವರ್ಗಗಳ ಮಹಿಳೆಯರನ್ನು ಸಶಕ್ತರನ್ನಾಗಿಸುವುದು ಈ ಯೋಜನೆಯ ಮುಖ್ಯ ಆಶಯವಾಗಿದೆ.

ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನವು ನಿಗದಿತ ಕ್ಷೇತ್ರವನ್ನು ಆಯ್ದುಕೊಂಡು 'ಸ್ವ-ಶಕ್ತಿ' ಯೋಜನೆಯಲ್ಲಿ ಬುಡಕಟ್ಟು ಮಹಿಳೆಯರ ಆರ್ಥಿಕ ಸ್ಥಿತಿಗತಿಗಳನ್ನು ಅರಿಯುವ ಒಂದು ನಿದರ್ಶನಾತ್ಮಕ ಅಧ್ಯಯನವಾಗಿದೆ. 'ಸ್ವ-ಶಕ್ತಿ' ಯೋಜನೆಯ ಸ್ವ-ಸಹಾಯ ಸಂಘಗಳಲ್ಲಿ ಹೆಚ್ಚಾಗಿ ಬುಡಕಟ್ಟು ಮಹಿಳೆಯರು ಇರುವುದನ್ನು ಕಾಣಬಹುದು. ಪ್ರಸಕ್ತ ಅಧ್ಯಯನ ಅಂಥ ಬುಡಕಟ್ಟು ಪ್ರದೇಶವೊಂದರ ನಿಗದಿತ ಕ್ಷೇತ್ರದಲ್ಲಿನ ಬುಡಕಟ್ಟು ಮಹಿಳೆಯರ ಆರ್ಥಿಕ ಸ್ಥಿತಿಗತಿಗಳನ್ನು ಅರಿಯುವ ಒಂದು ನಿದರ್ಶನಾತ್ಮಕ ಅಧ್ಯಯನವಾಗಿದೆ. ಆದಾಗ್ಯೂ ನಿದರ್ಶನಾತ್ಮಕ ವಿಶ್ಲೇಷಣೆಯಲ್ಲಿ ಅಗತ್ಯವಿರುವ ಮಾಹಿತಿಯನ್ನು ಸೈದ್ಧಾಂತಿಕ ಹಿನ್ನೆಲೆಯಲ್ಲಿ ಬಳಸಿಕೊಳ್ಳಲಾಗಿದೆ.

ನನ್ನ ಈ ಅಧ್ಯಯನಕ್ಕೆ ಉದ್ದೇಶ ಪೂರ್ವಕವಾಗಿ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕನ್ನು ಆಯ್ಕೆ ಮಾಡಿಕೊಂಡಿರುತ್ತೇನೆ. ಕಾರಣವೆಂದರೆ ಈ ಕೂಡ್ಲಿಗಿ ತಾಲೂಕು ೧೯೯೧ರ ಜನಗಣತಿಯ ಪ್ರಕಾರ ಸಂಪೂರ್ಣವಾಗಿ ಗ್ರಾಮೀಣ ಪ್ರದೇಶದಿಂದ ಕೂಡಿದ ಪ್ರದೇಶವಾಗಿದೆ. ಇಡೀ ತಾಲೂಕು ಶೇ. ೮೫ರಷ್ಟು ಕೃಷಿಯನ್ನು ಅವಲಂಬಿಸಿದೆ ಎಂದು ಹೇಳಬಹುದು. ಇಂತಹ ವ್ಯವಸ್ಥೆಯಲ್ಲಿ ಗ್ರಾಮೀಣ ಪ್ರದೇಶದ ಜನರನ್ನು ಅದರಲ್ಲಿಯೂ ವಿಶೇಷವಾಗಿ ಬುಡಕಟ್ಟು ಮಹಿಳೆಯರನ್ನು ಅಭಿವೃದ್ಧಿ ಪಡಿಸಲು 'ಸ್ವ-ಶಕ್ತಿ' ಯೋಜನೆಯನ್ನು ೨೦೦೦ರಂದು ಪ್ರಾರಂಭಿಸಲಾಯಿತು.

ಈ ಯೋಜನೆಯು ಯಾವರೀತಿ ಇವರಲ್ಲಿ ಬದಲಾವಣೆ ತರುತ್ತದೆ ಎಂಬುದನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ. ಅಧ್ಯಯನ ಕ್ಷೇತ್ರವಾದ ಕೂಡ್ಲಿಗಿ ತಾಲೂಕಿಗೆ ಸಂಬಂಧ ಪಟ್ಟಂತೆ 'ಸ್ವ-ಶಕ್ತಿ' ಯೋಜನೆಯಲ್ಲಿ ಸ್ವ-ಸಹಾಯ ಸಂಘಗಳ ಬಗ್ಗೆ ಯಾವುದೇ ಅಧ್ಯಯನ ಇದುವರೆಗೆ ನಡೆದಿರುವುದಿಲ್ಲ. ಬುಡಕಟ್ಟು ಮಹಿಳೆಯರ ಆರ್ಥಿಕ ಸುಧಾರಣೆಯ ಬಗ್ಗೆ ಕನಿಷ್ಠ ಅಧ್ಯಯನ ಕೂಡ ನಡೆದಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಅಧ್ಯಯನದ ವಿವಿಧ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನಕ್ಕೆ ಬೇಕಾದ ಮಾಹಿತಿಯನ್ನು ಹಿಡಿದಿಡಲು ಪ್ರಯತ್ನಿಸಲಾಗಿದೆ. ಅಧ್ಯಯನದ ಸಮಯ ಹಾಗೂ ಸಮಯೇತರ ಇತಿಮಿತಿಗಳನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನದ ವಸ್ತುವಿಗೆ ಒಂದು ಕೇಂದ್ರವನ್ನು ನೀಡುವುದಕ್ಕೋಸ್ಕರ ಆಯ್ದ ಕ್ಷೇತ್ರಗಳನ್ನು ಪರಿಗಣಿಸಲಾಗಿದೆ. ಕೂಡ್ಲಿಗಿ ತಾಲೂಕಿನಲ್ಲಿ 'ಸ್ವ-ಶಕ್ತಿ' ಯೋಜನೆಯ ಮುಖಾಂತರ ರಚನೆಗೊಂಡ ಸ್ವ-ಸಹಾಯ ಸಂಘಗಳು ಒಟ್ಟು ೧೦೧ ಇರುವುದು ಕಂಡುಬರುತ್ತದೆ. ಅಧ್ಯಯನಕ್ಕೆ ೪೦ ಸ್ವ-ಸಹಾಯ ಸಂಘಗಳನ್ನು ಅಳವಡಿಸಿಕೊಂಡಿದ್ದು, ಇವುಗಳಲ್ಲಿ ೩೭ ಸ್ವ-ಸಹಾಯ ಸಂಘಗಳನ್ನು 'ಸ್ವ-ಶಕ್ತಿ' ಯೋಜನೆಯಲ್ಲಿ ಮತ್ತು ಉಳಿದ ೩ ಸ್ವ-ಸಹಾಯ ಸಂಘಗಳನ್ನು ಸ್ವರ್ಣಜಯಂತಿ ಶಹರಿ ಯೋಜನೆಯಲ್ಲಿ ಅಧ್ಯಯನಕ್ಕೆ ಅಳವಡಿಸಿಕೊಳ್ಳಲಾಗಿದೆ. ಈ ಯೋಜನೆಗಳ ಮುಖಾಂತರ ಸ್ಥಾಪನೆಗೊಂಡ ಸ್ವ-ಸಹಾಯ ಸಂಘಗಳನ್ನು ನಮ್ಮ ಅಧ್ಯಯನಕ್ಕೆ ಕಡಿತಗೊಳಿಸಿ ಇದರಲ್ಲಿ ಬುಡಕಟ್ಟು ಮಹಿಳೆಯರ ಆರ್ಥಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡಲು ಪ್ರಯತ್ನಿಸಲಾಗಿದೆ.

ಅಧ್ಯಾಯ ೨

ಬುಡಕಟ್ಟು ಮಹಿಳೆಯರ ಪರಂಪರಾಗತ ಆರ್ಥಿಕ ಹಿನ್ನೆಲೆ

ಸ್ವಾತಂತ್ರ್ಯ ಪೂರ್ವದಲ್ಲಿ ಮಹಿಳೆಯರ ಸ್ಥಿತಿಗತಿ

ಸ್ವಾತಂತ್ರ್ಯ ನಂತರ ಮಹಿಳೆಯರ ಸ್ಥಿತಿಗತಿ

೨. ಬುಡಕಟ್ಟು ಮಹಿಳೆಯರ ಪರಂಪರಾಗತ ಆರ್ಥಿಕ ಹಿನ್ನೆಲೆ

ಪ್ರಪಂಚದ ವಿವಿಧ ಪ್ರದೇಶಗಳಲ್ಲಿ ವಿವಿಧ ಮಾನವ ಜನಾಂಗಗಳಿಗೆ ಸೇರಿದ ಹಲವು ಬುಡಕಟ್ಟುಗಳು ಕಂಡುಬರುತ್ತವೆ. ಹಿಂದಿನ ಕಾಲದಲ್ಲಿ ಈ ಬುಡಕಟ್ಟು ಜನರು ನಾಗರಿಕ ಸಮಾಜದಿಂದ ದೂರವಿದ್ದು ದಟ್ಟವಾದ ಕಾಡು, ಆಳವಾದ ಕೊಳ್ಳ ಮೊದಲಾದ ದುರ್ಗಮ ಪ್ರದೇಶಗಳಲ್ಲಿ ವಾಸ ಮಾಡುತ್ತಿರುವುದನ್ನು ಹಿಂದಿನ ಕಾಲದಲ್ಲಿ ನೋಡಬಹುದಿತ್ತು. ಪ್ರಸ್ತುತ ಈ ಅಧ್ಯಾಯದಲ್ಲಿ ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರ ಮಹಿಳೆಯರ ಸ್ಥಿತಿಗತಿಯನ್ನು ತಿಳಿದುಕೊಳ್ಳುವ ಹಾಗೂ ಈ ಮಹಿಳೆಯರು ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯಾ ನಂತರ ಯಾವ ಯಾವ ಕ್ಷೇತ್ರಗಳಲ್ಲಿ ಪಾಲ್ಗೊಂಡಿದ್ದಾರೆ ಎಂಬುದನ್ನು ಅರಿಯುವ ಪ್ರಯತ್ನ ಮಾಡಲಾಗಿದೆ.

ಸ್ವಾತಂತ್ರ್ಯ ಪೂರ್ವದಲ್ಲಿ ಮಹಿಳೆಯರ ಸ್ಥಿತಿಗತಿ

ಸ್ವಾತಂತ್ರ್ಯ ಪೂರ್ವದಲ್ಲಿ ಮಹಿಳೆಯರು ತಮ್ಮ ದಿನನಿತ್ಯದ ಉಪಜೀವನಕ್ಕಾಗಿ ಬೇಟೆಯಾಡುವುದು ಮತ್ತು ಕಾಡಿನಲ್ಲಿ ಗೆಡ್ಡೆ ಗೆಣಸು ಇನ್ನು ಮುಂತಾದವುಗಳನ್ನು ಅಗೆಯುವಲ್ಲಿ ಗಂಡಸರಿಗೆ ಸಹಾಯವಾಗುತ್ತಿದ್ದರು. “ಸಾಕು ಪ್ರಾಣಿ ಮತ್ತು ಸಂಪತ್ತಿನ ಇತರ ರೂಪಗಳು ಕುಟುಂಬ ವ್ಯವಸ್ಥೆಯಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತಂದವು. ಜೀವನಾವಶ್ಯಕ ವಸ್ತುಗಳನ್ನು ಸಂಗ್ರಹಿಸುವುದು ಗಂಡಸರ ಕರ್ತವ್ಯವಾಗಿತ್ತು. ಆದುದರಿಂದ ಸಂಪತ್ತಿನ ಸಂಗ್ರಹ ಮತ್ತು ಒಡೆತನ ಅವನ ಕೈವಶವಾಯಿತು”[೧]. ಮಹಿಳೆಯರು ಆ ಸಂಪನ್ಮೂಲಗಳನ್ನು ಅನುಭವಿಸಲು ಮಾತ್ರ ಅಧಿಕಾರವಿತ್ತು. ಆದರೆ ಅದರ ಮೇಲೆ ಸಂಪೂರ್ಣ ಅಧಿಕಾರವಿರಲಿಲ್ಲ. ಹೀಗೆ ಆದಿ ಕಾಲದಲ್ಲಿ ಮಹಿಳೆಯರ ಸ್ಥಿತಿ ಇದ್ದಿತು. ನಂತರದ ಕಾಲಘಟ್ಟಗಳಲ್ಲಿ ಈ ಮಹಿಳೆಯು ಗಂಡಸಿನ ಗುಲಾಮಳಾಗಿ ಆರ್ಥಿಕ ಸೋಲನ್ನು ಅನುಭವಿಸಬೇಕಾಯಿತು. ಪ್ರಾಚೀನ ಕಾಲದಲ್ಲಿ ಬುಡಕಟ್ಟು ಸಮುದಾಯಕ್ಕೆ ನಾಗರೀಕತೆಯ ಬಗ್ಗೆ ಗೊತ್ತಿದ್ದಿಲ್ಲ. ಇವರು ಒಂದು ನಿರ್ದಿಷ್ಟ ಭೌಗೋಳಿಕ ನೆಲೆಯಲ್ಲಿ ವಾಸಿಸುತ್ತಿದ್ದು, ಒಂದೇ ಭಾಷೆ, ಧರ್ಮ, ಜೀವನ ರೀತಿ ನೀತಿಗಳಲ್ಲಿ ಒಂದೇ ಬಗೆಯಾದ ನಂಬಿಕೆಗಳನ್ನು, ತತ್ವಗಳನ್ನು ಅನುಸರಿಸಿಕೊಂಡು ಬರುತ್ತಿರುವುದನ್ನು ನಾವು ನೋಡಬಹುದಿತ್ತು. ಒಟ್ಟಾರೆ ಈ ಬುಡಕಟ್ಟುಗಳ ಜೀವನ ಬಹಳ ಕಷ್ಟದಿಂದ ಕೂಡಿದ್ದಿತು.

ಕಾರಣ ಇವರಿಗೆ ಬೇಸಾಯವೆಂಬುದು ತಿಳಿದಿರಲಿಲ್ಲ, ಬೇಟೆಗಾಗಿ ಅಲೆಮಾರಿಗಳಾಗಿ ಅಲೆಯುತ್ತಿದ್ದರು. ಇವರ ಜೊತೆಯಲ್ಲಿ ಈ ಬುಡಕಟ್ಟಿನ ಮಹಿಳೆಯರು ಸಹ ಗಂಡಂದಿರ ಹಿಂದೆ ಅಲೆದಾಟವನ್ನು ನಡೆಸಿ ಬಹಳ ಪರಿಶ್ರಮ ಪಡುತ್ತಿದ್ದರು ಎಂದು ಹೇಳಬಹುದು.

"ಪ್ರಾಚೀನ ಭಾರತದ ಮಹಿಳೆಯರ ಸ್ಥಿತಿಗತಿಗಳನ್ನು ಕುರಿತು ಚರ್ಚಿಸುವಾಗ ಎರಡು ವಿಷಯಗಳು ನಮಗೆ ಮುಖ್ಯವಾಗುತ್ತವೆ. ಆರ್ಯರು ಈ ದೇಶಕ್ಕೆ ಬರುವ ಮೊದಲು "ಭಾರತದಲ್ಲಿ ಹೆಣ್ಣಿನ ಈ ಪಾರಮ್ಯ ಮತ್ತು ಸ್ವಾತಂತ್ರ್ಯ. ಸುಮಾರು ಕ್ರಿ.ಪೂ. ೧೦೦೦ದ ವರೆಗೂ ಅಭಾದಿತವಾಗಿತ್ತು. ಆದರೆ ಅಲ್ಲಿಂದೀಚೆಗೆ ಅದರಲ್ಲಿಯೂ ಆರ್ಯರ ಆಗಮನದ ನಂತರ ಅದು ಬದಲಾಗತೊಡಗಿತು. ಮಹಿಳಾ ಅಧ್ಯಯನಾಕಾರ್ತಿಯೊಬ್ಬರ ಮಾತಿನಲ್ಲಿಯೇ ಹೇಳುವುದಾದರೆ. ಕ್ರಿ.ಪೂ. ೧೦೦೦ದ ವೇಳೆಗೆ ಆರ್ಯರು ಭಾರತದಲ್ಲಿ ತಮ್ಮ ಭೂಸ್ವಾಮ್ಯವನ್ನು ವಿಸ್ತರಿಸುತ್ತಾ ಹೋದಾಗೆಲ್ಲ ಇಲ್ಲಿನ ಮೂಲನಿವಾಸಿಗಳಾದ ದ್ರಾವಿಡರಿಗೂ ಮತ್ತು ಆರ್ಯರಿಗೂ ಘರ್ಷಣೆಗಳು ಹೆಚ್ಚುತ್ತಾ ಹೋದವಷ್ಟೇ ಅಲ್ಲ, ಆರ್ಯ ಸಂಸ್ಕೃತಿಯ ಪ್ರಾಬಲ್ಯವೂ ಬೆಳೆಯುತ್ತಾ ಹೋಯಿತು. ಭಾರತೀಯ ಸಮಾಜದ ವಿಭಜನೆಗೆ ಹಾಗೂ ಮಾತೃಪ್ರಧಾನವಾದಂಥ ಮೌಲ್ಯಗಳ ಮತ್ತು ಆಚರಣೆಗಳ ನಶಿಸುವಿಕೆ ಈ ಯುಗದಲ್ಲಿ ಪ್ರಾರಂಭವಾಗಿ ಆಗ ಆರಂಭವಾದ ಲಿಂಗವ್ಯವಸ್ಥೆಯ ಅಸಮಾನತೆ ಇಂದಿಗೂ ಹೊಸ ಹೊಸ ರೂಪಗಳನ್ನು ತಾಳಿ ಮುಂದುವರೆದುಕೊಂಡು ಬಂದಿದೆ. ಒಂದೆಡೆ ಕುಟುಂಬದ ಒಳಗೆ, ಮತ್ತೊಂದಡೆ ಕುಟುಂಬದ ಹೊರಗೆ ಮಹಿಳೆಯರ ಸ್ಥಾನ ಕ್ಷೀಣಿಸುತ್ತಾ ಹೋಯಿತು.

ನೇಗಿಲು ಪ್ರಧಾನ ಕೃಷಿ. ವ್ಯವಸ್ಥೆಯಿಂದ ಸ್ತ್ರೀಯರನ್ನು ದೂರವಿಟ್ಟಿದ್ದು. ಪುರುಷ ದಬ್ಬಾಳಿಕೆ ಹಾಗೂ ಶೋಷಣೆ ಹೆಚ್ಚಾಗಿ ಮಹಿಳೆಯರನ್ನು ಗೃಹ ಬಂದಿಯನ್ನಾಗಿಸಿದ್ದು, ಕೇವಲ ಮಕ್ಕಳನ್ನು ಹೇರುವ ಯಂತ್ರವನ್ನಾಗಿ ಪರಿವರ್ತಿಸಿದ್ದಿತು. ಈ ಎಲ್ಲ ಪ್ರವೃತ್ತಿಗಳೂ ಆರ್ಯ ಸಂಸ್ಕೃತಿಯ ಸ್ತ್ರೀ ವಿರೋಧಿ ಮೌಲ್ಯಗಳನ್ನು ಸಮಾಜದಲ್ಲಿ ಸ್ಥಾಪಿಸಿ ದ್ರಾವಿಡ ಸಂಸ್ಕೃತಿಯಲ್ಲಿ ಕಂಡು ಬರುತ್ತಿದ್ದ ಸ್ತ್ರೀ-ಪುರುಷ ಸಮಾನತೆಯನ್ನು ಗೌರವಿಸುತ್ತಿದ್ದ ಮೌಲ್ಯಗಳ ನಾಶಕ್ಕೆ ಕಾರಣವಾಯಿತು. ಕ್ರಿ.ಪೂ. ೬ನೇ ಶತಮಾನದ ನಂತರದ ಕಾಲವನ್ನು ಸ್ಮೃತಿಗಳ ಕಾಲವೆಂದು ಗುರುತಿಸುತ್ತಾರೆ. ಧರ್ಮಶಾಸ್ತ್ರ ರಚನೆಯು ಇದಕ್ಕಿಂತಲೂ ಮುಂಚೆಯೇ ಪ್ರಾರಂಭಗೊಂಡಿದ್ದರೂ. ಜನರ ನಡೆನುಡಿಗಳನ್ನು ಆಚಾರ-ವಿಚಾರಗಳನ್ನು ನಿಯಂತ್ರಿಸುವ ಅದರ ಪ್ರಾಮುಖ್ಯತೆ ಈ ಕಾಲದಲ್ಲೇ ವ್ಯಕ್ತವಾದದ್ದು. ಧರ್ಮಶಾಸ್ತ್ರಗಳು ಮೂಲಭೂತವಾಗಿ ವೇದಗಳನ್ನೇ ಆಧರಿಸಿದ್ದರೂ ಅನೇಕ ಹೊಸ ವಿಚಾರಗಳು ಈ ಧರ್ಮಶಾಸ್ತ್ರಗಳಲ್ಲಿ ಪ್ರಥಮ ಬಾರಿಗೆ ವ್ಯಕ್ತವಾದವು. ಇದೇ ಧರ್ಮಶಾಸ್ತ್ರಗಳು ಹಿಂದೂ ಜನಜೀವನದ ನಿರ್ದೇಶನದ ಸೂತ್ರಗಳಾಗಿ ಇಂದಿಗೂ ಉಳಿದುಕೊಂಡಿರುವುದು ಗಮನಾರ್ಹ. ಮನುಸಂಹಿತೆಯನ್ನು ಧರ್ಮಶಾಸ್ತ್ರಗಳ ಸಮೂಹದಲ್ಲಿ ಬಹು ಪ್ರಧಾನವಾದ ಹಾಗೂ ಪ್ರಬಲವಾದ ನೀತಿಶಾಸ್ತ್ರವಾಗಿ ನಾವು ಕಾಣುತ್ತೇವೆ. ಇದು ಪ್ರಭಾವಿ ಧರ್ಮಶಾಸ್ತ್ರ ಗ್ರಂಥವಾದುದರಿಂದ ನಂತರದ ಶಾಸ್ತ್ರಗ್ರಂಥಗಳೆಲ್ಲವೂ ಇದರ

ಶೈಲಿಯಲ್ಲಿಯೇ ಮೂಡಿ ಬಂದಿವೆ. ಮಹಿಳೆಯರ ಚಾರಿತ್ರ್ಯದ ಬಗ್ಗೆ ಹೆಚ್ಚು ಒತ್ತುಕೊಟ್ಟ ಕಾಲವಿದು. ಪಾತಿವ್ರತ್ಯವನ್ನು ಹೆಣ್ಣಿನ ಅತಿ ಉತ್ತಮವಾದ, ಶ್ರೇಷ್ಠವಾದ ಮೌಲ್ಯವನ್ನಾಗಿಸಿದ ಮನುಸಂಹಿತೆ ನೈತಿಕತೆಯನ್ನು ಕುರಿತು ದ್ವಿಮುಖ ಮೌಲ್ಯಗಳ ಪ್ರತಿಪಾದನೆಗೆ ಪ್ರಮುಖ ಸಾಧನವಾಯಿತು. ಏಕ ಸಂಗಾತಿ ವಿವಾಹ ಪದ್ಧತಿಗೆ ಧರ್ಮಶಾಸ್ತ್ರ ಒತ್ತು ನೀಡಿತಾದರೂ ಅದನ್ನು ಸ್ತ್ರೀಯರಿಗಷ್ಟೇ ಅನ್ವಯಿಸುವಂತಾಯಿತೇ ಹೊರತು ಪುರುಷರು ಅದಕ್ಕೆ ಬದ್ಧರಾಗಲಿಲ್ಲ. ಪುರುಷರಿಗೆಂದೂ ಏಕ ಪತ್ನಿತ್ವದ ವ್ಯಕ್ತಿತ್ವದ ಅವಿಭಾಜ್ಯ ಅಂಗವಾಗಿಸುವ ಸಾಮಾಜೀಕರಣಕ್ಕೆ ಒತ್ತು ಕೊಡಲಿಲ್ಲ. ಇದರ ಜೊತೆಗೆ ಸ್ತ್ರೀಯರಿಗೆ ವಿದ್ಯಾಭ್ಯಾಸದ ಅವಶ್ಯವನ್ನು ನಿರಾಕರಿಸಿದ್ದು, ಬಾಲ್ಯವಿವಾಹ, ವಿಧವಾ ವಿವಾಹಕ್ಕೆ ನಕಾರ ಇವೆ ಮುಂತಾದ ಸಾಮಾಜಿಕ ಪಿಡುಗುಗಳು ಹೆಚ್ಚಾಗಿ ಸ್ತ್ರೀಯರ ಸ್ಥಾನ ಇಳಿಮುಖವಾಗುತ್ತ ಹೋಯಿತು. ಮನುಧರ್ಮಶಾಸ್ತ್ರದ ಪ್ರಕಾರ ವಿವಾಹ ಒಂದು ಪವಿತ್ರ ಬಂಧನ. ಆದರೆ ಆ ಬಂಧನದ ಅಂಶ ಸ್ತ್ರೀಯರಿಗಷ್ಟೇ ಅನ್ವಯಿಸುವಂತಾಯಿತು. ಸ್ತ್ರೀಯು ಪತಿಯನ್ನು ಪರಮ ದೈವವೆಂದು ಸ್ವೀಕರಿಸಬೇಕೆಂಬ ನಿಯಮವನ್ನು ಹೇರಿ ಆಕೆಯ ಮಾನಸಿಕ ಹಾಗೂ ದೈಹಿಕ ಸ್ವಾತಂತ್ರ್ಯಗಳಿಗೆ ಅತಿಯಾದ ನಿರ್ಬಂಧಗಳನ್ನು ಹೇರಲಾಯಿತು. ಆಕೆ ಪುರುಷನ ಸೊತ್ತು. ಪರಾಧೀನ ಹಾಗೂ ಒಂದು ಸ್ವತಂತ್ರ ವ್ಯಕ್ತಿತ್ವವನ್ನು ಹೊಂದಲು ಅನರ್ಹಳು ಎಂಬ ಮೌಲ್ಯಗಳು ಜನಜನಿತವಾಗಿ ಹೆಣ್ಣಾಗಿ ಜನಿಸುವುದೇ ಒಂದು ದೊಡ್ಡ ಕುತ್ತಾಗಿ ಪರಿಗಣಿಸುವಂತಾಯಿತು. ಹೆಣ್ಣು ಶಿಶುವಿನ ಜನನ ದುಃಖ ಸೂಚಕ ಸಂದರ್ಭವಾಗಿ ಪರಿಣಮಿಸಿ ಬೇಡದ ಹೆಣ್ಣು ಸಂತಾನದ ನಾಶಕ್ಕಾಗಿ ಅನೇಕ ಪೋಷಕರು ಮುಂದಾದರು (ಡಾ. ಆರ್.ಇಂದಿರಾ : ಮಹಿಳಾ ಅಧ್ಯಯನ ಸಂಚಿಕೆ-೨, ಸಂಪುಟ೧, ಕನ್ನಡ ವಿಶ್ವವಿದ್ಯಾಲಯ, ಹಂಪಿ).

ಈ ಹಿನ್ನೆಲೆಯಲ್ಲಿ ಪ್ರಗತಿಶೀಲ ಸಮಾಜ ಸುಧಾರಕ ರಾಜರಾಮ ಮೋಹನರಾಯ್, ಸುಧಾರಣಾವಾದಿಗಳಾಗಿದ್ದ ಕೆಲವು ಬ್ರಿಟಿಷ್ ಅಧಿಕಾರಿಗಳು ಈ ಅನಿಷ್ಟ ಸಂಪ್ರದಾಯಗಳ ವಿರುದ್ಧ ಸಮರ ಸಾರಿದರು.

ಸಮಾಜ ಸುಧಾರಕರಾದ ರಾಜರಾಮ ಮೋಹನರಾಯ್, ಮಹಾತ್ಮಗಾಂಧಿ, ಕೇಶವ ಚಂದ್ರ ಸೇನರು ಈ ಸಾಮಾಜಿಕ ಪಿಡುಗುಗಳ ವಿರುದ್ಧ ಕ್ರಾಂತಿಯ ಕಹಳೆ ಮೊಳಗಿಸಿ ಅದನ್ನು ತಡೆಗಟ್ಟಲು ಬಹುಮಟ್ಟಿಗೆ ಯಶಸ್ವಿಯಾದರು. ೧೯ನೆಯ ಶತಮಾನದ ಮಧ್ಯಭಾಗದ ವೇಳೆಯಲ್ಲಿ ಬ್ರಿಟೀಷರ ವಿರುದ್ಧ ಹೋರಾಡುವಾಗ ಮಹಾತ್ಮಾ ಗಾಂಧಿಯವರು ಸ್ತ್ರೀಯರಿಗೆ ಕೊಟ್ಟ ಪ್ರಾಶಸ್ತ್ಯ, ರಾಜಾರಾಮ ಮೋಹನರಾಯರಂಥವರು ಸತಿ ಪದ್ಧತಿಯನ್ನು ಹೋಗಲಾಡಿಸಲು ನಡೆಸಿದ ಹೋರಾಟ, ಮೆಕಾಲೆಯೆಂಬ ಬ್ರಿಟಾಷ್ ಅಧಿಕಾರಿಯ ಸಹಕಾರದಿಂದ ಆರ್ಯ ಸಮಾಜ, ಬ್ರಹ್ಮ ಸಮಾಜಗಳು ಹೆಣ್ಣು ಮಕ್ಕಳ ಅದರಲ್ಲಿಯೂ ಹಿಂದುಳಿದ ಬುಡಕಟ್ಟು ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಲಾಯಿತು.

ಒಟ್ಟಿನಲ್ಲಿ "ಬ್ರಿಟೀಷ್ ಇಂಡಿಯಾದ ಎಲ್ಲಾ ಭಾಗಗಳಲ್ಲೂ ಸುಧಾರಣಾವಾದಿಗಳ ಗುಂಪುಗಳು ಹಬ್ಬಿ ಹರಡಿದ್ದವು. ಇವರ ಗಮನವೆಲ್ಲಾ ಹೆಣ್ಣು ಶಿಶುಗಳ ಹತ್ಯೆ, ಬಹು ಪತ್ನಿತ್ವ, ಸ್ತ್ರೀ ಶಿಕ್ಷಣಕ್ಕಿದ್ದ ನಿರ್ಬಂಧ, ದೇವದಾಸಿ ಪದ್ಧತಿ ನಿರ್ಮೂಲನೆ, ಪುರುಷ ಪ್ರಧಾನ ಒಟ್ಟು ಕುಟುಂಬ ಇಂತಹ ಸಂಗತಿಗಳನ್ನೇಸುತ್ತಿತ್ತು. ಸುತ್ತುತ್ತಿತ್ತು. ನಂತರ ಕ್ರಮೇಣವಾಗಿ ಭಾರತ ಮಟ್ಟದ ಸುಧಾರಣಾವಾದಿ ಸಂಘ ಸಂಸ್ಥೆಗಳು ಅಸ್ತಿತ್ವಕ್ಕೆ ಬರತೊಡಗಿದವು"[೨]. ತದನಂತರ ಅಸಂಖ್ಯಾತ ಸ್ತ್ರೀಯರಿಗೆ ಸ್ಫೂರ್ತಿ ಪ್ರೇರಣೆ ಈ ಸುಧಾರಣಾವಾದಿಗಳು ನೀಡಿದರು.

ಭಾರತದ ಮಹಿಳೆಯರು ಅತ್ಯಂತ ಧೈರ್ಯ ಸಾಹಸದಿಂದ ಮೆರೆದಿರುವ ಸಾಹಸ ಕಥೆಗಳು ನಮ್ಮ ಇತಿಹಾಸ ಪೂರ್ವ, ಸ್ವಾತಂತ್ರ್ಯ ಪೂರ್ವದಲ್ಲಿ ಬಹಳಷ್ಟಿವೆ. ಆಗ ಅಷ್ಟೇ ಅಲ್ಲ ಬ್ರಿಟೀಷರನ್ನು ಭಾರತದಿಂದ ಹೊರದೂಡಲು ಅವರ ವಿರುದ್ಧ ಹೋರಾಡಿ ಭಾರತದ ಸ್ವತಂತ್ರ ಸಂಗ್ರಾಮದಲ್ಲಿ ಮಹಾತ್ಮ ಗಾಂಧೀಜಿಯವರ ಜೊತೆ ಕೈ ಜೋಡಿಸಿರುವುದನ್ನು ನಾವು ಇತಿಹಾಸವನ್ನು ಓದಿ ತಿಳಿದುಕೊಂಡಿದ್ದೇವೆ. ಹಾಗೆಯೇ ಇವರ ಸಾಹಸದ ಕಥೆಗಳನ್ನು ಸಹ ಇತಿಹಾಸ ಪುಟ ಪುಟಗಳಲ್ಲಿ ನೋಡಬಹುದು.

ಸ್ವಾತಂತ್ರ್ಯ ಹೋರಾಟದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ, ಒನಕೆ ಓಬವ್ವ, ರಾಣಿ ಅಬ್ಬಕ್ಕ ದೇವಿ, ಬೆಳವಡಿ ಮಲ್ಲಮ್ಮ, ಇನ್ನು ಮುಂತಾದ ವೀರ ವನಿತೆಯರ ದೊಡ್ಡದೊಂದು ಪಟ್ಟಿಯೇ ಇದೆ. ಸ್ವಾತಂತ್ರ್ಯ ಪೂರ್ವದಲ್ಲಿ ಇವರೆಲ್ಲ ಬ್ರಿಟೀಷರೊಡನೆ ಮತ್ತು ಇತರರೊಡನೆ ಹೋರಾಡಿ ವೀರಮರಣವನ್ನು ಅಪ್ಪಿದರು.

೧೯ನೇ ಶತಮಾನದ ನಂತರ ಮಹಿಳೆಯರು ಬದುಕುವ ಮಾದರಿಗಳು ಬದಲಾಗತೊಡಗಿದವು. ಇವರು ತಮ್ಮ ವ್ಯಕ್ತಿತ್ವದ ಬೆಳವಣಿಗೆಯನ್ನು ಕಂಡುಕೊಂಡು ಹಲವಾರು ಕ್ಷೇತ್ರಗಳಲ್ಲಿ ಉತ್ತಮ ಭಾಷಣಕಾರರಾಗಿ, ವಿದ್ಯಾವಂತರಾಗಿ, ಚಲನಶೀಲರಾಗಿ ೧೯ನೇ ಶತಮಾನದ ಕೊನೆಯಲ್ಲಿ ಈ ಮಹಿಳೆಯರು ನಾಗರೀಕತೆಯಿಂದಾಗಿ ನಗರೀಕರಣಗಳು ಹುಟ್ಟಿಕೊಂಡು ಮನೆಯಲ್ಲಿ ಸ್ವಂತ ಕೆಲಸ ಕಾರ್ಯಗಳು ಈ ಬುಡಕಟ್ಟು ಮಹಿಳೆಯರಿಂದ ಸ್ಥಾಪನೆಗೊಂಡವು. ಭಾರತದ ಅನೇಕ ಮಹಿಳಾಮಣಿಗಳು ಆಧುನಿಕತೆಯನ್ನು ಕಂಡುಕೊಳ್ಳುವಲ್ಲಿ ಪ್ರಯತ್ನ ಪಟ್ಟರು. ೧೮ನೇ ಶತಮಾನದಲ್ಲಿ ಇಂಗ್ಲೆಂಡ್‌ನಲ್ಲಿ ಕೈಗಾರಿಕಾ ಕ್ರಾಂತಿ ಸ್ಥಾಪನೆಗೊಂಡು ಇಲ್ಲಿನ ಮಹಿಳೆಯರು ಹಲವಾರು ವೃತ್ತಿಗಳಲ್ಲಿ, ಸಾರ್ವಜನಿಕ ವಲಯಗಳಲ್ಲಿ ಸ್ವಾತಂತ್ರ್ಯ ಪೂರ್ವದ ೧೯ನೇ ಶತಮಾನದ ಬ್ರಿಟೀಷ್ ಇಂಡಿಯಾದಲ್ಲಿ ಮಹಿಳೆಯರ ವಾಸ್ತವ ಬದುಕಿನ ಮೇಲೆ ಸ್ವಲ್ಪ ಬದಲಾವಣೆಗಳಾದವು. ಆದರೂ ಹೇಳಿಕೊಳ್ಳುವಷ್ಟು ಬದಲಾವಣೆಗಳೇನು ಬಂದಿರಲಿಲ್ಲ. ಬ್ರಿಟೀಷ್ ಇಂಡಿಯಾದ "ಅತ್ಯಂತ ಪ್ರಭಾವಶಾಲಿ ಗ್ರಂಥವೆನಿಸಿದ ಬ್ರಿಟೀಷ್ ಇಂಡಿಯಾ ಚರಿತ್ರೆಯನ್ನು ಬರೆದ 'ಜೇಮ್ಸ್ ಮಿಲ್' ಒಂದು ಸಮಾಜದ ಅಭಿವೃದ್ಧಿಯನ್ನು ಅಲ್ಲಿನ ಮಹಿಳೆಯರ ಸ್ಥಿತಿಗತಿಗಳನ್ನು ಲಕ್ಷಿಸಿ ಗುರುತಿಸಬಹುದು ಎಂದು ಹೇಳಿದ. ಇದರ ಹಿಂದಿರುವ ತರ್ಕ ಸರಳವಾದುದು"[೩].

"ಮುಂದುವರೆದ ಸಮಾಜಗಳನ್ನು ವರ್ಣಿಸುತ್ತಾ ಮಿಲ್ ದುರ್ಬಲ ಮಹಿಳೆಯರ ಪರಿಸ್ಥಿತಿ ದಿನದಿನಕ್ಕೆ ಉತ್ತಮಗೊಳ್ಳುತ್ತಾ, ಕೊನೆಗೊಮ್ಮೆ ಅವರು ಪುರುಷರಿಗೆ ಸಮಾನರೇ ಎನಿಸುವಂತಾಗಿ, ತಮ್ಮ ಇಚ್ಛೆ ಹಾಗೂ ಅನುಕೂಲಗಳಿಗೆ ತಕ್ಕ ಸ್ಥಾನಗಳನ್ನು ಗಳಿಸುವಂತಾಗುತ್ತಾರೆ ಎಂದು ಹೇಳುತ್ತಾನೆ"[೪]. ತದನಂತರ ಮಹಾತ್ಮ ಗಾಂಧಿಯವರು ಸಹ ಮೊದಲು ಗ್ರಾಮಗಳು ಅಭಿವೃದ್ಧಿಯಾಗಬೇಕು ಇದರ ಜೊತೆಗೆ ಬುಡಕಟ್ಟು ಗ್ರಾಮೀಣ ಮಹಿಳೆಯರು ಅಭಿವೃದ್ಧಿ ಹೊಂದಿದರೆ ಮಾತ್ರ ಈ ದೇಶ ಅಭಿವೃದ್ಧಿಯಾಗುವಲ್ಲಿ ಎರಡು ಮಾತಿಲ್ಲ ಎಂದು ಹೇಳಿದರು.

ಹತ್ತೊಂಬತ್ತನೇ ಶತಮಾನದ ಅಂತ್ಯ ಹಾಗೂ ಇಪ್ಪತ್ತನೆ ಶತಮಾನದ ಆಧಿ ಭಾಗದಲ್ಲಿ ಭಾರತ ದೇಶದಲ್ಲಿ ಎಲ್ಲಾ ಕಡೆಗೂ ವೇಶ್ಯಾವೃತ್ತಿ ಆವರಿಸಿಕೊಂಡಿತ್ತು. ಈ ಪಿಡುಗನ್ನು ತಡೆಯಲು ಹಲವು ಸಮಾಜ ಸುಧಾರಕರು ಶ್ರಮಪಟ್ಟರು. ಗಾಂಧೀಜಿಯವರು ಸಹ ಈ ದೇವದಾಸಿ ಪದ್ಧತಿಯ ವಿರುದ್ಧ ಹೋರಾಡಿ ಇದನ್ನು ನಿರ್ನಾಮ ಮಾಡಲು ಬಹಳ ಪ್ರಯತ್ನ ಪಟ್ಟರು. ದೇವದಾಸಿ ಹಾಗೂ ವೇಶ್ಯಾವೃತ್ತಿಗೆ ಕಾರಣ ಬಡತನ ಎಂಬುದು ಒಂದು ಕಡೆ ಇದ್ದರೆ ಇನ್ನೊಂದು ಕಾರಣ ಭ್ರಷ್ಟ ವ್ಯಾಪಾರಿಗಳು ಮತ್ತು ಕ್ರೂರ ಜಮೀನ್ದಾರರು ಎಂದು ಹೇಳಬಹುದು.

ಇವರು ಇಂಥ ಕೆಟ್ಟ ಪದ್ಧತಿಗೆ ತೊಡಗಲು ಕಾರಣವೆಂದರೆ ಸಾಕಷ್ಟು ಆರ್ಥಿಕ ಭದ್ರತೆ ಹಾಗೂ ಸಾಮಾಜಿಕ ನೆಲೆ ಇಲ್ಲದಿರುವುದು ಈ ಕಾರಣವನ್ನು ಮುಂದಿಟ್ಟುಕೊಂಡು ಇವರ ಸ್ಥಿತಿಯನ್ನು ಪುರುಷ ವರ್ಗ ಅದರಲ್ಲಿಯೂ ದೊಡ್ಡ ವ್ಯಾಪಾರಿಗಳು, ಜಮೀನ್ದಾರರು ದುರುಪಯೋಗ ಪಡಿಸಿಕೊಳ್ಳುತ್ತಿತ್ತು. ಈ ಸಾಮಾಜಿಕ ಪಿಡುಗುಗಳ ಬಗೆಗೆ ಮಾನವೀಯ ಅನುಕಂಪವನ್ನು ಗಾಂಧೀಜಿ ಹೊಂದಿದ್ದರು. ಹಾಗೆಯೇ ಇದರ ಪರಿಹಾರವು ಗಾಂಧೀಜಿಯವರಲ್ಲಿ ಇರಲಿಲ್ಲ. ಆದರೂ ಇದನ್ನು ತಡೆಯಲು ಪ್ರಯತ್ನಿಸಿದರು.

ಪ್ರಸ್ತುತ ಸಮಾಜದಲ್ಲಿ ಸಾಮಾನ್ಯವಾಗಿ ಕೆಳಜಾತಿ ಹಾಗೂ ಬುಡಕಟ್ಟು ಮಹಿಳೆಯರ ಮರ್ಗಗಳ ನೆಲೆಯಲ್ಲಿಯೇ ಈ ದೇವದಾಸಿ ಹಾಗೂ ವೇಶ್ಯಾವೃತ್ತಿ ಉಳಿದುಕೊಂಡಿರುವುದನ್ನು ನಮ್ಮ ಪ್ರಸಕ್ತ ಅಧ್ಯಯನದಲ್ಲಿ ಕಾಣಬಹುದು. ಮೊದಲು ಸ್ವಾತಂತ್ರ್ಯ ಪೂರ್ವದಲ್ಲಿ ಮೇಲು ವರ್ಗದ ಮಹಿಳೆಯರಲ್ಲಿ ಕೂಡ ದೇವದಾಸಿ ಪದ್ಧತಿ ಇದ್ದುದ್ದು ಕಂಡುಬರುತ್ತದೆ. ನಂತರ ಕಾಲಬದಲಾದಂತೆ ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ತೊಡಗಿಕೊಂಡು ಇವರಲ್ಲಿ ಈ ಪದ್ಧತಿ ಸಂಪೂರ್ಣವಾಗಿ ತೊಲಗಿಹೋಯಿತು.

ಈ ಅನಿಷ್ಟ ಸಂಪ್ರದಾಯಗಳ ಸಮಸ್ಯೆಗಳ "ಪರಿಹಾರವು ಬದುಕುವ ಪ್ರಾಥಮಿಕ ಅವಶ್ಯಕತೆಗಳಲ್ಲಿ ಸ್ವಾವಲಂಬಿಯಾಗುವುದನ್ನು ಅವಲಂಬಿಸಿವೆ ಎಂಬ ಅರಿವು ಗಾಂಧೀಜಿಗೆ ಇತ್ತು. ಈ ಕಾರಣಕ್ಕಾಗಿ ಗ್ರಾಮೀಣ ಬಡ ಮಹಿಳೆಯರ ಬದುಕು ಸ್ವಾವಲಂಬಿತವಾಗುವಂತೆ ಖಾದಿ ಚಳುವಳಿಯನ್ನು ರೂಪಿಸಿದ ಗಾಂಧೀಜಿ ವೇಶ್ಯಾ ಸಮಸ್ಯೆಯ ಪರಿಹಾರಕ್ಕೂ ಸ್ವಾವಲಂಬಿ ಜೀವನ ವಿಧಾನದ ಮಾದರಿಯನ್ನೇ

ಉತ್ತರವಾಗಿ ಇಟ್ಟರು”[೫]. ಇನ್ನು ಹಲವಾರು ಮಹಿಳೆಯರ ಸ್ಥಿತಿಗತಿಗಳಲ್ಲಿ ಸ್ವಲ್ಪ ಬದಲಾವಣೆಗಳು ಕಂಡಿದ್ದರಿಂದ ಇವರ ವ್ಯಕ್ತಿತ್ವವು ಇಡೀ ಪ್ರಪಂಚಕ್ಕೆ ತಾವು ಯಾರಿಗಿಂತ ಕಡಿಮೆ ಇಲ್ಲ ಎಂಬುದನ್ನು ಸಾಧಿಸುವಲ್ಲಿ ಸಮರ್ಥರಿದ್ದಾರೆ. ಹಾಗೆಯೇ “ಗಾಂಧೀಜಿಯವರು ಸ್ವಾತಂತ್ರ್ಯ ಚಳುವಳಿಯಲ್ಲಿ ನಾಡಿನ ಮಹಿಳೆಯರನ್ನು ತೊಡಗಿಸಿದ್ದರ ಪರಿಣಾಮದಿಂದಾಗಿ ಭಾರತದ ಮಹಿಳೆಯರ ಸ್ಥಿತಿಗತಿಗಳಲ್ಲಿ ಆದ ಬದಲಾವಣೆಗಳೂ ಕೂಡ ಗಮನಾರ್ಹ”[೬].

ಸ್ವಾತಂತ್ರ್ಯ ನಂತರ ಬುಡಕಟ್ಟು ಮಹಿಳೆಯರ ಸ್ಥಿತಿಗತಿ

ಆಧುನಿಕ ಜಗತ್ತಿನಲ್ಲಿ ಬುಡಕಟ್ಟು ಮಹಿಳೆಯರು ಮನೆಯಿಂದ ಹೊರಬಂದು ಕಾರ್ಖಾನೆಗಳಲ್ಲಿ, ಕೃಷಿರಂಗಗಳಲ್ಲಿ ಹಾಗೂ ಕೈಗಾರಿಕೆಗಳಲ್ಲಿ ದುಡಿಯುತ್ತಿರುವುದನ್ನು ಕಾಣಬಹುದು. ಸ್ವಾತಂತ್ರ್ಯ ಪೂರ್ವದಲ್ಲಿ ಕೇವಲ ನಾಲ್ಕು ಗೋಡೆಗಳ ಮಧ್ಯೆಯೇ ಅವರ ಪ್ರಪಂಚವಾಗಿತ್ತು. ಭಾರತದಂತಹ ಸಾಂಪ್ರದಾಯಿಕ ದೇಶದಲ್ಲಿ ಮಹಿಳೆಯರ ಸಮಾನತೆಗೆ ಅವಕಾಶವೇ ಇರಲಿಲ್ಲ. ಹಲವು ಶತಮಾನಗಳವರೆಗೆ ಮಹಿಳೆಯರು ಗಂಡನೊಂದಿಗೆ ಹೊರಗಡೆ ಹೋಗುವಂತೆ ಇರಲಿಲ್ಲ ಎಂಬುದನ್ನು ಹಿಂದಿನ ಕಾಲದಲ್ಲಿ ನೋಡಬಹುದಿತ್ತು.

ತದನಂತರ ಈ ಮಹಿಳೆಯರ ಜೀವನ ಬಹಳ ಕಷ್ಟಮಯದಿಂದ ಕೂಡಿದ್ದಿತು. ಆದರೆ ಈಗ ಸಂಪೂರ್ಣವಾಗಿ ಕಾಲಬದಲಾಗಿ ಮಹಿಳೆಯರು ಧೈರ್ಯದಿಂದ, ಛಲದಿಂದ ಹೋರಾಡಿ ನ್ಯಾಯ ದೊರಕಿಸಿಕೊಂಡಿದ್ದಾರೆ. ವಾಸ್ತವ ಬದುಕಿನಲ್ಲಿ ಮಹಿಳೆಯರ ಸಂಖ್ಯೆ ಸಾಕಷ್ಟು ದೊಡ್ಡದೇ ಇದೆ ಎಂದು ಹೇಳಿದರೆ ತಪ್ಪಾಗಲಾರದು. “೧೯೪೭ರ ಆಗಸ್ಟ್ ೧೫ರಂದು ಭಾರತವು ಬ್ರಿಟೀಷರ ದಾಸ್ಯದಿಂದ ಬಿಡುಗಡೆ ಹೊಂದಿತು. ಆದರೂ ಸಕಲ ಭಾರತೀಯರೂ ಸ್ವಾತಂತ್ರ್ಯಾ ನಂತರದ ಕೆಲವು ತಿಂಗಳುಗಳನ್ನು ತುಂಬಾ ದುರ್ಭರ ರೀತಿಯಲ್ಲಿ ಕಳೆದರು”[೭].

ದೇಶವು ಅತ್ಯಂತ ಕ್ರೂರ ಹಾಗೂ ದುಃಖಕರ ದುರಂತಗಳಿಗೆ ತನ್ನನ್ನು ಆಗ ಒಡ್ಡಿಕೊಂಡಿತು. ಒಂದು ಕಡೆ ದೇಶ ವಿಭಜನೆಗೊಂಡಿದ್ದು ಕಾರಣವಾದರೆ, ಇನ್ನೊಂದು ಮಹಿಳೆಯರಿಗೆ ಅದರಲ್ಲಿಯೂ ಗ್ರಾಮೀಣ ಪ್ರದೇಶದ ಬುಡಕಟ್ಟು ಮಹಿಳೆಯರಿಗೆ ಪ್ರೇರಣೆ ನೀಡುತ್ತಿದ್ದ ಗಾಂಧೀಜಿಯವರು ಒಬ್ಬ ಹಂತಕನ ಗುಂಡಿಗೆ ಬಲಿಯಾದರು. ಗಾಂಧೀಜಿಯವರು ಹಿಂದುಳಿದ ಜಾತಿಗಳ ಮಹಿಳೆಯರಿಗೆ ಪ್ರೇರಣೆ ನೀಡುತ್ತಿದ್ದವರು. ಅವರ ಹತ್ಯೆಯಿಂದ ಬುಡಕಟ್ಟು ಮಹಿಳೆಯರ ಕನಸುಗಳು ನುಚ್ಚು ನೂರಾದವು ಎಂದು ಹೇಳಬಹುದು.

ಭಾರತದಲ್ಲಿ ಸ್ವಾತಂತ್ರ್ಯ ನಂತರ ಎಲ್ಲಾ ಸಮುದಾಯದ ಭಾರತೀಯ ಮಹಿಳೆಯರು ಶಿಕ್ಷಣವನ್ನು ಪಡೆದುಕೊಂಡು ವಿದ್ಯಾವಂತರಾಗತೊಡಗಿದರು ಮತ್ತು ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುವಷ್ಟು ಸಮರ್ಥರಾಗಿ ಆಧುನಿಕ ಆರ್ಥಿಕತೆಯೊಂದಿಗೆ ಹಿಂದೂಳಿದ ಮಹಿಳೆಯರಿಗೆ ಸಮಾನ ಅವಕಾಶಗಳು ಅಲ್ಪ ಸ್ವಲ್ಪ ದೊರೆಯತೊಡಗಿದವು.

ಬುಡಕಟ್ಟು ಮಹಿಳೆಯರು ಗೃಹ ಕೈಗಾರಿಕೆಗಳಲ್ಲಿ, ಕೂಲಿಯಲ್ಲಿ, ವ್ಯಾಪಾರ, ವಾಣಿಜ್ಯದಲ್ಲಿ, ಹೈನುಗಾರಿಕೆಯಲ್ಲಿ ತೊಡಗಿರುವುದನ್ನು ಕಾಣಬಹುದು. ಒಂದು ಕಾಲಕ್ಕೆ ಮಹಿಳೆಯರು ಮನೆಯ ಹೊರಗೆ ಹೋಗಿ ದುಡಿಯುವುದು ಬಹಳ ಕಷ್ಟದ ಕೆಲಸವಾಗಿತ್ತು. ಏಕೆಂದರೆ ಭಾರತದಂತಹ ಸಂಪ್ರದಾಯ ರಾಷ್ಟ್ರದಲ್ಲಿ ಅಂಥ ಅವಕಾಶವಿರಲಿಲ್ಲ. ಈಗ ಪರಿಸ್ಥಿತಿ ಸಂಪೂರ್ಣವಾಗಿ ಬದಲಾಗಿದೆ ತಮ್ಮ ಮನೆಯ ಜವಾಬ್ದಾರಿಯನ್ನು ಈ ಬುಡಕಟ್ಟು ಮಹಿಳೆಯರು ಮತ್ತು ಇತರೆ ಸಮುದಾಯದ ಮಹಿಳೆಯರು ನಿಭಾಯಿಸಿಕೊಂಡು ಹೋಗುವುದನ್ನು ಗ್ರಾಮೀಣ ಪ್ರದೇಶಗಳಲ್ಲಿ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಕಾಣಬಹುದು.

ಮಹಿಳೆಯರು ಮನೆಯ ಹೊರಗೆ ಹೋಗಿ ದುಡಿಯುವುದರಿಂದ ಅವರಿಗೆ ಲೋಕದಲ್ಲಿ ಅವರ ಸ್ಥಾನ ಹಿಗ್ಗುವುದು ಹಾಗೂ ಸ್ವಾತಂತ್ರ್ಯ ಮತ್ತು ಸ್ವಾವಲಂಬನೆಯನ್ನು ಪಡೆಯುವುದರ ಜೊತೆಗೆ ಬುಡಕಟ್ಟು ಮಹಿಳೆಯರು ಅಸಂಘಟಿತ ವಲಯಗಳಲ್ಲಿ ತೀವ್ರವಾಗಿ ತೊಡಗಿಕೊಳ್ಳಲು ಸಾಧ್ಯವಾಯಿತು.

ಈ ಮಹಿಳೆಯರು ದುಡಿಯುವ ಕ್ಷೇತ್ರಗಳೆಂದರೆ ಕೃಷಿ, ಹೈನುಗಾರಿಕೆ, ಪಶುಪಾಲನೆ, ಮೀನುಗಾರಿಕೆ, ಕರಕುಶಲತೆ, ಕೈಮಗ್ಗ, ಕಟ್ಟಡ ನಿರ್ಮಾಣ, ಬೀಡಿ ತಯಾರಿಕೆ, ಚಿಕ್ಕ ಕೈಗಾರಿಕೆ, ಬಿದಿರು ಬುಟ್ಟಿ ಮಾಡುವುದು, ಈಚಲ ಬುಟ್ಟಿ ಮಾಡುವುದು, ಕಸಬರಿಗೆ ಮಾಡುವುದು ಬುಡಕಟ್ಟು ಮಹಿಳೆಯರಿಂದ ಮಾತ್ರ ಸಾಧ್ಯ ಎಂದು ಹೇಳಬಹುದು. ಈ ಹಿನ್ನೆಲೆಯಲ್ಲಿ ಬುಡಕಟ್ಟು ಮಹಿಳೆಯರು ಆರ್ಥಿಕವಾಗಿ, ಸಾಮಾಜಿಕವಾಗಿ ಅಭಿವೃದ್ಧಿ ಹೊಂದುವಲ್ಲಿ ಪ್ರಯತ್ನ ಪಡುತ್ತಿದ್ದಾರೆ. "ಬದುಕಿನ ಎಲ್ಲಾ ವಲಯಗಳಲ್ಲಿಯೂ ಸಮಾನ ಹಕ್ಕು ಭಾದ್ಯತೆಗಳಿಗಾಗಿ ನಡೆಯುತ್ತಿರುವ ಮಹಿಳಾ ಹೋರಾಟಗಳ ಬಗೆಗೆ ಮತ್ತು ಮಹಿಳೆಯರ ಜೀವನದ ಸ್ಥಿತಿಗತಿಗಳನ್ನು ಸುಧಾರಿಸುವ ಬಗೆಗೆ ಗಮನವನ್ನು ಕೇಂದ್ರೀಕರಿಸುವುದು ಭಾರತದ ಮಹಿಳೆಯರ ರಾಷ್ಟ್ರೀಯ ಫೆಡರೇಷನ್‌ನ ಮುಖ್ಯ ಗುರಿಯಾಗಿತ್ತು"[೮] (NFIW).

ಇದರ ಮೂಲಕ ಮಹಿಳೆಯರು ತಮ್ಮ ಸ್ಥಾನಮಾನವನ್ನು ಕಲ್ಪಿಸಿಕೊಳ್ಳಲು ಪ್ರಯತ್ನಪಟ್ಟರು. ಆದರೆ ಕೆಲವು ರಾಜಕೀಯ ಪುಡಾರಿಗಳು ಬುಡಕಟ್ಟು ಮಹಿಳೆಯರ ಹಾಗೂ ಇತರೆ ಸಮುದಾಯದ ಮಹಿಳೆಯರ ಬಗ್ಗೆ ಕೀಳರಿಮೆಯಿಂದ ಇದೊಂದು ದಾನಕೇಂದ್ರ ಎಂದು ಪರಿಗಣಿಸಿ ಇದರ ವ್ಯಾಪ್ತಿಯನ್ನು ಕುಗ್ಗಿಸಿಬಿಟ್ಟರು. ಸ್ವಾತಂತ್ರ್ಯಾ ನಂತರದಲ್ಲಿ ಕೆಲವು ಬುಡಕಟ್ಟು ಮಹಿಳೆಯರ ಸ್ಥಿತಿಗತಿಗಳು ಉತ್ತಮಗೊಳ್ಳುವುದಿರಲಿ ಅವು ಇನ್ನಷ್ಟು ಶೋಚನೀಯ ಸ್ಥಿತಿಗೆ ಇಳಿದಿವೆ ಎಂಬುದು ಕಂಡು ಬರುತ್ತದೆ. "ನಮ್ಮ ಸಮಾಜೋ ಸಾಂಸ್ಕೃತಿಕ ಸಂಸ್ಥೆಗಳು ಮೂಲದಿಂದಲೇ ಉದ್ಭವಿಸಿದ ಕಾರಣಗಳಿಂದಾಗಿ ನಮ್ಮ ಮಹಿಳೆಯರಲ್ಲಿ ಅಸಾಮರ್ಥ್ಯವೇ ತುಂಬಿ ವಿವಿಧ ಒತ್ತಡಗಳಲ್ಲಿ ಅವರು ಬಳಲುತ್ತಿದ್ದಾರೆ"[೯].

ಈ ಹಿನ್ನೆಲೆಯಲ್ಲಿ ಭಾರತ ಸಂವಿಧಾನವು ಬುಡಕಟ್ಟು ಮಹಿಳೆಯರು ಮತ್ತು ಇತರೆ ಸಮುದಾಯದ ಮಹಿಳೆಯರಿಗೆ ನೀಡಿದ ಹಕ್ಕುಗಳು ಮತ್ತು ಅವಕಾಶಗಳು ಇವರಿಂದ ಎಷ್ಟೋ ದೂರ ಉಳಿದು ಬಿಟ್ಟಿದ್ದಿತು ಎಂದು ಹೇಳಿದರೆ ತಪ್ಪಾಗಲಾರದು. "ತಮ್ಮ ಕೌಟುಂಬಿಕ ಬದುಕಿನಲ್ಲಿ ಅನುಭವಿಸಬೇಕಾಗಿ ಬರುವ ಅನೇಕ ಸಮಸ್ಯೆಗಳ ಪರಿಹಾರಕ್ಕೆಂದೇ ಸಾಮಾಜಿಕ ಕಾನೂನುಗಳನ್ನು ರಚಿಸಲಾಗಿದೆ ಎಂಬ ಮಾಹಿತಿಯು ಕೂಡ ಈ ದೇಶದ ಬಹುತೇಕ ಮಹಿಳಾ ಸಮುದಾಯಕ್ಕೆ ತಲುಪಲು ಸಾಧ್ಯವಾಗಲಿಲ್ಲ. ಹಾಗಾಗಿ ಕಾನೂನು ಹಕ್ಕುಗಳು ಎಂದರೇನೆಂಬುದೇ ಅವರಿಗೆ ತಿಳಿಯದು. ಸ್ವಾತಂತ್ರ್ಯ ಪೂರ್ವದಲ್ಲಿ ಈ ಸ್ಥಿತಿ ಇತ್ತು ಎಂಬುದು ಭೂತಕಾಲದ ಮಾತಾಗಿರದೆ ವರ್ತಮಾನದ ಸತ್ಯವಾಗಿದೆ"[೧೦]. ಈ ಹಿನ್ನೆಲೆಯಲ್ಲಿ ಭಾರತೀಯ ಬುಡಕಟ್ಟು ಮಹಿಳೆಯರು ಅದರಲ್ಲಿಯೂ ಕೂಡ್ಲಿಗಿ ತಾಲೂಕಿನ ಗ್ರಾಮೀಣ ಪ್ರದೇಶದ ಬುಡಕಟ್ಟು ಮಹಿಳೆಯರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಬದಲಾವಣೆ ಹಾಗೂ ಆರ್ಥಿಕವಾಗಿ ಅಭಿವೃದ್ಧಿಯನ್ನು ಹೊಂದುವಲ್ಲಿ ಪ್ರಯತ್ನ ಪಡುತ್ತಿದ್ದಾರೆ ಮತ್ತು ಪಟ್ಟಿದ್ದಾರೆ ಎಂಬುದನ್ನು ಇಲ್ಲಿ ವಿಶ್ಲೇಷಿಸಲಾಗುವುದು.

ಪ್ರಸಕ್ತ ಸಮಾಜದಲ್ಲಿ ಕೆಲವೊಂದು ಬುಡಕಟ್ಟು ಮಹಿಳೆಯರು ಹಲವು ರಂಗಗಳಲ್ಲಿ ಹೆಮ್ಮೆಯ ಸಾಧನೆಗಳನ್ನು ಮಾಡಿದ್ದಾರೆ ಎಂದು ಹೇಳಿದರೆ ಆಶ್ಚರ್ಯವೇನು ಇಲ್ಲ. ಬೌದ್ಧಿಕ ಮಾನಸಿಕ ಶಕ್ತಿ ಸಾಮರ್ಥ್ಯಗಳಾವುದರಲ್ಲೂ ನಮ್ಮ ಬುಡಕಟ್ಟು ಮಹಿಳೆಯರು ಹಾಗೂ ಇತರೆ ಸಮುದಾಯದ ಮಹಿಳೆಯರು ಕಡಿಮೆ ಇಲ್ಲ ಎಂದು ಹೇಳಬಹುದು. ಆಧುನಿಕ ಸಮಾಜದಲ್ಲಿ ಬುಡಕಟ್ಟು ಮಹಿಳೆಯರು ಶಿಕ್ಷಣವನ್ನು ಪಡೆದುಕೊಂಡು ಪ್ರಜ್ಞಾವಂತರಾಗಿ ಹಲವಾರು ರಾಜಕೀಯ ಚಟುವಟಿಕೆಗಳಲ್ಲಿ ಪಾಲ್ಗೊಂಡಿರುವುದನ್ನು ಕೂಡ ಕಾಣಬಹುದು.

ಪ್ರಪಂಚದಲ್ಲಿ ಬಹಳ ಜನಪ್ರಿಯ ಕ್ಷೇತ್ರಗಳಲ್ಲಿ ಸಂಗೀತ ಕ್ಷೇತ್ರವು ಒಂದು, ಇದರಲ್ಲಿ ಬುಡಕಟ್ಟು ಮಹಿಳೆಯರು ಬಹು ಜನಪ್ರಿಯತೆಯನ್ನು ಪಡೆದುಕೊಂಡಿದ್ದಾರೆ. ಅದರಲ್ಲಿ ಗಂಗೂಬಾಯಿ ಹಾನಗಲ್, ಹೀರಾಬಾಯಿ ಬಡೋದೆಕರ, ಲತಾಮಂಗೇಶ್ಕರ, ಅಮೃತಪ್ರೀತಂ, ಸರೋಜನಿನಾಯ್ಡು, ಆಶಾ ಬೋಸಲೆ ಇನ್ನು ಹಲವಾರು ಸಮುದಾಯದ ಭಾರತೀಯ ಮಹಿಳೆಯರ ಸಾಧನೆ ಗಮನಾರ್ಹ.

"ಪ್ರಪಂಚದ ಬಹುತೇಕ ರಾಷ್ಟ್ರಗಳಿಗೆ ಭಾರತವು ಅಪರೂಪದ ಹೆಜ್ಜೆಗಳನ್ನಿರಿಸಿ ವಿಶೇಷ ರಾಯಭಾರಿಗಳಾಗಿ ಮಹಿಳೆಯರನ್ನು ಕಳಿಸಿದೆ. ವಿಶ್ವಸಂಸ್ಥೆಗೆ ಅವರನ್ನು ಪ್ರತಿನಿಧಿಗಳನ್ನಾಗಿ ಕಳುಹಿಸಲಾಗಿದೆ. ಅಂತರಾಷ್ಟ್ರೀಯ ಸಮ್ಮೇಳನಗಳಲ್ಲಿ ದೇಶದ ಗಣ್ಯ ಪ್ರತಿನಿಧಿಗಳಾಗಿಯೂ ಅವರನ್ನು ಕಳಿಸಲಾಗುತ್ತಿದೆ"[೧೧]. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಸ್ವಾತಂತ್ರ್ಯ ನಂತರ ಭಾರತದಲ್ಲಿ ಬುಡಕಟ್ಟು ಸಮುದಾಯದ ಮಹಿಳೆಯರಿಗೆ ಮತ ಚಲಾಯಿಸುವ ಮತ್ತು ಸ್ವತಃ ತಾನೇ ಅಭ್ಯರ್ಥಿಯಾಗಿ ಕಣಕ್ಕಿಳಿಯುವ ಅವಕಾಶವನ್ನು ಭಾರತ ಸಂವಿಧಾನವು ಬುಡಕಟ್ಟು ಸಮುದಾಯಗಳಲ್ಲಿ ಪುರುಷರಿಗೆ ಮತ್ತು ಸ್ತ್ರೀಯರಿಗೆ ಪ್ರತ್ಯೇಕ ಮೀಸಲಾತಿಯ ಅವಕಾಶವನ್ನು ಇತ್ತೀಚೆಗೆ ಕೊಟ್ಟಿದೆ ಎಂದು ಹೇಳಬಹುದು.

ಸ್ವಾತಂತ್ರ್ಯ ಪೂರ್ವದಲ್ಲಿ ಬುಡಕಟ್ಟು ಜನರೆಂದರೆ ಕರುಣೆ ಇಲ್ಲದವರು, ಕ್ರೂರಿಗಳು, ಮಾಂಸಹಾರಿಗಳು ಎಂದು ಮೇಲು ವರ್ಗದವರು ಅವರನ್ನು ನಗರ ಪ್ರದೇಶಕ್ಕೆ ಸೇರಿಸುತ್ತಿರಲಿಲ್ಲ. ಈ ಕಾರಣದಿಂದ ಇವರಲ್ಲಿ ಬಡತನ, ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಯ ದೋರಣೆಯಿಂದ ಬುಡಕಟ್ಟು ಸಮುದಾಯಗಳು ಆಧುನಿಕತೆಯನ್ನು ಕಾಣಲಾಗದೆ ಸಮಸ್ಯೆ ಇನ್ನಷ್ಟು ಹೆಚ್ಚಿಗೆ ಅವರನ್ನು ಕಾಡತೊಡಗಿದವು. ನಂತರ ಕಾಲ ಬದಲಾದಂತೆ ಬುಡಕಟ್ಟು ಸಮುದಾಯಗಳಲ್ಲಿ ಮಹಿಳೆಯರು ಮತ್ತು ಪುರುಷರು ದುಡಿಯುವ ವರ್ಗಕ್ಕೆ ಸೇರಿ ಸಮಾಜದಲ್ಲಿ ಒಂದು ನಾರೀಕತೆಯನ್ನು ಬೆಳೆಸಿಕೊಂಡು ಇತರೆ ಸಮುದಾಯದವರಿಗಿಂತ ಉತ್ತಮ ರೀತಿಯಲ್ಲಿ ಬದುಕಲು ಪ್ರಾರಂಭಿಸಿದ್ದಾರೆ.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಅಧಿಕ ಸಂಖ್ಯೆಯ ಮಹಿಳೆಯರು ಅತ್ಯುನ್ನತ ಜವಾಬ್ದಾರಿ ಸ್ಥಾನಗಳಲ್ಲಿ ಹೆಚ್ಚು ಹೆಚ್ಚು ತೊಡಗಿಕೊಂಡು, ಕುಟುಂಬದ ಸಂರಕ್ಷಣೆಯ ಭಾರವನ್ನು ಹೊತ್ತುಕೊಂಡು ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿದ್ದಾಳೆ ಎಂಬುದು ಒಂದು ಗಮನಾರ್ಹ ಸಂಗತಿ. ಕೃಷಿ ಕ್ಷೇತ್ರದಲ್ಲಿ ಕೃಷಿಯು ಭಾರತದ ಬೆನ್ನೆಲುಬಾದರೆ ಮಹಿಳೆಯರು ಮತ್ತು ಬುಡಕಟ್ಟು ಮಹಿಳೆಯರು ಕೃಷಿಯ ಬೆನ್ನೆಲುಬಾಗಿದ್ದುದ್ದನ್ನು ಸುತ್ತ ಮುತ್ತಲ ಪ್ರದೇಶಗಳಲ್ಲಿ ನೋಡಬಹುದು. ಅದೆ ರೀತಿ ಈ ಕ್ಷೇತ್ರದಲ್ಲಿ ಮಹಿಳೆಯರು ಪುರುಷರಿಗಿಂತ ಕಡಿಮೆ ವೇತನ ಪಡೆಯುತ್ತಿರುವುದು ಒಂದು ಶೋಚನೀಯ ಸಂಗತಿ.

ಮಹಿಳೆಯರ ದುಡಿಮೆಯ ಒಂದು ವಿಶಿಷ್ಟ ಲಕ್ಷಣವೆಂದರೆ ಇವರು ಪುರುಷರಿಗಿಂತ ಹೆಚ್ಚು ಕೆಲಸ ಮಾಡುವವರಿದ್ದಾರೆ. ಅಡುಗೆ ಮಾಡುತ್ತಾ ಮಕ್ಕಳ ಪೋಷಣೆಮಾಡುವುದು. ನಂತರ ಮನೆಯಲ್ಲಿ ಇಬ್ಬರು ಅಂದರೆ ಗಂಡ ಹೆಂಡತಿ ನೌಕರಿಯಲ್ಲಿದ್ದರೆ ಅಲ್ಲಿ ಮನೆಯ ಕೆಲಸವನ್ನು ಮಹಿಳೆಯೆ ಮಾಡಲಾಗುತ್ತದೆ. ಪುರುಷನು ಅದನ್ನು ಮುಟ್ಟುವುದಿಲ್ಲ. ಆದರೂ ಸಮಾಜದಲ್ಲಿ ಮಹಿಳೆಯರಿಗೆ ವೇತನದಲ್ಲಿ ಅದರಲ್ಲಿ ಕೃಷಿಯಲ್ಲಿ ಮನೆಯ ಕಟ್ಟಡ ನಿರ್ಮಾಣದಲ್ಲಿ, ಇನ್ನೂ ಕೆಲವು ಕ್ಷೇತ್ರಗಳಲ್ಲಿ ವೇತನದಲ್ಲಿ ಕಡಿಮೆ ನೀಡುತ್ತಿರುವುದು ಆಧುನಿಕ ಕಾಲದಲ್ಲಿಯೂ ನೋಡಬಹುದು.

ಸ್ವಾತಂತ್ರ್ಯ ನಂತರದ ಭಾರತದಲ್ಲಿ ಬುಡಕಟ್ಟು ಮಹಿಳೆಯರು ಹಸಿರು ಕ್ರಾಂತಿಯಂತಹ ಸರ್ಕಾರಿ ಕಾರ್ಯವಿಧಾನಗಳಿಂದಾಗಿ ಗ್ರಾಮೀಣ ಕೃಷಿಯ ಮಹಿಳೆಯರಲ್ಲಿ ಹೊಸ ಆರ್ಥಿಕತೆ ಮೂಡಿಸಲು ಮುನ್ನಡೆಯತೊಡಗಿದರು. ಬಹುತೇಕ ಎಲ್ಲಾ ಬುಡಕಟ್ಟು ಮಹಿಳೆಯರು ಆರ್ಥಿಕವಾಗಿ ತಮ್ಮ ಉತ್ತಮ ಜೀವನ ನಡೆಸಲು ದುಡಿಮೆಯಲ್ಲಿ ಕ್ರಿಯಾಶೀಲರಾಗುವುದು ಕಂಡುಬರುತ್ತದೆ. ಭಾರತದ ಮಹಿಳೆಯರು ಅಸಂಘಟಿತ ವಲಯಗಳಲ್ಲಿ ತಮ್ಮ ಜೀವನದ ಹೊಟ್ಟೆ ಬಟ್ಟೆಗಾಗಿ ಹಲವಾರು ದುಡಿಮೆಯಲ್ಲಿ ನಿರತರಾಗಿದ್ದಾರೆ. ಹಾಗೆಯೇ ತಮ್ಮ ಸ್ಥಿತಿಗತಿಯನ್ನು ಉತ್ತಮಪಡಿಸಿಕೊಳ್ಳಲು ಹೋರಾಡುತ್ತಿದ್ದಾರೆ.

ಆಧುನಿಕ ಸಮಾಜದಲ್ಲಿ ಅನೇಕ ಬುಡಕಟ್ಟು ಮಹಿಳೆಯರು ವಿಜ್ಞಾನಿಗಳಾಗಿದ್ದಾರೆ, ಅಧ್ಯಾಪಕರಾಗಿದ್ದಾರೆ ಮತ್ತು ಎಂಜಿನಿಯರ್‌ಗಳಾಗಿದ್ದಾರೆ, ಸಂಶೋಧಕರಾಗಿರುವುದು ಕಂಡುಬರುತ್ತದೆ. ಆದರೆ ಇವರು ಇನ್ನೂ ಹೆಚ್ಚಿನ ಮಟ್ಟದ ಸ್ಥಾನಪಡೆಯಲು ಸಾಧ್ಯವಾಗುತ್ತಿಲ್ಲ. ಕಾರಣ ಮೇಲು ಜಾತಿಯವರ ದಬ್ಬಾಳಿಕೆಯಿಂದ ಇವರು ಮೇಲಕ್ಕೆರಲು ಆಗುತ್ತಿಲ್ಲ. ಇದರಿಂದ ಬುಡಕಟ್ಟು ಮಹಿಳೆಯರು ಉನ್ನತ ವ್ಯಾಸಂಗ ಮಾಡಲು ಸಾಧ್ಯವಾಗುತ್ತಿಲ್ಲ. ಆದರೂ ಇಂತಹ ಉನ್ನತ ಪಧವಿಯನ್ನು ಪಡೆದವರ ಸಂಖ್ಯೆ ತುಂಬಾ ವಿರಳ.

ಸ್ವತಂತ್ರ ಭಾರತದಲ್ಲಿ ಬುಡಕಟ್ಟು ಮಹಿಳೆಯರ ಬದುಕು ಉತ್ತಮ ಸ್ಥಿತಿಗೆ ಬಂದಿದೆ ಎಂದು ಹೇಳುವುದು ಕಷ್ಟ. ಏಕೆಂದರೆ ಸ್ವಾತಂತ್ರ್ಯ ಪೂರ್ವದಲ್ಲಿ ಬುಡಕಟ್ಟು ಮಹಿಳೆಯರ ಮೇಲೆ ಬೀಳುವ ಕಾರ್ಯಭಾರ, ಅವರ ಬದುಕಿನ ಪರಿಸ್ಥಿತಿಗಳು ದುಡಿಯುವ ಮಹಿಳೆಯರ ಅಭಿಪ್ರಾಯಗಳು ಎಂಬಂತಹ ಸಂಗತಿಗಳನ್ನು ಯಾರೂ ಲಕ್ಷಿಸಿ ನೋಡಲು ಹೋಗಿದ್ದೇ ಇಲ್ಲ ಎಂದು ಹೇಳಬಹುದು. ೨೦ನೇ ಶತಮಾನ ಮತ್ತು ೨೧ನೇ ಶತಮಾನದಲ್ಲಿ ಪರಿಸ್ಥಿತಿಯಲ್ಲಿ ಸ್ವಲ್ಪ ಬದಲಾವಣೆಗೊಂಡು ಆಧುನಿಕತೆಯನ್ನು ಕಂಡುಕೊಂಡು ಆಧುನಿಕ ಜಗತ್ತಿನಲ್ಲಿ ವಿಜ್ಞಾನ, ತಂತ್ರಜ್ಞಾನಗಳಲ್ಲಿ ಮುಂದುವರೆಯುವಷ್ಟು ಈ ಮಹಿಳೆಯರು ಬಂದಿದ್ದಾರೆ.

ಈ ಹಿನ್ನೆಲೆಯಲ್ಲಿ ಭಾರತ ದೇಶದ ಸ್ಥಿತಿಗತಿಗಳಲ್ಲಿ ಕಾಣಿಸಿದ ಪ್ರಧಾನ ಬದಲಾವಣೆಯಿಂದಾಗಿ ನಗರೀಕರಣ, ಜಾಗತೀಕರಣದ ಪ್ರಕ್ರಿಯೆಗಳಿಂದ ಬುಡಕಟ್ಟು ಮಹಿಳೆಯರು ತಮ್ಮ ಆರ್ಥಿಕತೆಯಲ್ಲಿ ಹೊಸದೊಂದು ಚಾಲನೆಯನ್ನು ಒದಗಿಸಿಕೊಂಡು ಮನೆಯ ನಾಲ್ಕು ಗೋಡೆಗಳಿಂದ ಪಾರಾಗಿ ಹೊರಗಿನ ಜಗತ್ತಿಗೆ ದಾರಿಯೊಂದು ನಿರ್ಮಾಣವಾಯಿತು. ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶದಲ್ಲಿ ಬುಡಕಟ್ಟು ಮಹಿಳೆಯರು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಪ್ರಗತಿ ಹೊಂದುತ್ತಿರುವುದು ಒಂದು ಗಮನಾರ್ಹ ಸಂಗತಿ.

ಸ್ವಾತಂತ್ರ್ಯ ಭಾರತದಂತಹ ದೇಶದಲ್ಲಿ ಬುಡಕಟ್ಟು ಮಹಿಳೆಯರು "ದೇಶದ ರಾಜಕೀಯ ಹಾಗೂ ಆರ್ಥಿಕ ರಂಗಗಳಲ್ಲಾದ ಬದಲಾವಣೆಗಳಿಂದಾಗಿ ವ್ಯಾಪಿಸತೊಡಗಿದ ನಗರೀಕರಣ ಮತ್ತು ಜಾಗತೀಕರಣ ಪ್ರಕ್ರಿಯೆಯಲ್ಲಿ ಮಹಿಳೆಯರ ಸ್ಥಿತಿಗತಿಗಳಲ್ಲಿ ತೀವ್ರತರ ಬದಲಾವಣೆಗಳು ಕಾಣಲಾರಂಭಿಸಿದೆ. ಮಹಿಳೆಯರಿಗೆ ದೊರಕಿದ ಶಿಕ್ಷಣ ಹಾಗೂ ಉದ್ಯೋಗದ ಅವಕಾಶಗಳಿಂದಾಗಿ ಅವಳೀಗ ಪುರುಷನಿಗೆ ಸಮಾನವಾದ ಸ್ಥಾನಮಾನಗಳಲ್ಲಿ ಪ್ರವೇಶಗಳನ್ನು ಪಡೆಯುತ್ತಿದ್ದಾಳೆ"[೨]. ನಗರದ ಬುಡಕಟ್ಟು ಮಹಿಳೆಯರು ತಮ್ಮ ಸ್ಥಿತಿಗತಿಗಳಲ್ಲಿ ಕಾಣುತ್ತಿರುವ ಬದಲಾವಣೆಯ ಪ್ರಭಾವದಿಂದ ಗ್ರಾಮೀಣ ಪ್ರದೇಶದ ಬುಡಕಟ್ಟು ಮಹಿಳೆಯರು ಕೂಡ ತಮ್ಮ ಆಧುನಿಕತೆಯನ್ನು ಕಾಣಲು ಪ್ರಯತ್ನ ಪಡುತ್ತಿದ್ದಾರೆ.

"ವಿಶ್ವಸಂಸ್ಥೆ ೧೯೭೫ನ್ನು ಮಹಿಳಾ ವರ್ಷ ಎಂದು ಘೋಷಿಸಬೇಕೆಂದು ನಿರ್ಧರಿಸಿ, ಅದರ ಪೂರ್ವ ಸಿದ್ಧತೆಯಾಗಿ ಎಲ್ಲಾ ದೇಶಗಳಿಂದಲೂ ಈ ಕುರಿತು ವರದಿಗಳನ್ನು ಪಡೆಯಲು ಸೂಚನೆಗಳನ್ನು ನೀಡಿತೆಂಬುದೂ ಕಾಕತಾಳೀಯವಾಗಿ ಒದಗಿ ಬಂದಿತು"[೧೩] ಎಂದು ಹೇಳಲಾಗಿದೆ. ಈ ಅವದಿಯಲ್ಲಿ ಭಾರತದ ಹಲವಾರು ಸಮುದಾಯದ ಮಹಿಳೆಯರು ತಮ್ಮ ಬದುಕಿನಲ್ಲಿ ಆಧುನಿಕತೆಯನ್ನು ಪಡೆದುಕೊಂಡರು. ಆಧುನಿಕ ಮಹಿಳೆಯರನ್ನು ವಿಶ್ವಸಂಸ್ಥೆಗೆ ಪ್ರತಿನಿಧಿಗಳನ್ನಾಗಿ ಕಳುಹಿಸುತ್ತಿರುವುದನ್ನು ಭಾರತದಲ್ಲಿ ನೋಡಬಹುದು.

ಜಗತ್ತಿನ ಇತಿಹಾಸದಲ್ಲಿ ಮಾರ್ಚ್ ೮ ಸುವರ್ಣಾಕ್ಷರಗಳಲ್ಲಿ ಬರೆಯಲ್ಪಟ್ಟ ದಿನವಾಗಿದೆ. ತುಳಿತಕ್ಕೊಳಗಾದ ಹಲವಾರು ಮಹಿಳೆಯರು ಶತ ಶತಮಾನಗಳಿಂದ ಪುರುಷ ಪ್ರಧಾನ ಸಮಾಜ ಹೇರಿರುವ ಅಸಮಾನತೆ, ಶೋಷಣೆ, ದಬ್ಬಾಳಿಕೆ ವಿರುದ್ಧ ಸಿಡಿದೆದ್ದು ಸಂಘಟಿತರಾಗಿ ಹೋರಾಟ ಆರಂಭಿಸಿದ ದಿನವದು. ಚಿರಂತನ ನೆನಪುಳಿಯುವ ಈ ದಿನ ಮಹಿಳೆಯರ ಘನತೆ, ಗೌರವ, ಕೆಚ್ಚು, ಧೈರ್ಯಕ್ಕೆ ಪ್ರತೀಕವಾಗಿ ನಿಂತಿದೆ. ಈ ಹೋರಾಟದ ಪ್ರತಿಫಲವೇ ಇವರು ಎಲ್ಲಾ ಕ್ಷೇತ್ರಗಳಲ್ಲಿ ದುಡಿಯುತ್ತಿರುವುದು ಕಂಡುಬರುತ್ತದೆ.

ಅಡಿಟಿಪ್ಪಣಿ

೧. ಭಾರತ ಸಂಘಜೀವನದಿಂದ ಗುಲಾಮಗಿರಿಗೆ (ಇಂಗ್ಲೀಷ್ ಮೂಲ) ಶ್ರೀಪಾದ ಅಮೃತ ಡಾಂಗೆ ಪು ೯, (ಅನು) ಎಂ.ಅನಂತ ಕೃಷ್ಣ ಹೆಬ್ಬಾರ್ ಮತ್ತು ರಾಮಚಂದ್ರ ಉಡಪ

೨. ಆಧುನಿಕ ಭಾರತದಲ್ಲಿ ಮಹಿಳೆ, (ಮೂಲ) ಜೆರಾಲ್ಡಿನ್ ಪೋಬ್ಸ್, (ಅನು) ಎಚ್.ಎಸ್. ಶ್ರೀಮತಿ, ಪು೨೮

೩. ಆಧುನಿಕ ಭಾರತದಲ್ಲಿ ಮಹಿಳೆ, (ಮೂಲ) ಜೆರಾಲ್ಡಿನ್ ಪೋಬ್ಸ್, (ಅನು) ಎಚ್.ಎಸ್. ಶ್ರೀಮತಿ, ಪು೩೦

೪. ಅದೇ ಪುಟ

೫. ಮಹಿಳಾ ಅಧ್ಯಯನ, (ಸಂ) ಎಚ್.ಎಸ್. ಶ್ರೀಮತಿ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು ೮

೬. ಮಹಿಳಾ ಅಧ್ಯಯನ, (ಸಂ) ಎಚ್.ಎಸ್. ಶ್ರೀಮತಿ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು ೭೫

೭. ಆಧುನಿಕ ಭಾರತದಲ್ಲಿ ಮಹಿಳೆ, (ಮೂಲ) ಜೆರಾಲ್ಡಿನ್ ಪೋಬ್ಸ್, (ಅನು) ಎಚ್.ಎಸ್. ಶ್ರೀಮತಿ, ಪು ೭

೮. ಆಧುನಿಕ ಭಾರತದಲ್ಲಿ ಮಹಿಳೆ, (ಮೂಲ) ಜೆರಾಲ್ಡಿನ್ ಪೋಬ್ಸ್, (ಅನು) ಎಚ್.ಎಸ್. ಶ್ರೀಮತಿ, ಪು: ೩೪೦

೯. ಆಧುನಿಕ ಭಾರತದಲ್ಲಿ ಮಹಿಳೆ, (ಮೂಲ) ಜೆರಾಲ್ಡಿನ್ ಪೋಬ್ಸ್, (ಅನು) ಎಚ್.ಎಸ್. ಶ್ರೀಮತಿ, ಪು: ೩೪೨

೧೦. ಆಧುನಿಕ ಭಾರತದಲ್ಲಿ ಮಹಿಳೆ, (ಮೂಲ) ಜೆರಾಲ್ಡಿನ್ ಪೋಬ್ಸ್, (ಅನು) ಎಚ್.ಎಸ್. ಶ್ರೀಮತಿ, ಪು:೩೪೩.

೧೧. ಆಧುನಿಕ ಭಾರತದಲ್ಲಿ ಮಹಿಳೆ, (ಮೂಲ) ಜೆರಾಲ್ಡಿನ್ ಪೋಬ್ಸ್, (ಅನು) ಎಚ್.ಎಸ್. ಶ್ರೀಮತಿ, ಪು: ೪೭

೧೨. ಆಧುನಿಕ ಭಾರತದಲ್ಲಿ ಮಹಿಳೆ, (ಮೂಲ) ಜೆರಾಲ್ಡಿನ್ ಪೋಬ್ಸ್, (ಅನು) ಎಚ್.ಎಸ್. ಶ್ರೀಮತಿ, ಪು: ೭೨

೧೩. ಆಧುನಿಕ ಭಾರತದಲ್ಲಿ ಮಹಿಳೆ, (ಮೂಲ) ಜೆರಾಲ್ಡಿನ್ ಪೋಬ್ಸ್, (ಅನು) ಎಚ್.ಎಸ್. ಶ್ರೀಮತಿ, ಪು:೩೪೨

ಅಧ್ಯಾಯ ೩

ಅಧ್ಯಯನ ಕ್ಷೇತ್ರದ ಪರಿಚಯ ಮತ್ತು ಮಾಹಿತಿದಾರರ ಸಾಮಾಜಿಕ-ಆರ್ಥಿಕ ಹಿನ್ನೆಲೆ

೩. ಅಧ್ಯಯನ ಕ್ಷೇತ್ರದ ಪರಿಚಯ ಮತ್ತು ಮಾಹಿತಿದಾರರ ಸಾಮಾಜಿಕ-ಆರ್ಥಿಕ ಹಿನ್ನೆಲೆ

ಸಮಾಜ ವಿಜ್ಞಾನಗಳ ಸಂಶೋಧನೆಗಳು ಸಾಮಾನ್ಯವಾಗಿ ಕ್ಷೇತ್ರ ನಿರ್ದಿಷ್ಟವಾಗಿರುತ್ತವೆ. ಅಧ್ಯಯನದ ವಸ್ತು ಯಾವುದೇ ಇರಲಿ ಅದನ್ನು ಸರಿಯಾಗಿ ಅರ್ಥೈಸಿಕೊಳ್ಳಲು ಸಂಶೋಧಕರಿಗೆ ಆಯ್ದುಕೊಂಡ ಕ್ಷೇತ್ರದ ಒಟ್ಟಾರೆ ಆರ್ಥಿಕ, ಸಾಮಾಜಿಕ, ಭೌಗೋಳಿಕ, ಜನಸಂಖ್ಯೆ, ರಾಜಕೀಯ ಅಂಶಗಳ ಕುರಿತು ಮಾಹಿತಿ ಇರುವುದು ಅತ್ಯಾವಶ್ಯಕ. ಕ್ಷೇತ್ರಕ್ಕೆ ತಕ್ಕಂತೆ ಅಧ್ಯಯದ ವಿಧಾನಗಳನ್ನು ಆರಿಸಿಕೊಳ್ಳಬೇಕಾಗುತ್ತದೆ. ಅಷ್ಟೇ ಅಲ್ಲದೆ, ಸಾಮ್ಯತೆಯನ್ನು ವಿಂಗಡಿಸಿ ವಿಶ್ಲೇಷಿಸುವಲ್ಲಿ ಆಯ್ದಕ್ಷೇತ್ರದ ಜ್ಞಾನ ಪ್ರಧಾನ ಪಾತ್ರವನ್ನು ವಹಿಸುತ್ತದೆ. ಪ್ರಸ್ತುತ ಅಧ್ಯಯನವನ್ನು ಮುಖ್ಯವಾಗಿ ಎರಡು ವಿಭಾಗಗಳಾಗಿ ವಿಂಗಡಿಸಲಾಗಿದೆ. ಮೊದಲ ಭಾಗವು ಅಧ್ಯಯನ ಕ್ಷೇತ್ರವಾದ ಕೂಡ್ಲಿಗಿ ತಾಲೂಕಿನ ಭೌಗೋಳಿಕ, ರಾಜಕೀಯ, ನೈಸರ್ಗಿಕ ಸಂಪನ್ಮೂಲಗಳು ಹಾಗೂ ಮೂಲಭೂತ ಸೌಲಭ್ಯಗಳು ಮತ್ತು ಜನಸಂಖ್ಯೆಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿಯನ್ನು ಹೊಂದಿರುತ್ತದೆ. ಎರಡನೆ ಭಾಗವು ಬುಡಕಟ್ಟು ಮಹಿಳೆಯರು ಮತ್ತು ಇತರೆ ಹಿಂದುಳಿದ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯನ್ನು ಕುರಿತ ಮಾಹಿತಿಯನ್ನು ಒಳಗೊಂಡಿದೆ.

ಈ ಮಹಿಳೆಯರು 'ಸ್ವ-ಶಕ್ತಿ' ಯೋಜನೆಯಡಿಯಲ್ಲಿ ಸ್ವ-ಸಹಾಯ ಸಂಘಗಳನ್ನು ರಚಿಸಿಕೊಂಡು ತಮ್ಮ ಕುಟುಂಬದಲ್ಲಿ ಯಾವ ರೀತಿ ಸ್ವಾವಲಂಬಿಗಳಾಗಿ ಬದುಕು ಪ್ರಾರಂಭಿಸಿದ್ದಾರೆ. ಎಂಬ ಮಾಹಿತಿ ಸಂಗ್ರಹಿಸಲಾಗಿದೆ. ಈ ಅಧ್ಯಯನದಲ್ಲಿ ಉದ್ದೇಶಪೂರ್ವಕವಾಗಿ 'ಸ್ವ-ಶಕ್ತಿ'ಯಲ್ಲಿನ ಸ್ವ-ಸಹಾಯ ಸಂಘಗಳಲ್ಲಿರುವ ಬುಡಕಟ್ಟು ಮಹಿಳಾ ಸದಸ್ಯರನ್ನು ಹೆಚ್ಚಾಗಿ ಪರಿಗಣಿಸಲಾಗಿದೆ ಹಾಗೂ ಮಹಿಳಾ ಸಂಘದ ಸದಸ್ಯರ, ಮಕ್ಕಳ, ಗಂಡಂದಿರ ಶಿಕ್ಷಣದ ಬಗ್ಗೆ ಮಾಹಿತಿ ನೀಡಲಾಗಿದೆ. ನಂತರ ಈ ಅಧ್ಯಯನವನ್ನು ಎರಡು ಭಾಗಗಳಾಗಿ ವಿಂಗಡಿಸಿಕೊಂಡು ಮೊದಲ ಭಾಗದಲ್ಲಿ ಭೌಗೋಳಿಕ ಮತ್ತು ಆಡಳಿತಾತ್ಮಕ ಹಾಗೂ ಪ್ರಾಕೃತಿಕ ಸಂಪನ್ಮೂಲಗಳ ವಿವರಣೆ ನೀಡಲಾಗಿದೆ. ಎರಡನೆ ಭಾಗವು ಅನುಕ್ರಮವಾಗಿ ಮಹಿಳೆಯರನ್ನು ಸಂದರ್ಶಿಸಿ ಇವರ ಜಾತಿ, ಶಿಕ್ಷಣ, ವೃತ್ತಿ, ಹಾಗೂ ಗಂಡಂದಿರ ಶಿಕ್ಷಣ ಮತ್ತು ಮಕ್ಕಳ ಶಿಕ್ಷಣಮಟ್ಟವನ್ನು ನಂತರ ಇವರ ಆಸ್ತಿಯ ವಿವರಗಳನ್ನು ಸಂಘದ

ಉಳಿತಾಯಗಳನ್ನು ಸಾಲ ಸಂಪರ್ಕಗಳ ವಿವರ ಮತ್ತು ಇವರು ಈ ಸಂಘದಿಂದ ಯಾವ ರೀತಿ ಪ್ರಯೋಜನ ಪಡೆದುಕೊಂಡಿದ್ದಾರೆ ಎಂಬುದನ್ನು ತಿಳಿಯಲಾಗಿದೆ.

ಅಧ್ಯಯನ ಕ್ಷೇತ್ರದ ಪರಿಚಯ

ಪ್ರಸ್ತುತ ಅಧ್ಯಯನವು ಸೈದ್ಧಾಂತಿಕ ನೆಲೆಯನ್ನಾಧರಿಸಿದ ನಿದರ್ಶನಾತ್ಮಕವಾದ ಅಧ್ಯಯನವಾಗಿದೆ. 'ಸ್ವ-ಶಕ್ತಿ' ಯೋಜನೆಯಲ್ಲಿ ಸ್ವ-ಸಹಾಯ ಗುಂಪುಗಳು, ಗ್ರಾಮ ಸಭೆಗಳಲ್ಲಿ ಮಹಿಳೆಯನ್ನು ಅದರಲ್ಲಿಯೂ ಹೆಚ್ಚಾಗಿ ಬುಡಕಟ್ಟು ಮಹಿಳೆಯರ ಸಂಘಗಳನ್ನು ಮತ್ತು ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದ ಮಹಿಳೆಯರ ಸಂಘ ಸಂಸ್ಥೆಗಳನ್ನು ಕ್ಷೇತ್ರ ಕಾರ್ಯದಲ್ಲಿ ಸಂದರ್ಶಿಸಲಾಗಿದೆ. ಮಾಹಿತಿದಾರರು ಸಂಘದ ಸಭೆ ಸೇರುವಾಗ ಅವರ ಬಳಿ ಹೋಗಿ ಅವರ ವೈಯಕ್ತಿಕ ಜೀವನದ ವಿವರ ಹಾಗೂ ಸಾಮಾಜಿಕ ಮತ್ತು ಆರ್ಥಿಕ ಜೀವನಗಳನ್ನು ಸಹ ನೋಡಲಾಗಿದೆ. ಇದರಿಂದ ಈ ಯೋಜನೆಯು ಎಷ್ಟರ ಮಟ್ಟಿಗೆ ಬಡತನದಲ್ಲಿ ಇರುವ ಮಹಿಳೆಯರಿಗೆ ಸದುಪಯೋಗವಾಗುತ್ತಿದೆ ಎಂದು ತಿಳಿಯಲಾಗಿದೆ. ನಂತರ ಗ್ರಾಮ ಸಭೆ ಅಥವಾ ಸಂಘದ ಸಭೆಗಳಿಗೆ ಹಾಜರಾಗಿ ಅದರಲ್ಲಿ ಸದಸ್ಯರು ಯಾವರೀತಿ ತಮ್ಮ ಕಾರ್ಯಚಟುವಟಿಕೆಗಳಲ್ಲಿ ತೊಡಗಿರುತ್ತಾರೆ ಎಂಬುದನ್ನು ಪ್ರತ್ಯಕ್ಷವಾಗಿ ನೋಡಲಾಗಿದೆ. ಈ 'ಸ್ವ-ಶಕ್ತಿ' ಯೋಜನೆಯು ದೇಶದಲ್ಲಿ ೨೦೦೦-೨೦೦೧ರಲ್ಲಿ ಜಾರಿಗೆ ಬಂದು ಕೂಡ್ಲಿಗಿ ತಾಲೂಕಿನಲ್ಲಿ ಸಹ ಅನುಷ್ಠಾನದಲ್ಲಿದೆ. ಅವರ ಸಾಧಕ ಬಾದಕಗಳನ್ನು ತಿಳಿಯಲು ಪ್ರಯತ್ನಿಸಲಾಗಿದೆ.

ಭೌಗೋಳಿಕ ಚಿತ್ರಣ

ಪ್ರಸಕ್ತ ಅಧ್ಯಯನವನ್ನು ಕರ್ನಾಟಕ ರಾಜ್ಯದ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿಗೆ ಸೀಮಿತಗೊಳಿಸಲಾಗಿದೆ. ಈ ತಾಲೂಕು ಬ್ರಿಟೀಷರ ಕಾಲದಿಂದಲೂ ಅಂದರೆ ಸ್ವಾತಂತ್ರ್ಯ ಪೂರ್ವದಿಂದಲೂ ಆಡಳಿತ ಕೇಂದ್ರವಾಗಿ ಕಾರ್ಯನಿರ್ವಹಿಸಿಕೊಂಡು ಬಂದಿರುತ್ತದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಈ ಕ್ಷೇತ್ರದಲ್ಲಿ ಬ್ರಿಟೀಷರು ನಿರ್ಮಿಸಿದ ಕೆಲವು ಕಟ್ಟಡಗಳಿವೆ ಅವುಗಳೆಂದರೆ ತಾಲೂಕು ಕಛೇರಿ, ಪೋಲಿಸ್ ಸ್ಟೇಷನ್, ಸ್ಟೇಟ್ ಬ್ಯಾಂಕ ಆಫ್ ಮೈಸೂರು, ಕೋರ್ಟು ಇವು ಇಂದಿಗೂ ಜೀವಂತವಾಗಿರುವುದು ಕಂಡು ಬರುತ್ತದೆ. ಆದರೂ ಈ ತಾಲೂಕು ಬಹಳ ಹಿಂದುಳಿದಿದ್ದು ಇಲ್ಲಿಯವರೆಗೆ ಯಾವುದೇ ರೀತಿಯ ಅಭಿವೃದ್ಧಿಯನ್ನು ಕಾಣಲಾಗಿಲ್ಲ.

ಈ ತಾಲೂಕು ನಾಲ್ಕು ಪ್ರಮುಖ ಹೋಬಳಿಗಳನ್ನು ಹೊಂದಿದೆ ಅವುಗಳೆಂದರೆ ಕೂಡ್ಲಿಗಿ, ಕೊಟ್ಟೂರು, ಹೊಸಹಳ್ಳಿ ಹಾಗೂ ಗುಡೇಕೋಟೆ ಆಗಿವೆ. ಕೂಡ್ಲಿಗಿ ತಾಲೂಕಿನ ಉತ್ತರಕ್ಕೆ ಸಂಡೂರು, ಹೊಸಪೇಟೆ ತಾಲೂಕು ಹಾಗೂ ರಾಯಚೂರು ಜಿಲ್ಲೆ ಇದೆ. ಪಶ್ಚಿಮಕ್ಕೆ ಹರಪನಹಳ್ಳಿ, ಹಡಗಲಿ ಮತ್ತು ಹಗರಿಬೊಮ್ಮನಹಳ್ಳಿ ಇರುವುದು ಕಂಡುಬಂದರೆ ದಕ್ಷಿಣಕ್ಕೆ ದಾವಣಗೆರೆ ಜಿಲ್ಲೆ, ಹರಿಹರ

ತಾಲೂಕು, ಇರುವುದು ಕಂಡು ಬರುತ್ತದೆ. ಪೂರ್ವಕ್ಕೆ ಬಳ್ಳಾರಿ, ಚಿತ್ರದುರ್ಗ ಜಿಲ್ಲೆಗಳು ಇರುವುದು ಕಂಡುಬರುತ್ತದೆ.

ಈ ರೀತಿಯಾಗಿ ಕೂಡ್ಲಿಗಿ ತಾಲೂಕನ್ನು ಸುತ್ತುವರೆದುಕೊಂಡಿವೆ. ಕೂಡ್ಲಿಗಿ ತಾಲೂಕಿನಲ್ಲಿ ದೇಶದಲ್ಲಿಯೇ ಪ್ರಮುಖ ರಸ್ತೆಗಳಲ್ಲಿ ಒಂದಾದ ರಾಷ್ಟ್ರೀಯ ಹೆದ್ದಾರಿ ೧೩ ಇರುವುದು ಕಂಡುಬರುತ್ತದೆ. ಈ ತಾಲೂಕಿನ ಉತ್ತರದಲ್ಲಿ ೪೫ ಕಿ. ಮೀ. ದೂರದಲ್ಲಿ ತುಂಗಭದ್ರಾ ನದಿ ಹರಿಯುತ್ತಿದ್ದು ಅದರ ಜಲಾಶಯದ ಆಣೆಕಟ್ಟು ಕೂಡ ಇದೆ. ಆದರೆ ಈ ತಾಲೂಕಿಗೆ ಯಾವುದೇ ರೀತಿಯಲ್ಲಿ ಈ ನದಿಯ ನೀರಿನ ಸೌಲಭ್ಯ ಇರುವುದಿಲ್ಲ. ಈ ಪ್ರದೇಶದಲ್ಲಿ ಕೆಂಪು ಮಣ್ಣಿನ ಭೂಮಿ ಕಂಡುಬರುತ್ತದೆ. ಕೂಡ್ಲಿಗಿಯು ಬೆಂಗಳೂರಿನಿಂದ ಸುಮಾರು ೨೭೦ ಕಿ. ಮೀ ಹಾಗೂ ಜಿಲ್ಲಾ ಕೇಂದ್ರ ಬಳ್ಳಾರಿಯಿಂದ ೮೦ ಕಿ. ಮೀ ಅಂತರದಲ್ಲಿದೆ.

ಆಡಳಿತಾತ್ಮಕ ಮತ್ತು ಜನಸಂಖ್ಯೆಗೆ ಸಂಬಂಧಪಟ್ಟ ವಿಷಯ

ಕೂಡ್ಲಿಗಿ ತಾಲೂಕು ನಾಲ್ಕು ಪ್ರಮುಖ ಹೋಬಳಿಗಳನ್ನು ಹೊಂದಿದೆ. ಅಲ್ಲದೆ ಈ ತಾಲೂಕು ಆಡಳಿತಾತ್ಮಕವಾಗಿ ಅನುಕೂಲವಾಗಿರುವುದರಿಂದ ಇಲ್ಲಿ ಸಿವಿಲ್ ಪ್ರಥಮ ದರ್ಜೆ ನ್ಯಾಯಾಲಯ ಮತ್ತು ರಾಷ್ಟ್ರೀಯ ಹೆದ್ದಾರಿಯನ್ನು ಹೊದಿರುವುದರಿಂದ ಎಲ್ಲರ ಅನುಕೂಲಕ್ಕಾಗಿ ಬ್ರಿಟೀಷರ ಕಾಲದಿಂದಲೂ ಇದನ್ನು ತಾಲೂಕು ಕೇಂದ್ರವಾಗಿ ರಚಿಸಲಾಯಿತು. ಈ ತಾಲೂಕಿನ ನಾಲ್ಕು ಹೋಬಳಿಗಳ ಪೈಕಿ ಕೊಟ್ಟೂರು ಹೋಬಳಿಯಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯನ್ನು ರಚಿಸಲಾಗಿದೆ. ಈ ತಾಲೂಕಿನಲ್ಲಿ ಕೃಷಿ ಕಾರ್ಮಿಕರು, ಕೂಲಿಕಾರರು ಹೆಚ್ಚಾಗಿ ಕಂಡು ಬರುತ್ತಾರೆ. ಆದುದರಿಂದ ಇಲ್ಲಿ ಜನತೆ ಬಹಳ ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದಿದ್ದಾರೆ. ಇದು ಇನ್ನು ಹೆಚ್ಚಿನ ಮಟ್ಟದಲ್ಲಿ ಅಭಿವೃದ್ಧಿಯಾಗಬೇಕಾಗಿದೆ. ಈ ತಾಲೂಕಿನ ಜನಸಂಖ್ಯೆಗೆ ಸಂಬಂದಪಟ್ಟಂತೆ ೧೯೯೧ ಜನಗಣತಿಯ ಪ್ರಕಾರ ೨,೧೯,೪೮೦ ಇರುವುದು ಕಂಡುಬರುತ್ತದೆ. ಇದರಲ್ಲಿ ಗಂಡು ೧,೧೧,೮೧೯, ಹೆಣ್ಣು ೧,೦೭,೬೬೧. ಇದ್ದಾರೆ. ಇದನ್ನು ಕೋಷ್ಟಕದ ಮೂಲಕ ನೋಡೋಣ.

ಕೂಡ್ಲಿಗಿ ತಾಲೂಕಿನ ಒಟ್ಟು ಜನಸಂಖ್ಯಾ ವಿವರ ೧೯೯೧ರ ಜನಗಣತಿ ಪ್ರಕಾರ

ತಾಲೂಕು	೧೯೯೧ ಜನಗಣತಿ	ಗಂಡು	ಹೆಣ್ಣು
೧. ಕೂಡ್ಲಿಗಿ	೨,೧೯,೪೮೦	೧,೧೧,೮೧೯	೧,೦೭,೬೬೧

ಪ.ಜಾತಿ			ಪ.ಪಂಗಡ		
ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು
೨೨,೪೫೬	೨೧,೫೯೩	೪೪,೦೪೯	೨೭,೦೯೭	೨೬,೮೭೨	೫೩,೯೬೯

[illegible]

[illegible]

[illegible]

[illegible]

ಈ ರೀತಿಯಾಗಿ ಮೇಲಿನ ಕೋಷ್ಟಕದಂತೆ ಕೂಡ್ಲಿಗಿ ತಾಲೂಕಿನ ಒಟ್ಟು ಜನಸಂಖ್ಯೆ ಇರುವುದು ಕಂಡು ಬರುತ್ತದೆ. ನಂತರ ಕೂಡ್ಲಿಗಿ ಪಟ್ಟಣ ಪ್ರದೇಶದಲ್ಲಿ ಜನಸಂಖ್ಯೆ ಎಷ್ಟಿದೆ ಎಂದು ತಿಳಿದುಕೊಂಡಾಗ, ೨೦೦೧ ಜನಗಣತಿಯ ಪ್ರಕಾರ ೨೧,೮೫೫ ಜನಸಂಖ್ಯೆ ಇದೆ. ಇದರಲ್ಲಿ ಗಂಡು ೧೧, ೦೭೭ ಹೆಣ್ಣು ೧೦, ೭೭೮ ಇರುವುದು ಕಂಡುಬರುತ್ತದೆ. ನಂತರ ಪರಿಶಿಷ್ಟ ಜಾತಿ ೩೨೪೩ ಒಟ್ಟು ಜನಸಂಖ್ಯೆ ಇದೆ. ಗಂಡು ೧೫೯೪, ಹೆಣ್ಣು ೧೬೪೯ ಇದ್ದರೆ ಬುಡಕಟ್ಟು ಸಮುದಾಯ ಅಥವಾ ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ ೬೭೯೦ ಇದೆ. ಇದರಲ್ಲಿ ಗಂಡು ೩೧೮೦, ಹೆಣ್ಣು ೩೬೧೦ ಇರುವುದು ಕಂಡುಬರುತ್ತದೆ. (ತಾಲೂಕು ಅಂಕಿ-ಅಂಶಗಳ ನೋಟ)

ನೈಸರ್ಗಿಕ ಸಂಪನ್ಮೂಲಗಳು

ಕೂಡ್ಲಿಗಿ ತಾಲೂಕು ಆರ್ಥಿಕ ಅಭಿವೃದ್ಧಿಯ ಪ್ರಕ್ರಿಯಲ್ಲಿ ಗಮನಾರ್ಹವಾದ ಅಂಶಗಳನ್ನು ಹೊಂದಿದೆ. ಅವುಗಳನ್ನು ನೈಸರ್ಗಿಕ ಸಂಪನ್ಮೂಲಗಳು, ಭೂ ಸಂಪತ್ತು, ಜಲ ಸಂಪತ್ತು ಎಂದು ವಿಭಾಗೀಕರಿಸಿಕೊಳ್ಳಬಹುದು.

ಒಂದು ರಾಷ್ಟ್ರದ ಆರ್ಥಿಕ ಪ್ರಗತಿಯಲ್ಲಿ ಅಲ್ಲಿ ದೊರೆಯುವ ನೈಸರ್ಗಿಕ ಸಂಪನ್ಮೂಲಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಕೂಡ್ಲಿಗಿ ತಾಲೂಕಿನಲ್ಲಿ ಕಂಡು ಬರುವ ನೈಸರ್ಗಿಕ ಸಂಪನ್ಮೂಲಗಳೆಂದರೆ ಭೂ ಸಂಪತ್ತು, ಅರಣ್ಯ ಸಂಪತ್ತು ಹಾಗೂ ಜಲ ಸಂಪತ್ತು.

ಭೂ ಸಂಪತ್ತು : ಈ ಪ್ರದೇಶದಲ್ಲಿ ಕಪ್ಪು ಮಣ್ಣು, ಕೆಂಪು ಮಣ್ಣು ಹೆಚ್ಚಾಗಿ ಕಂಡುಬರುತ್ತದೆ. ಇವುಗಳಲ್ಲಿ ನೀರಾವರಿ ಪ್ರದೇಶದ ಭೂಮಿ ಇರುವುದು ಬಹಳ ಕಡಿಮೆ. ಇಲ್ಲಿ ಮಳೆಯನ್ನು ಅವಲಂಬಿಸಿರುವ ಭೂಮಿ ಹೆಚ್ಚು ಇರುವುದು ಕಂಡು ಬರುತ್ತದೆ. ಈ ತಾಲೂಕಿನಲ್ಲಿ ಜೋಳ, ಶೇಂಗಾ, ಸೂರ್ಯಕಾಂತಿ, ಭತ್ತ, ಸಜ್ಜೆ, ರಾಗಿ, ನವಣೆ ಇನ್ನು ಮುಂತಾದ ವಾಣಿಜ್ಯಬೆಳೆಗಳನ್ನು ಬೆಳೆಯಲಾಗುತ್ತದೆ. ನಂತರ ಈ ಪ್ರದೇಶದಲ್ಲಿ ಪಶುಪಾಲನೆ, ಬೇಟೆಗಾರಿಕೆಯು ಕೃಷಿಯ ಜೊತೆಗೆ ಕಂಡುಬರುತ್ತದೆ. ಪಶುಪಾಲನೆಯು ಕೆಲವು ವರ್ಷಗಳಿಂದ ಅಭಿವೃದ್ಧಿಯನ್ನು ಹೊಂದುತ್ತಿರುವುದನ್ನು ಕೂಡ್ಲಿಗಿ ತಾಲೂಕಿನಲ್ಲಿ ಕಾಣಬಹುದು. ಈ ತಾಲೂಕಿನಲ್ಲಿ ಮುಖ್ಯವಾಗಿ ಹುಣಸೆ ಹಣ್ಣಿನ ವ್ಯಾಪಾರ ಮತ್ತು ಮಾವಿನ ಹಣ್ಣಿನ ವ್ಯಾಪಾರ ಹೆಚ್ಚು ಇರುವುದು. ಹುಣಸೆ ಹಣ್ಣಿನ ವ್ಯಾಪಾರವು ರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿಯನ್ನು ಪಡೆದಿರುವುದು ಕಂಡುಬರುತ್ತದೆ. ಈ ಪ್ರದೇಶದಲ್ಲಿ ಹುಣಸೆ ಹಣ್ಣಿನ ವ್ಯಾಪಾರದಿಂದ ಇಲ್ಲಿನ ಜನ ಆರ್ಥಿಕವಾಗಿ ಅಭಿವೃದ್ಧಿಯನ್ನು ಹೊಂದುತ್ತಿರುವುದನ್ನು ಕಾಣಬಹುದು.

ಜಲ ಸಂಪತ್ತು : ಈ ಕ್ಷೇತ್ರದಲ್ಲಿ ನೀರಾವರಿ ಯೋಜನೆಗಳು ಕಡಿಮೆ ಇರುವುದನ್ನು ಕಾಣಬಹುದು. ಈ ಪ್ರದೇಶದಲ್ಲಿ ಯಾವುದೇ ರೀತಿಯ ಅಣೆಕಟ್ಟುಗಳು, ನದಿಗಳು ಇರುವುದಿಲ್ಲ. ಕೆರೆಗಳು ಮಾತ್ರ ಇರುವುದನ್ನು ಕಾಣಬಹುದು. ಅಂತರ್ಜಲ ಸಂಪತ್ತು ಕೂಡ್ಲಿಗಿ ತಾಲೂಕಿನಲ್ಲಿ

ಲಭ್ಯವಿದೆ. ಆದರೆ ಇವುಗಳು ಸಹ ಇತ್ತೀಚಿನ ದಿನಗಳಲ್ಲಿ ದುರ್ಬಲವಾಗುತ್ತಾ ಬರುತ್ತಿರುವುದನ್ನು ಕಾಣಬಹುದು. ಈ ಅಂತರ್ಜಲ ನೀರನ್ನು ಜನರು ಕುಡಿಯಲು ಬಳಸುತ್ತಾರೆ ಹಾಗೂ ಕೃಷಿಗೆ ಮಾತ್ರ ಹೆಚ್ಚಾಗಿ ಬಳಸಲ್ಪಡುತ್ತಿರುವುದನ್ನು ಕಾಣಬಹುದು.

ಬಳ್ಳಾರಿ ಜಿಲ್ಲೆಯಲ್ಲಿ ಅಭಿವೃದ್ಧಿ ಪಡಿಸಿದ ವಿವಿಧ ಮೂಲಗಳ ನೀರಾವರಿ ಪ್ರದೇಶದ ವಿವರಗಳನ್ನು ಕೋಷ್ಟಕದಲ್ಲಿ ವಿವರಿಸಲಾಗಿದೆ.

ಬಳ್ಳಾರಿ ಜಿಲ್ಲೆಯ ವಿವಿಧ ಮೂಲಗಳ ಜಲ ಸಂಪತ್ತಿನ ವಿವರ

ತಾಲೂಕುಗಳು	ಅಂತರ್ಜಲ	ಬಾಹ್ಯರೂಪದ ನೀರು	ಇತರೆ	ಒಟ್ಟು
ಬಳ್ಳಾರಿ	೧೬.೫೪೫	೫೫.೬೨೦	೪೬	೭೨.೨೧೧
ಹಡಗಲಿ	೮.೧೭೨	೨.೭೪೨	೭.೦೭೪	೧೮.೪೭೪
ಹೆಚ್.ಬಿ.ಹಳ್ಳಿ	೫.೧೭೨	೬.೦೨೨	೧.೦೯೧	೧೨.೨೮೫
ಹೊಸಪೇಟೆ	೮.೫೦೫	೧೮.೭೩೦	೫೬೬	೨೨.೮೦೧
ಕೂಡ್ಲಿಗಿ	೮.೬೩೮	೬.೩೭೨	೪೨	೧೫.೪೩೩
ಸಂಡೂರು	೭.೨೨೨	೨.೯೦೪	---	೧೦.೧೨೭
ಶಿರುಗುಪ್ಪ	೯.೦೬೭	೨೪.೯೯೯	೩.೫೪೮	೩೭.೬೧೪
ಒಟ್ಟು	**೨೩,೭೭೬**	**೧,೨೨,೧೫೯**	**೧೬,೬೭೮**	**೨,೧೨,೭೯೦**

(ಅಂಕಿ-ಸಂಖ್ಯೆಗಳು ಸಿ.ಆಶೋಕ ೧೯೯೭ ಪು ೧೩. ಎಂ.ಫಿಲ್., ಪ್ರಬಂಧ)

ಈ ರೀತಿ ಮೇಲಿನಂತೆ ಬಳ್ಳಾರಿ ಜಿಲ್ಲೆಯಲ್ಲಿ ನೀರಾವರಿ ಇರುವುದು ಕಂಡು ಬರುತ್ತದೆ.

ಕೆರೆಗಳು : ಬಳ್ಳಾರಿ ಜಿಲ್ಲೆಯಲ್ಲಿ ಕೆರೆಗಳಿಗೆ ಪ್ರಾಮುಖ್ಯತೆ ನೀಡಲಾಗಿದೆ. ಅದರಂತೆ ಕೂಡ್ಲಿಗಿ ತಾಲೂಕಿನಲ್ಲಿ ಕೆಲವು ಪ್ರದೇಶಗಳಲ್ಲೂ ಕೆರೆಗಳು ಬಹಳ ಜನರ ಜೀವನ ಸಾಗಿಸುತ್ತಿವೆ. ಮೊದಲೇ ಹೇಳಿದಂತೆ ಈ ಕ್ಷೇತ್ರದಲ್ಲಿ ಅಣೆಕಟ್ಟುಗಳು ಇಲ್ಲದಿರುವುದು. ಕೆರೆಗೆ ಅಡ್ಡಲಾಗಿ ಕಟ್ಟಿ ನೀರನ್ನು ಸಂಗ್ರಹಿಸಲಾಗುತ್ತದೆ. ಅದನ್ನು ಭತ್ತ ಬೆಳೆಯಲು ಉಪಯೋಗಿಸುವುದಲ್ಲದೆ ಮೀನುಗಾರಿಕೆಯನ್ನು ಸಹ ಮಾಡಲಾಗುತ್ತದೆ.

ಈ ಕೂಡ್ಲಿಗಿ ತಾಲೂಕಿನ ಕುಡಿಯುವ ನೀರಿನ ಪೂರೈಕೆ ಹಾಗೂ ಕೊಳವೆ ಬಾವಿಗಳ ವಿವರವನ್ನು ನೋಡೋಣ.

[illegible]

ಕೂಡ್ಲಿಗಿ ತಾಲೂಕಿನ ಕುಡಿಯುವ ನೀರಿನ ಪೂರೈಕೆ ಹಾಗೂ ಕೊಳವೆ ಬಾವಿಗಳ ನೋಟ

ವಿದ್ಯುಚ್ಛಕ್ತಿ ಒದಗಿಸಿದ			ಕುಡಿಯುವ ನೀರಿನ ಪೂರೈಕೆ ಕೊಳನೆ ಬಾವಿಗಳು	
ಉಪ.ಗ್ರಾಮಗಳು	ನೀರಾವರಿ ಪಂಪ್‌ಸೆಟ್‌ಗಳು	ಒಟ್ಟಾರೆ ಕೊಳವೆ ಬಾವಿಗಳು	ಒಟ್ಟಾರೆ ಕೊಳವೆ ನೀರು ಸರಬರಾಜು ಯೋಜನೆಗಳು	ಒಟ್ಟಾರೆ ಚಿಕ್ಕ ನೀರು ಸರಬರಾಜು ಯೋಜನೆಗಳು
೧೪೫	೭,೧೭೩	೧,೧೪೪	೬೦	೧೪೫

ರಾಜಕೀಯ ವ್ಯವಸ್ಥೆ

ಕೂಡ್ಲಿಗಿ ತಾಲೂಕಿಗೆ ತನ್ನದೇ ಆದ ವಿಧಾನ ಸಭಾ ಕ್ಷೇತ್ರವಿದೆ. ಆದರೆ ಈ ಕ್ಷೇತ್ರದಲ್ಲಿ ಕೂಡ್ಲಿಗಿ ಮತ್ತು ಹಗರಿಬೊಮ್ಮನಹಳ್ಳಿ ತಾಲೂಕುಗಳನ್ನು ಸೇರಿಸಿ ಒಂದು ವಿಧಾನಸಭಾ ಕ್ಷೇತ್ರವನ್ನು ಮಾಡಲಾಗಿದೆ. ಈ ಕೂಡ್ಲಿಗಿ ತಾಲೂಕು ಬಳ್ಳಾರಿ ಜಿಲ್ಲೆಯಲ್ಲಿ ಹೆಚ್ಚು ಗ್ರಾಮಗಳನ್ನು ಹೊಂದಿದ ಪ್ರದೇಶವಾಗಿದ್ದರಿಂದ ಇದನ್ನು ಎರಡು ಕ್ಷೇತ್ರಗಳನ್ನಾಗಿ ಮಾಡಲಾಗಿದೆ. ಒಂದು ಕೊಟ್ಟೂರು ವಿಧಾನಸಭಾ ಕ್ಷೇತ್ರ ಮತ್ತೊಂದು ಕೂಡ್ಲಿಗಿ ವಿಧಾನ ಸಭಾ ಕ್ಷೇತ್ರ ಎಂದು ವರ್ಗೀಕರಿಸಲಾಗಿದೆ. ಈ ರೀತಿ ಇರುವುದರಿಂದ ತಾಲೂಕಿನ ಅಭಿವೃದ್ಧಿ ಕುಂಠಿತವಾಗಿದೆ ಎಂದು ಹೇಳಬಹುದು. ಈ ಕೂಡ್ಲಿಗಿ ತಾಲೂಕು ಒಟ್ಟು ೩೩ ಗ್ರಾಮ ಪಂಚಾಯ್ತಿಗಳನ್ನು ಮತ್ತು ಎರಡು ಪಟ್ಟಣ ಪಂಚಾಯ್ತಿಗಳನ್ನು ಹೊಂದಿದೆ. ಇದರಲ್ಲಿ ತಾಲೂಕು ಪಂಚಾಯಿತಿ ಸದಸ್ಯರು ೧೯ ಜನರು ಹಾಗೂ ೫ ಜನ ಜಿಲ್ಲಾ ಪಂಚಾಯಿತಿ ಸದಸ್ಯರನ್ನು ಈ ತಾಲೂಕು ಒಳಗೊಂಡಿದೆ ಹಾಗೂ ಈ ತಾಲೂಕು ೮೫ ಕಂದಾಯ ಗ್ರಾಮಗಳನ್ನು ಒಳಗೊಂಡಿದೆ ಎಂದು ಹೇಳಬಹುದು. ಜಿಲ್ಲಾ ಅಂಕಿ ಅಂಶಗಳ ನೋಟ ೨೦೦೦, ಈ ರೀತಿ ತಾಲೂಕಿನ ರಾಜಕೀಯ ವ್ಯವಸ್ಥೆ ಇರುವುದನ್ನು ಕಾಣಬಹುದಾಗಿದೆ.

ತಾಲೂಕಿನ ಶಿಕ್ಷಣ ವ್ಯವಸ್ಥೆ

ಈ ಕ್ಷೇತ್ರದಲ್ಲಿ ಹೆಚ್ಚಾಗಿ ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡಲಾಗಿದೆ ಎಂದು ಹೇಳಬಹುದು. ಬಳ್ಳಾರಿ ಜಿಲ್ಲೆಯಲ್ಲಿ ನಗರ ಪ್ರದೇಶಗಳನ್ನು ಬಿಟ್ಟರೆ ಕೂಡ್ಲಿಗಿ ತಾಲೂಕಿನಲ್ಲಿ ಶಿಕ್ಷಣ ಮಟ್ಟ ಹೆಚ್ಚಾಗಿರುವುದು ಕಂಡು ಬರುತ್ತದೆ. ಈ ತಾಲೂಕಿನ ಶಿಕ್ಷಣಕ್ಕೆ ಸಂಬಂಧಿಸಿದ ವಿವರಗಳು ಹೀಗಿವೆ.

ಕೂಡ್ಲಿಗಿ ತಾಲೂಕಿನ ಶೈಕ್ಷಣಿಕ ಮಟ್ಟ

ಪ್ರಾಥಮಿಕ ಶಿಕ್ಷಣದ ಒಟ್ಟಾರೆ ವಿವರ				ಪರಿಶಿಷ್ಟಪಂಗಡದ ವಿವರ		
ಶಾಲೆಗಳು	ಒಟ್ಟುವಿದ್ಯಾರ್ಥಿಗಳು	ಗಂಡು	ಹೆಣ್ಣು	ವಿದ್ಯಾರ್ಥಿಗಳು	ಗಂಡು	ಹೆಣ್ಣು
೨೮೯	೫೧,೯೭೪	೨೭,೦೦೦	೨೪,೯೭೪	೧೩,೯೪೨	೬,೮೫೧	೭,೦೯೧
ಪ್ರೌಢಶಾಲೆಗಳು	ಒಟ್ಟುವಿದ್ಯಾರ್ಥಿಗಳು	ಗಂಡು	ಹೆಣ್ಣು	ವಿದ್ಯಾರ್ಥಿಗಳು	ಗಂಡು	ಹೆಣ್ಣು
೩೭	೯,೭೩೪	೬,೦೫೫	೩,೬೭೯	೧,೯೦೬	೧,೨೦೬	೭೦೦

ಈ ರೀತಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಸಂಖ್ಯೆ ವಿದ್ಯಾರ್ಥಿಗಳ ಸಂಖ್ಯೆ ಹೀಗಿದೆ. (ಜಿಲ್ಲಾ ಅಂಕಿಅಂಶಗಳ ನೋಟ).

ನಂತರ ಪದವಿಪೂರ್ವ ಕಾಲೇಜ್ ಮತ್ತು ಪದವಿ ಕಾಲೇಜ್‌ಗಳನ್ನು ಕೋಷ್ಟಕದ ಮೂಲಕ ನೋಡಿದಾಗ

ಪದವಿ ಪೂರ್ವ ಮತ್ತು ಪದವಿಯ ಶೈಕ್ಷಣಿಕ ಮಟ್ಟ

ಪದವಿ ಪೂರ್ವ ಶಿಕ್ಷಣ		ಪದವಿ ಶಿಕ್ಷಣ	
ಕಾಲೇಜುಗಳು	ವಿದ್ಯಾರ್ಥಿಗಳು	ಕಾಲೇಜುಗಳು	ವಿದ್ಯಾರ್ಥಿಗಳು
೦೫	೨,೫೩೮	೦೩	೧,೫೦೦

(ಜಿಲ್ಲಾ ಅಂಕಿಅಂಶಗಳ ನೋಟ). ಈ ಕಾಲೇಜುಗಳ ಅಂಕಿ ಸಂಖ್ಯೆಗಳು ಸರಿಯಾಗಿ ಮಾಹಿತಿ ಲಭ್ಯವಾಗಿಲ್ಲ. ಪದವಿ ಕಾಲೇಜುಗಳ ವಿದ್ಯಾರ್ಥಿಗಳ ಸಂಖ್ಯೆಯನ್ನು ಸರಾಸರಿ ಆಧಾರದ ಮೇಲೆ ತಿಳಿಸಲಾಗಿದೆ. ಈ ರೀತಿ ಶಿಕ್ಷಣಕ್ಕೆ ಸಂಬಂಧಿಸಿದ ಈ ತಾಲೂಕು ಹೊಂದಿರುವುದು ಕಂಡು ಬರುತ್ತದೆ.

ಬುಡಕಟ್ಟು ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಹಿನ್ನಲೆ

ಯಾವುದೇ ಒಂದು ಕ್ಷೇತ್ರಾಧಾರಿತ ಅಧ್ಯಯನವನ್ನು ಕೈಗೊಂಡಾಗ ಆ ಕ್ಷೇತ್ರದ ಮಹಿಳೆಯರ ಅಥವಾ ಜನರ ಸಾಮಾಜಿಕ ಹಾಗೂ ಆರ್ಥಿಕ ಹಿನ್ನೆಲೆಯನ್ನು ತಿಳಿಯುವುದು ಅವಶ್ಯಕ. ಏಕೆಂದರೆ ಪ್ರತಿಯೊಂದು ಸಮಾಜದಲ್ಲಿ ವಿಭಿನ್ನವಾಗಿ ಗುಂಪು, ಜಾತಿ, ಸಮುದಾಯಕ್ಕೆ ಸೇರಿದ ಜನರಿರುತ್ತಾರೆ. ವಿಭಿನ್ನ ಗುಂಪಿಗೆ ಸೇರಿದ ಜನರು ವಿಭಿನ್ನವಾದ ಜೀವನ ಮಟ್ಟವನ್ನು ಹೊಂದಿರುತ್ತಾರೆ. ಈ ಜನತೆಯ ಸಾಮಾಜಿಕ ಹಾಗೂ ಆರ್ಥಿಕ ಹಿನ್ನೆಲೆಯಲ್ಲಿ ಯಾವ ರೀತಿ ತಮ್ಮ ಜೀವನವನ್ನು ಸಾಗಿಸುತ್ತಾರೆ ಎಂಬುದು ತಿಳಿದುಕೊಳ್ಳವುದು ಅವಶ್ಯಕ. ಇದೆ ರೀತಿಯಾಗಿ ಇವರು ಸಮಾಜದ ಆಗು-ಹೋಗುಗಳಿಗಳಾಗಿ ಬೇರೆ ಬೇರೆ ರೀತಿಯಾಗಿ ಸ್ಪಂದಿಸುತ್ತಾರೆ. ಈ ಎಲ್ಲಾ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಪ್ರಸ್ತುತ ಅಧ್ಯಾಯದಲ್ಲಿ ಬುಡಕಟ್ಟು ಮಹಿಳೆಯರಲ್ಲಿ ಸ್ವ-ಸಹಾಯ ಸಂಘಗಳಲ್ಲಿರುವ ಸದಸ್ಯರ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯನ್ನು ತಿಳಿಯಲು ಪ್ರಯತ್ನಿಸಲಾಗಿದೆ. ನಿರ್ಧಿಷ್ಟವಾಗಿ ಈ ಅಧ್ಯಯನದಲ್ಲಿ ಮಹಿಳಾ ಸ್ವ-ಸಹಾಯ ಸಂಘದ ಸದಸ್ಯರ ಮಾಹಿತಿದಾರರ ಶಿಕ್ಷಣ, ವೃತ್ತಿ, ಆದಾಯ ಮತ್ತು ಅವರ ಜಾತಿ, ಗಂಡದಿರ ಶಿಕ್ಷಣ, ವೃತ್ತಿ ಹಾಗೂ ಇವರ ಶಿಕ್ಷಣಮಟ್ಟದ ಬಗ್ಗೆ ಮತ್ತು ಆಸ್ತಿಯ ಬಗ್ಗೆ ಸಂಕ್ಷಿಪ್ತವಾಗಿ ಮಾಹಿತಿ ತಿಳಿಯುವುದು ಅವಶ್ಯಕ.

ಈ ಎಲ್ಲಾ ಅಂಶಗಳು ಈ ಮಹಿಳೆಯರ ಮೇಲೆ ಪ್ರಭಾವ ಮತ್ತು ಅವರ ಅಭಿವೃದ್ಧಿಗೆ ಕಾರಣವಾಗಬಲ್ಲವುಗಳಾಗಿವೆ. ಯಾವುದೇ ಯೋಜನೆ ಯಶಸ್ವಿಯಾಗಿ ಕಾರ್ಯನಿರ್ವಹಿಸಬೇಕಾದರೆ ಈ ಯೋಜನೆಯಲ್ಲಿರುವ ಮಹಿಳೆಯರ ಪಾತ್ರ ಪ್ರಮುಖವಾಗಿರುತ್ತದೆ. ಈ ಮಹಿಳೆಯರಲ್ಲಿ ಸ್ವಲ್ಪ

[illegible]

ಭಿನ್ನಾಭಿಪ್ರಾಯ, ವೈಷಮ್ಯಗಳು ಕಂಡುಬಂದರೆ ಆ ಯೋಜನೆ ಯಶಸ್ವಿ ಕಾಣದೆ ವೈಫಲ್ಯವನ್ನು ಕಾಣಬೇಕಾಗುತ್ತದೆ. ಈ ರೀತಿ 'ಸ್ವ-ಶಕ್ತಿ' ಯೋಜನೆಗೆ ಮಹಿಳೆಯರು ಯಾವ ರೀತಿಯಲ್ಲಿ ಪೂರಕವಾಗಿದ್ದಾರೆ ಎಂಬುದನ್ನು ಇಲ್ಲಿ ನೋಡಬಹುದಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಮಾಹಿತಿಯನ್ನು ಸ್ವ-ಶಕ್ತಿ ಯೋಜನೆಯಡಿಯಲ್ಲಿ ರಚನೆಗೊಂಡ 'ಸ್ವ-ಸಹಾಯ' ಸಂಘಗಳ ಮಹಿಳಾ ಸದಸ್ಯರುಗಳಿಂದ ಪಡೆದುಕೊಳ್ಳಲಾಗಿದೆ. ಸಮಯದ ಅಭಾವದಿಂದ ೧೦೧ ಸಂಘಗಳ ಪೈಕಿ ೪೦ 'ಸ್ವ-ಶಕ್ತಿ'ಯ ಸಂಘಗಳನ್ನು ಇತರೆ ಸ್ವರ್ಣ ಜಯಂತಿ ಶಹರಿ ಯೋಜನೆಯಡಿಯಲ್ಲಿ ೩ ಸಂಘಗಳ ಮಾಹಿತಿ ಸಂಗ್ರಹಿಸಿದೆ. ನಮ್ಮ ಕ್ಷೇತ್ರಕಾರ್ಯವನ್ನು ೧೩.೦೧.೨೦೦೩ರಂದು ಆರಂಭಿಸಿ ೪೦ ಸಂಘಗಳಿಗೆ ಕ್ಷೇತ್ರಕಾರ್ಯವನ್ನು ಸೀಮಿತಗೊಳಿಸಲಾಗಿದೆ.

ಅಧ್ಯಯನದ ನಮೂನೆಯಲ್ಲಿ ಬುಡಕಟ್ಟು ಮಹಿಳೆಯರು ಮತ್ತು ಇತರೆ ಸಮುದಾಯದ ಮಹಿಳೆಯರು 'ಸ್ವ-ಶಕ್ತಿ' ಯೋಜನೆಯಡಿಯಲ್ಲಿ ಸ್ವ-ಸಹಾಯ ಸಂಘಗಳನ್ನು ರಚಿಸಿಕೊಂಡಿದ್ದಾರೆ. ಮತ್ತು ಮಹಿಳೆಯರು ಯಾವ ರೀತಿಯಲ್ಲಿ ಈ ಯೋಜನೆಯ ಪ್ರಯೋಜನ ಪಡೆದಿದ್ದಾರೆ ಎಂಬುದನ್ನು ತಿಳಿಯಬಹುದಾಗಿದೆ.

ಮಹಿಳಾ ಮಾಹಿತಿದಾರರ ಸಾಮಾಜಿಕ ಹಿನ್ನೆಲೆ

ಮೊದಲೇ ತಿಳಿಸಿದಂತೆ ಪ್ರಸ್ತುತ ಅಧ್ಯಯನಕ್ಕೆ ೪೦ ಸ್ವ-ಸಹಾಯ ಸಂಘಗಳ ಮಹಿಳಾ ಸದಸ್ಯರಿಂದ ಮಾಹಿತಿ ಸಂಗ್ರಹಿಸಲಾಗಿದೆ. ನಮ್ಮ ಭಾರತೀಯ ಸಮಾಜವು ಅನೇಕ ಜಾತಿ ಧರ್ಮಗಳನ್ನು ಹೊಂದಿದೆ. ಜಾತಿ ಪದ್ಧತಿಯು ಸಾಮಾಜಿಕ ಜೀವನದ ಅವಿಭಾಜ್ಯ ಅಂಗವಾಗಿದ್ದು ಹಲವು ರೀತಿಗಳಲ್ಲಿ ತನ್ನ ಪ್ರಭಾವ ಸೂಚಿಸುತ್ತಿರುತ್ತದೆ. ಶ್ರೇಣೀಕೃತ ಸಮಾಜಕ್ಕೆ ಇದೊಂದು ಮೂಲಭೂತ ಕಾರಣವಾಗಿದೆ. ನಮ್ಮ ಅಧ್ಯಯನದಲ್ಲಿ ಬುಡಕಟ್ಟು ಸಮುದಾಯದ ಮಹಿಳೆಯರನ್ನು ಹೆಚ್ಚಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ನಂತರ ವಿವಿಧ ಜಾತಿ ಧರ್ಮಗಳಿಗೆ ಸೇರಿದ ಮಹಿಳೆಯರ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಇದನ್ನು ಕೋಷ್ಟಕದಲ್ಲಿ ತೋರಿಸಲಾಗಿದೆ.

ಸಂಘಗಳ ಸದಸ್ಯರ ಜಾತಿವಾರು ವಿವರ

ಸದಸ್ಯರ ಜಾತಿ	ಸಂಖ್ಯೆ
ಪರಿಶಿಷ್ಟ ಪಂಗಡ	೩೩೩
ಪರಿಶಿಷ್ಟ ಜಾತಿ	೭೮
ಲಂಬಾಣಿ	೫೫
ಕೊರವ	೩೬
ಕುರುಬ	೩೫

[illegible]

[illegible]

[illegible]

[illegible]

[illegible]

[illegible]

[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]

ಮಡಿವಾಳ	೧೩
ಗೊಲ್ಲರು	೧೭
ಲಿಂಗಾಯಿತ	೨೪
ಮುಸ್ಲಿಂ	೭
ಬಾರಿಕರು	೫
ಇತರೆ	೪೮
ಒಟ್ಟು	೬೫೧

ಶಿಕ್ಷಣ

ಶಿಕ್ಷಣ ಮತ್ತು ಉದ್ಯೋಗ ಪ್ರತಿವ್ಯಕ್ತಿಯ ಮೂಲಭೂತ ಅವಶ್ಯಕತೆಗಳಾಗಿವೆ. ಶಿಕ್ಷಣ ಮತ್ತು ಉದ್ಯೋಗಗಳೆರಡು ಜನತೆಯ ಸಾಮಾಜಿಕ ಅಂತಸ್ಥನ್ನು ಅಳೆಯುವ ಮಾಪನವಾಗಿವೆ. ಶಿಕ್ಷಣವು ವ್ಯಕ್ತಿಯ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಶಿಕ್ಷಣದ ಪ್ರಾಮುಖ್ಯತೆಯು ಪುರುಷರಿಗಿಂತ ಮಹಿಳೆಯರಿಗೆ ಹೆಚ್ಚು ಅವಶ್ಯಕ ಎಂದು ಇತ್ತೀಚಿನ ಕೆಲವು ಅಧ್ಯಯನಗಳಿಂದ ತಿಳಿದುಬರುತ್ತದೆ. ಅದರಂತೆ 'ಸ್ವ-ಶಕ್ತಿ' ಯೋಜನೆಯ 'ಸ್ವ-ಸಹಾಯ' ಸಂಘಗಳ ಸದಸ್ಯರ ಶಿಕ್ಷಣ, ಗಂಡಂದಿರ ಶಿಕ್ಷಣ ಮಟ್ಟ, ಮಕ್ಕಳ ಶಿಕ್ಷಣ ಮಟ್ಟವನ್ನು ಹಾಗೂ ಮಹಿಳೆಯರ ವೈಯಕ್ತಿಕ ವೃತ್ತಿಯನ್ನು ಈ ಕೋಷ್ಟಕದ ಮೂಲಕ ನೋಡಬಹುದು.

ಸದಸ್ಯರ ಶೈಕ್ಷಣಿಕ ಸ್ಥಾನಮಾನ

ಶಿಕ್ಷಣಮಟ್ಟ	ಮಹಿಳೆಯರ ಸಂಖ್ಯೆ	ವೃತ್ತಿ
೧ - ೨	೭	ಕೃಷಿಕೂಲಿ
೩ - ೪	೧೧	ಕೂಲಿ
೫ - ೬	೧೮	ಕೃಷಿಕೂಲಿ
೬ - ೭	೧೩	ಕೂಲಿ
ಪ್ರೌಢಶಾಲೆ	೧೦	ಕೃಷಿಕೂಲಿ
ಕಾಲೇಜು	೪	ಕೃಷಿಕೂಲಿ
ಪದವಿ	-	ವ್ಯಾಪಾರ
		ಹೈನುಗಾರಿಕೆ
		ಕುರಿಸಾಕಾಣಿಕೆ
ಅನಕ್ಷರಸ್ಥರ ಸಂಖ್ಯೆ	೫೫೦	ಕೃಷಿಕೂಲಿ

ಈ ಮೇಲಿನ ಕೋಷ್ಟಕದಲ್ಲಿ ತಿಳಿದುಬರುವುದೇನೆಂದರೆ ಮಹಿಳಾ ಸದಸ್ಯರು ಹೆಚ್ಚಾಗಿ ಅನಕ್ಷರಸ್ಥರಾಗಿದ್ದು ಶಿಕ್ಷಣ ಪಡೆದವರ ಸಂಖ್ಯೆ ಕಡಿಮೆ ಇರುವುದು ಕಂಡು ಬರುತ್ತದೆ. ನಂತರ

ಸ್ವ-ಸಹಾಯ ಸಂಘಗಳಲ್ಲಿರುವ ಮಹಿಳೆಯರ ಶಿಕ್ಷಣ ಕಡಿಮೆಯಿರುವ ಕಾರಣ ಇವರು ಆರ್ಥಿಕವಾಗಿ ಹಿಂದುಳಿದಿದ್ದರಿಂದ ಶಿಕ್ಷಣ ಕುಂಠಿತವಾಗಿರುತ್ತದೆ ಎಂದು ಹೇಳಬಹುದು.

ಗಂಡಂದಿರ ಶಿಕ್ಷಣ : ಮಹಿಳೆಯರ ಸಾಮಾಜಿಕ ಸ್ಥಾನಮಾನ ಮತ್ತು ಅವರ ಗಂಡಂದಿರ ಶಿಕ್ಷಣಗಳ ನಡುವೆ ಪರಸ್ಪರ ನೇರ ಸಂಬಂಧವಿದೆ. ಅಕ್ಷರಸ್ಥ ಗಂಡ ತನ್ನ ಹಂಡತಿಯನ್ನು ಗೌರವದಿಂದ ಕಂಡು ಅವಳ ಜೀವನದಲ್ಲಿ ಭಾಗಿಯಾಗಬಹುದು.

'ಸ್ವ-ಶಕ್ತಿ' ಯೋಜನೆಯಲ್ಲಿರುವ 'ಸ್ವ-ಸಹಾಯ' ಸಂಘಗಳಲ್ಲಿರುವ ಮಹಿಳಾ ಸದಸ್ಯರ ಗಂಡಂದಿರು ಹೆಚ್ಚಾಗಿ ಅನಕ್ಷರಸ್ಥರಾಗಿರುವುದನ್ನು ಕ್ಷೇತ್ರಕಾರ್ಯದ ಸಮಯದಲ್ಲಿ ಮಹಿಳಾ ಸದಸ್ಯರನ್ನು ಕೇಳಿ ತಿಳಿಯಲಾಗಿದೆ. ಬುಡಕಟ್ಟು ಮಹಿಳೆಯರು ಅನಕ್ಷರಸ್ಥರಾಗಿದ್ದರೂ ಸಹ ತಮ್ಮ ಮಕ್ಕಳ ವಿದ್ಯಾಭ್ಯಾಸವನ್ನು ಮಾತ್ರ ಕುಂಠಿತಗೊಳಿಸಿಲ್ಲ. ಸಂಘದಿಂದ ಸಾಲವನ್ನು ಪಡೆದುಕೊಂಡು ತನ್ನ ಮಕ್ಕಳ ಶಿಕ್ಷಣ ಕೊಡಿಸುವುದು ತಮ್ಮ ಧರ್ಮವಾಗಿದೆ ಎಂದು ತಿಳಿದುಕೊಂಡು ತನ್ನ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡುವರು. ಈ ಮಾಹಿತಿದಾರರ ಮಕ್ಕಳ ಶಿಕ್ಷಣ ಮಟ್ಟವನ್ನು ಕೋಷ್ಟಕದಲ್ಲಿ ತಿಳಿಸಲಾಗಿದೆ. ನಂತರ ಕೆಲವೊಂದು ಮಹಿಳಾ ಸದಸ್ಯರು ದೃಢ ಮನಸ್ಸಿನಿಂದ ಉನ್ನತ ಶಿಕ್ಷಣದವರೆಗೆ ಓದಿಸಿರುವುದು ಕಂಡುಬರುತ್ತದೆ. ಕಾರಣ ತಮಗೆ ಎದುರಾದ ಸಮಸ್ಯೆಗಳು ನಮ್ಮ ಮಕ್ಕಳಿಗೆ ಬಾರದಿರಲಿ ಎಂದು ಬಯಸುತ್ತಾರೆ. ಈ ಮಾಹಿತಿದಾರರ ಶಿಕ್ಷಣವನ್ನು ತಮ್ಮ ಮಕ್ಕಳಿಗೆ ಯಾವರೀತಿ ಕೊಡಿಸಿದ್ದಾರೆ ಎಂಬುದನ್ನು ಕೋಷ್ಟಕದ ಮೂಲಕ ತಿಳಿಯಲಾಗಿದೆ.

ಸದಸ್ಯರ ಮಕ್ಕಳ ಶಿಕ್ಷಣಮಟ್ಟದ ವಿವರ

ತರಗತಿ	ಗಂಡು	ಹೆಣ್ಣು	ಒಟ್ಟು
೧ - ೨	೨೪	೨೨	೪೬
೩ - ೪	೩೦	೩೨	೬೨
೫ - ೬	೩೧	೧೨	೪೩
೬ - ೭	೩೩	೧೬	೪೯
ಪ್ರೌಢಶಾಲೆ	೩೩	೨೩	೫೬
ಕಾಲೇಜು	೬	೨	೮
ಪದವಿ	೨	-	೨
ಸ್ನಾತಕೋತ್ತರ	೧	-	೧
ಎಂ.ಫಿಲ್	೧	-	೧
ಇತರೆ	೧	-	೧

[illegible]

[illegible]

[illegible]

[illegible]	[illegible]	[illegible]	[illegible]

ಈ ಅಂಶಗಳನ್ನು ಗಮನಿಸಿದಾಗ ಬುಡಕಟ್ಟು ಮಹಿಳೆಯರ ಮಕ್ಕಳ ಶಿಕ್ಷಣ ಮಟ್ಟ ಮೇಲಿನಂತೆ ಈ ರೀತಿ ಇರುವುದು ಕಂಡುಬರುತ್ತದೆ. ಇದರಲ್ಲಿ ಮಹಿಳಾ ಸ್ವ ಸಂಘದ ಸದಸ್ಯರ ಹೆಣ್ಣು ಮಕ್ಕಳ ಶಿಕ್ಷಣ ಮಟ್ಟ ಬಹಳ ಕಡಿಮೆ ಇದೆ. ಗಂಡು ಮಕ್ಕಳ ಶಿಕ್ಷಣ ಮಟ್ಟ ಹೆಚ್ಚಾಗಿರುವುದು ಕಂಡುಬರುತ್ತದೆ.

'ಸ್ವ-ಶಕ್ತಿ' ಯೋಜನೆಯ 'ಸ್ವ-ಸಹಾಯ' ಸಂಘಗಳ ಸದಸ್ಯರಲ್ಲಿರುವ ಮಹಿಳೆಯರು ಯಾವರೀತಿ ತಮ್ಮ ಕುಟುಂಬದ ಆಸ್ತಿಯನ್ನು ಹೊಂದಿದ್ದಾರೆ ಎಂಬುದನ್ನು ಇವರಿಂದ ಕಾಣಬಹುದು. ಒಟ್ಟಾರೆ ಮಾಹಿತಿ ಸಂಗ್ರಹಿಸಿದಾಗ ಇವರಲ್ಲಿರುವ ಎಲ್ಲಾ ಮಹಿಳೆಯರು ತಮಗೆ ಯಾವುದೇ ರೀತಿಯ ಆಸ್ತಿ ಇಲ್ಲ ಎಂದು ಹೇಳುವವರೆ ಹೆಚ್ಚಾಗಿ ಇದ್ದಾರೆ. ಇವರಲ್ಲಿ ೧ರಿಂದ ೨ ಎಕರೆ ಜಮೀನು ಇದ್ದವರ ಸಂಖ್ಯೆ ಕೂಡ ಇದೆ ಎಂದು ಹೇಳಬಹುದು. ಸ್ವ-ಸಹಾಯ ಸಂಘಗಳ ಸದಸ್ಯರಲ್ಲಿ ಕೆಲವು ಜನ ವಿಧವೆಯರು ಮತ್ತು ದೇವದಾಸಿಯರೂ ಇದ್ದಾರೆ. ಈ ಸದಸ್ಯರು ಸಂಘದಲ್ಲಿ ಆಂತರಿಕ ಸಾಲವನ್ನು ತೆಗೆದುಕೊಂಡು ಯಾವ ರೀತಿಯಲ್ಲಿ ಬದುಕು ಸಾಗಿಸುತ್ತಿದ್ದಾರೆ ಎಂಬುದನ್ನು ಕೆಳಗಿನ ಕೋಷ್ಟಕದಲ್ಲಿ ತಿಳಿಸಲಾಗಿದೆ.

ಸದಸ್ಯರ ಆಂತರಿಕ ಸಾಲದ ವಿವರಣೆ

ಸದಸ್ಯರ ಸಂಖ್ಯೆ	ವೃತ್ತಿಗಳು
೧೩	ಅಂಗಡಿ ವ್ಯಾಪಾರ
೧೫	ತರಕಾರಿ
೧೦	ಹೋಟೆಲ್
೬೦	ಕುರಿಸಾಕಾಣಿಕೆ
೫	ಆಕಳು ಸಾಕಾಣಿಕೆ
೨	ಬಟ್ಟೆವ್ಯಾಪಾರ
೮	ಹೈನುಗಾರಿಕೆ
೪	ವ್ಯಾಪಾರ
೧೦	ಇತರೆ

ಈ ಮೇಲಿನ ಕೋಷ್ಟಕದ ಅಂದಾಜಿನಂತೆ ಇದ್ದು ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಹೆಚ್ಚಾಗಿ ಕುರಿಸಾಕಾಣಿಕೆಯಲ್ಲಿ ತೊಡಗಿರುವುದು ಕಂಡುಬರುತ್ತಾರೆ. ಕಾರಣ ತೆಗೆದುಕೊಂಡ ಸಾಲವನ್ನು ಬೇಗ ಹಿಂತಿರುಗಿಸಲು ಕುರಿಸಾಕಾಣಿಕೆ ಸಹಾಯಕವಾಗಿದೆ ಎಂದು ಕಂಡುಬರುತ್ತದೆ.

ಈ ಸ್ವ-ಸಹಾಯ ಸಂಘಗಳ ಸದಸ್ಯರಲ್ಲಿ ವಿಭಿನ್ನವಾದ ಜನರು ಇರುವುದು ಹಾಗೂ ಇದರಲ್ಲಿ ದೇವದಾಸಿಯರು ವಿಧವೆಯರು, ಅವಿವಾಹಿತರು, ಎಷ್ಟು ಜನ ಮಹಿಳಾ ಸದಸ್ಯರಿದ್ದಾರೆ ಎಂಬುದನ್ನು

[illegible]

[illegible]

[illegible]

[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]

[illegible]

[illegible]

ಕ್ಷೇತ್ರ ಕಾರ್ಯ ಸಂದರ್ಭದಲ್ಲಿ ಸಂದರ್ಶಿಸಲಾಗಿದೆ.

ದೇವದಾಸಿಯರು	ವಿಧವೆಯರು	ವಿವಾಹಿತರು	ಅವಿವಾಹಿತರು	ರಾಜಕಾರಣಿ/ಸದಸ್ಯರು
೨೦	೩೫	೫೬೦	೧೦	೪

ಈ ರೀತಿ 'ಸ್ವ-ಶಕ್ತಿ' ಯೋಜನೆಯಲ್ಲಿ 'ಸ್ವ-ಸಹಾಯ' ಸಂಘದ ಸದಸ್ಯರು ಕೋಷ್ಟಕದಲ್ಲಿ ತಿಳಿಸಿರುವಂತೆ ಇರುವುದು ಕಂಡುಬರುತ್ತದೆ.

ಮಾಹಿತಿದಾರರು ತಮ್ಮ ವೈಯಕ್ತಿಕ ಆಸ್ತಿಯನ್ನು ಹೊಂದಿರುವ ಆಧಾರದ ಮೇಲೆ ನಾವು ಅವರ ಆರ್ಥಿಕ ಪರಿಸ್ಥಿತಿಯನ್ನು ಗಮನಿಸಬಹುದು. ಇವರು ತಮ್ಮ ಸ್ವಂತ ಮನೆಯಲ್ಲಿ ಇರುವುದು ಕಂಡು ಬರುತ್ತದೆ. ಹಾಗೆಯೇ ಕೆಲವು ಜನ ಸದಸ್ಯರ ಮನೆಗಳು ಗುಡಿಸಲುಗಳಾಗಿವೆ. ಮತ್ತು ಕೆಲವರು ಬಾಡಿಗೆ ಮನೆಯಲ್ಲಿದ್ದುಕೊಂಡು ಸ್ವ ಸಹಾಯ ಸಂಘಗಳಲ್ಲಿ ತಮ್ಮ ಉಳಿತಾಯ ಮಾಡುತ್ತಿರುವುದು ಕಂಡುಬರುತ್ತದೆ.

ಪ್ರಸ್ತುತ ಅಧ್ಯಯನವನ್ನು ಕೂಡ್ಲಿಗಿ ತಾಲೂಕಿನಲ್ಲಿ ಕೈಗೊಂಡಿದ್ದು ಅದರಲ್ಲಿ 'ಸ್ವ-ಶಕ್ತಿ' ಯೋಜನೆಯಡಿಯಲ್ಲಿ ರಚನೆಗೊಂಡ ಮಹಿಳಾ 'ಸ್ವ-ಸಹಾಯ' ಸಂಘಗಳನ್ನು ಸಂದರ್ಶಿಸುವ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಸಂಘಗಳ ಮಹಿಳಾ ಸದಸ್ಯರು ಹೆಚ್ಚಾಗಿ ಬಡತನ ರೇಖೆಗಿಂತ ಕೆಳಗಿನವರಾಗಿದ್ದಾರೆ ಹಾಗೂ ಇದಕ್ಕಿಂತ ಕೊಂಚ ಮೇಲ್ಮಟ್ಟದಲ್ಲಿರುವ ಮಹಿಳೆಯರನ್ನು ನೋಡಲಾಗಿದೆ. ಇದರಲ್ಲಿ ಹೆಚ್ಚಾಗಿ ಬುಡಕಟ್ಟು ಮಹಿಳೆಯರನ್ನು ಅಧ್ಯಯನಕ್ಕೆ ಅಳವಡಿಸಿಕೊಂಡು ಇವರಿಂದ ಮಾಹಿತಿ ಸಂಗ್ರಹಿಸಲಾಗಿದೆ. ಎಲ್ಲಾ ಮಹಿಳೆಯರು ಸ್ವ-ಸಹಾಯ ಸಂಘಗಳನ್ನು ಕಟ್ಟಿಕೊಂಡು ಆಧುನಿಕ ಪ್ರಪಂಚದಲ್ಲಿ ಯಾವ ರೀತಿ ಮುನ್ನಡೆಯುತ್ತಿದ್ದಾರೆ ಎಂಬುದನ್ನು ನೋಡಲಾಗಿದೆ ಕೆಲವೊಂದು ಸಲಹೆ ಸೂಚನೆಗಳನ್ನು ನೇರವಾಗಿ ಅವರಿಗೆ ತಿಳಿಸಲಾಗಿದೆ.

ಅಧ್ಯಾಯ ೪

ಬುಡಕಟ್ಟು ಮಹಿಳೆಯರ ಅಭಿವೃದ್ಧಿಗೆ ಸರ್ಕಾರದ ಯೋಜನೆಗಳು

೪. ಬುಡಕಟ್ಟು ಮಹಿಳೆಯರ ಅಭಿವೃದ್ಧಿಗೆ ಸರ್ಕಾರದ ಯೋಜನೆಗಳು

"ಕೆಲವು ನಿರ್ದಿಷ್ಟ ಧ್ಯೆಯಗಳ ಸಾಧನೆಗಾಗಿ ಸರಕಾರ ಬಳಸುವ ಆರ್ಥಿಕ ತಂತ್ರಗಳನ್ನು ಯೋಜನೆ ಎಂದು ಕರೆಯಲಾಗುತ್ತದೆ. ಯೋಜನೆ ಎಂದರೆ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ನಿರ್ದಿಷ್ಟ ಕ್ಷೇತ್ರಗಳಲ್ಲಿ ಸಮರ್ಪಕವಾಗಿ ಬಳಸಿಕೊಳ್ಳುವುದು. ಯೋಜನೆಗಳು ಒಟ್ಟು ಆರ್ಥಿಕಾಭಿವೃದ್ಧಿಗೆ ಅಗತ್ಯವಿರುವ ದಿಗ್ದರ್ಶನ ಮತ್ತು ನಿಯಂತ್ರಣವನ್ನು ಒದಗಿಸುತ್ತವೆ. ಸರಳವಾಗಿ ಯೋಜನೆ ಎಂದರೆ ಆರ್ಥಿಕ ಚಟುವಟಿಕೆಗಳಲ್ಲಿ ಸರಕಾರದ ಹಸ್ತಕ್ಷೇಪ ಎಂದು ವ್ಯಾಖ್ಯಾನಿಸಬಹುದು. ಗುನ್ನಾರ ಮಿರ್ಡಾಲ್‌ರ ಪ್ರಕಾರ 'ಯೋಜನೆ' ಎಂದರೆ ಸಾಮಾಜಿಕ ಪ್ರಕ್ರಿಯೆಗೆ ಊರ್ದ್ವಮುಖ ಉತ್ತೇಜನ ನೀಡಲು ಸಹಕಾರಿಯಾಗುವಂತೆ ಮಾರುಕಟ್ಟೆಯ ಶಕ್ತಿಗಳನ್ನು ನಿಯಮಬದ್ದಗೊಳಿಸಲು ಸರಕಾರದ ಹಸ್ತಕ್ಷೇಪದ ಕ್ರಮವನ್ನು ಪ್ರಯೋಗಿಸುವಲ್ಲಿ ಒಂದು ದೇಶದ ಕಾರ್ಯತಂತ್ರವನ್ನು ರೂಪಿಸುವ ಕಾರ್ಯಕ್ರಮವಾಗಿದೆ".[೧]

ಸ್ವಾತಂತ್ರ್ಯ ಬಂದ ನಂತರ ಮಹಿಳೆಯರು ಅದರಲ್ಲಿ ಗ್ರಾಮೀಣ ಪ್ರದೇಶದ ಬುಡಕಟ್ಟು ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗಾಗಿ ಸರ್ಕಾರ ಹಲವಾರು ಪ್ರಗತಿಪರ ಕಾರ್ಯಕ್ರಮಗಳನ್ನು ಹಾಗೂ ಯೋಜನೆಗಳನ್ನು ಹಮ್ಮಿಕೊಂಡು ಹಂತ ಹಂತವಾಗಿ ಅನುಷ್ಠಾನಗೊಳಿಸುತ್ತಾ ಬಂದಿದೆ. ಈ ದಿಶೆಯಲ್ಲಿ ಕರ್ನಾಟಕ ಸರ್ಕಾರ ಹಾಗೂ ಭಾರತ ಸರ್ಕಾರಗಳು ಬಡತನ ರೇಖೆಗಿಂತ ಕೆಳಗಿರುವ ಬುಡಕಟ್ಟು ಮತ್ತು ಇತರೆ ಸಮುದಾಯದ ನಿರ್ಗತಿಕ ಮಹಿಳೆಯರು, ವಿಧವೆಯರು, ಬಾಲ ಕಾರ್ಮಿಕರು, ಮಹಿಳಾ ಕಾನೂನು ಪದವಿಧರರು, ವಿದ್ಯಾರ್ಥಿಗಳು ಹಾಗೂ ದೇವದಾಸಿಗಳು ಸ್ವಯಂ ಉದ್ಯೋಗ ಕೈಗೊಳ್ಳುವವರಿಗೆ ಉಪಯುಕ್ತವಾಗುವಂತಹ ಯೋಜನೆಗಳನ್ನು ಹಮ್ಮಿಕೊಂಡು ಗ್ರಾಮೀಣ ಬುಡಕಟ್ಟು ಮಹಿಳೆಯರನ್ನು ಸ್ವಾವಲಂಬಿಗಳನ್ನಾಗಿ ಮಾಡುವ ನಿಟ್ಟಿನಲ್ಲಿ ಕೈಯೋರ್ನ್ಮುಕವಾಗಿ ಕೆಲಸ ಮಾಡುತ್ತಿದೆ.

'ರಾಷ್ಟ್ರೀಯವಾದಿ ಚಳುವಳಿಯ ಬೆಳವಣಿಗೆಯನ್ನು ಕಂಡ ೨೦ನೇ ಶತಮಾನದ ಪೂರ್ವಾರ್ಧದಲ್ಲಿ ರಾಷ್ಟ್ರೀಯವಾದಿ ದೃಷ್ಟಿಕೋನದಿಂದ ಮಹಿಳಾ ಚಳುವಳಿಗೆ ನಾಂದಿ ಹಾಡಿತು'.[೨] ಸ್ವಾತಂತ್ರ್ಯ ನಂತರ

ಎಲ್ಲಾ ಬುಡಕಟ್ಟು ಸಮುದಾಯ ಮತ್ತು ಇತರೆ ಸಮುದಾಯದ ಮಹಿಳೆಯರ ಅಭಿವೃದ್ಧಿಗೆ ಹೆಚ್ಚಿನ ಹೊತ್ತು ನೀಡುವ ಸಲುವಾಗಿ ಸರ್ಕಾರದ ಆಧ್ಯತೆಯ ಮೇರೆಗೆ ಕೇಂದ್ರೀಯ ಹಾಗೂ ರಾಜ್ಯ ಸಮಾಜ ಕಲ್ಯಾಣ ಮಂಡಳಿಗಳು ರಚಿತವಾದವು. ಇದರಿಂದಾಗಿ ದೊಡ್ಡ ಸಂಖ್ಯೆಯಲ್ಲಿ ಸ್ವ-ಸಹಾಯ ಸಂಘುಗಳು ಆರಂಭವಾಗಿ ಮಹಿಳಾ ಸಂಬಂಧಿ ವಿಷಯಗಳನ್ನು ಕೈಗೆತ್ತಿಕೊಂಡವು. ಈ ಅವಧಿಯಲ್ಲಿ ಅಸಂಖ್ಯ ಮಹಿಳಾ ಮಂಡಲಗಳು, ಮಹಿಳಾ ಸಮಾಜಗಳು ಸೃಷ್ಠಿಯಾದವು.

'ಅರವತ್ತರ ದಶಕದ ಉತ್ತರಾರ್ಧದಲ್ಲಿ ಹಾಗೂ ಎಪ್ಪತ್ತರ ದಶಕದಲ್ಲಿ ಬಡವರ ಮತ್ತು ಶ್ರೀಮಂತರ ನಡುವಿನ ಅಂತರ ವಿಪರೀತವಾಗಿ ಅಭಿವೃದ್ಧಿ ಪ್ರಕ್ರಿಯೆಯ ಬಗ್ಗೆಯೇ ಹುಬ್ಬೇರಿಸುವಂತಾಯ್ತು'.[೩] ಇಂತಹ ಸಂದರ್ಭದಲ್ಲಿ ಅನೇಕ ಸ್ವ ಸಹಾಯ ಸಂಘುಗಳು ತಮ್ಮ ದೃಷ್ಟಿಯನ್ನು ಬಡವರ ಪರ ತಮ್ಮ ಅಭಿವೃದ್ಧಿಯತ್ತ ಹೊರಳಿಸಿದವು.

ಅಭಿವೃದ್ಧಿಯ ಪ್ರಕ್ರಿಯಲ್ಲಿ ನಿರತವಾಗಿದ್ದ ಅನೇಕ ಅಂತರಾಷ್ಟ್ರೀಯ ನೆರವು, ಏಜನ್ಸಿಗಳು, ಈ ಸ್ವ-ಸಹಾಯ ಸಂಘುಗಳಿಗೆ ನಿಧಿ ದೇಣಿಗೆ ನೀಡತೊಡಗಿದವು. 'ಇಂದು ತೀವ್ರಗತಿಯಲ್ಲಿ ಸಾಗುತ್ತಿರುವ ಖಾಸಗೀಕರಣ, ಉದಾರೀಕರಣ ಹಾಗೂ ಜಾಗತೀಕರಣದ ಒಪ್ಪಂದಗಳ ಸಂದರ್ಭದಲ್ಲಿ ಅಭಿವೃದ್ಧಿಯನ್ನು ಕುರಿತು ತೀರಾ ಗಂಭೀರವಾದ ಚರ್ಚೆಗಳು ನಡೆಯುತ್ತವೆ. ಇದೇ ಹೊತ್ತಿಗೆ ಭಾರತದ ಆರ್ಥಿಕ ನೀತಿಯಲ್ಲಿ ಎದ್ದು ಕಾಣುವ ರೀತಿಯಲ್ಲಿ ಆಗುತ್ತಿರುವ ಬದಲಾವಣೆಗಳು ಕೂಡ ಈ ಚರ್ಚೆಗೆ ಕಾರಣವಾಗಿವೆ'.[೪] ಯಾವುದೇ ಅಭಿವೃದ್ದಿ ಮಾದರಿಯಲ್ಲಿ ಎಲ್ಲಾ ಸಮುದಾಯದ ಮಹಿಳೆಯರನ್ನು ಒಂದೇ ರೀತಿಯಲ್ಲಿ ತಲುಪಿಸಲಾಗುವುದಿಲ್ಲ, ಎಂಬುದು ಸಾಮಾನ್ಯ ಅನುಭವ ಹಾಗಾಗಿ ಈ ಮಾದರಿ ಅನುಕೂಲವನ್ನು ಪಡೆಯುತ್ತಿರುವವರು ಮತ್ತು ಪಡೆಯುವವರು ಯಾರು? ಈ ದೇಶದ ದಲಿತರು, ಮಹಿಳೆಯರು, ಆದಿವಾಸಿಗಳು ಹಾಗೂ ಬಡವರ ಮೇಲೆ ಈ ಅಭಿವೃದ್ದಿ ಹೇಗಿದೆ ಎಂದು ಗಮನಿಸುವುದು ತೀರಾ ಮುಖ್ಯವಾದ ಸಂಗತಿ.

ಬೇರೆ ಬೇರೆ ಜಾತಿಯ ಪ್ರದೇಶದ ಜನರ ಮೇಲೆ ಈ ಅಭಿವೃದ್ಧಿ ಮಾದರಿಯ ಪರಿಣಾಮ ಸ್ವಲ್ಪ ವಿಭಿನ್ನ ರೀತಿಯಲ್ಲಿ ಆಗುತ್ತದೆ ಎನ್ನುವುದರ ಬಗ್ಗೆ ಎರಡು ಮಾತಿಲ್ಲ. ಭಾರತವು ಹಳ್ಳಿಗಳಿಂದ ಕೂಡಿರುವುದರಿಂದ ಒಂದು ರಾಷ್ಟ್ರದ ನಿರ್ಮಾಣದ ಅಭಿವೃದ್ದಿ, ಪ್ರಜಾಪ್ರಭುತ್ವ ಇತ್ಯಾದಿಗಳು ಜನರ ಮತ್ತು ಎಲ್ಲಾ ಸಮುದಾಯದ ಮಹಿಳೆಯರ ಆಶೋತ್ತರಗಳಿಗೆ ಸ್ಪಂದಿಸುವ ಮೂಲಕ ಸಾಂಪ್ರದಾಯಿಕ ಸಮಸ್ಯೆಗಳಿಗೆ, ಪಾರಂಪರಿಕ ಕೊನೆ ಹಾಡಬಹುದು, ಎನ್ನುವ ಬಲವಾದ ನಂಬಿಕೆ ಮತ್ತು ಪಾರಂಪರಿಕವಾಗಿ ಮುಂದುವರೆದುಕೊಂಡು ಸಾಮಾಜಿಕ, ಆರ್ಥಿಕ, ರಾಜಕೀಯ ಅಸಮಾನತೆಗಳಿಗೆ ಗೆರೆ ಎಳೆಯಲಾಯಿತು.

ಈ ನಿಟ್ಟಿನಲ್ಲಿ ಬುಡಕಟ್ಟು ಮಹಿಳಾ ಸಮುದಾಯದ ಕೀರ್ತಿ ಅಂತರಾಷ್ಟ್ರೀಯ ಮಟ್ಟದಲ್ಲಿ ಬೆಳಗಲಿ ಎನ್ನುವ ಸಲುವಾಗಿ ಸರ್ಕಾರವು ಗ್ರಾಮೀಣ ಬುಡಕಟ್ಟು ಮಹಿಳೆಯರ ಅಭಿವೃದ್ಧಿ ಹಾಗೂ

ಸಶಕ್ತತೆಯನ್ನಾಗಿ ಮಾಡಲು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ಇಲಾಖೆಯು ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗಾಗಿ ಹಲವಾರು ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ರಾಜ್ಯಾದ್ಯಾಂತ ಮಹಿಳಾ ಮಂಡಳಿಗಳು, ಸ್ವಯಂ ಸೇವಾ ಸಂಸ್ಥೆಗಳು ಇಲಾಖೆಯ ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ಅನುಷ್ಠಾನಗೊಳಿಸುವಂತಹ ಹಾಗೂ ವ್ಯಕ್ತಿಗತವಾಗಿ ಪ್ರಯೋಜನ ಪಡೆಯುವಂತಹ ಹಲವಾರು ಯೋಜನೆಗಳ ಬಗ್ಗೆ ಮಾಹಿತಿ ನೀಡಲಾಗುತ್ತಿದೆ. ಇಲ್ಲಿ ಅಧ್ಯಯನದ ಮಿತಿಯಿಂದಾಗಿ ಕೆಲವು ಸರ್ಕಾರದ ಯೋಜನೆಗಳ ಬಗ್ಗೆ ವಿವರವಾಗಿ ವಿವರಣೆಯನ್ನು ಕೊಟ್ಟಿರುವುದಿಲ್ಲ. ಆದರೆ ನಮ್ಮ ಅಧ್ಯಯನದ ವಿಷಯವಾದ ಸ್ವ-ಶಕ್ತಿ ಯೋಜನೆಯ ಬಗ್ಗೆ ಸಂಪೂರ್ಣವಾಗಿ ವಿವರಿಸಲಾಗಿದೆ.

ನವಜೀವನ ಯೋಜನೆ

'ಬಡತನ ರೇಖೆಗಿಂತ ಕೆಳಗಿರುವ ಗ್ರಾಮೀಣ ಪ್ರದೇಶದ ಮಹಿಳೆಯರಿಗೆ, ವಿಧವೆಯರಿಗೆ ಆರ್ಥಿಕವಾಗಿ ಸ್ವಾವಲಂಬಿಗಳಾಗಲು ಸಹಾಯಧನ ನೀಡುವುದು, ಮಹಿಳೆಯರು ಮತ್ತು ವಿಧವೆಯರು ತಮ್ಮ ಆದಾಯವನ್ನು ಹೆಚ್ಚಿಸಿಕೊಂಡು ಇತರೆ ಚಟುವಟಿಕೆಗಳನ್ನು ಪ್ರಾರಂಭಿಸಿ ತಮ್ಮ ಆರ್ಥಿಕ ಹಾಗೂ ಸಾಮಾಜಿಕ ಭದ್ರತೆ ಮತ್ತು ತಮ್ಮ ಸ್ಥಾನಮಾನ ಹೆಚ್ಚಿಸುವಂತಹ ಚಟುವಟಿಕೆಗಳಿಗೆ ಆರ್ಥಿಕ ಸಹಾಯ ನೀಡುವುದು ಈ ಯೋಜನೆಯ ಉದ್ದೇಶವಾಗಿದೆ. ಈ ಯೋಜನೆಗೆ ಮಹಿಳೆಯರು ವಿಧವೆಯರು ಅರ್ಹರಾಗಿದ್ದು ತಮ್ಮ ಆರ್ಥಿಕ ಮಟ್ಟವನ್ನು ಹೆಚ್ಚಿಸುವಂತೆ ಯಾವುದಾದರೂ ಆದಾಯೋತ್ಪನ್ನ ಚಟುವಟಿಕೆಗಳನ್ನು ಕೈಗೊಳ್ಳಲು ಘಟಕ ವೆಚ್ಚದ ಶೇ.೭೫ ರಂತೆ ಗರಿಷ್ಠ ೫೦೦ ರಂತೆ ಸಹಾಯಧನ ನೀಡಲಾಗುವುದು ಎಂಬುದನ್ನು ಈ ಯೋಜನೆ ತಿಳಿಸುತ್ತದೆ'.[೫]

ವಿಕಾಸಿನಿ ಯೋಜನೆ

'ಆರ್ಥಿಕವಾಗಿ ಬಡತನ ರೇಖೆಗಿಂತ ಕೆಳಗಿರುವ ಗ್ರಾಮೀಣ ಹೆಣ್ಣು ಮಕ್ಕಳ ಸ್ವಯಂ ಉದ್ಯೋಗ ಪ್ರಾರಂಭಿಸಲು ಧನಸಹಾಯ ನೀಡುವುದು ಮತ್ತು ತಾವು ಸಿದ್ದಪಡಿಸಿದ ವಸ್ತುಗಳ ಮಾರಾಟಕ್ಕೆ ಮೂಲಭೂತ ಸೌಕರ್ಯವಾದ ಸ್ಥಳದ ಏರ್ಪಾಡು ಮಾಡುವುದು. ೧೮ ವರ್ಷ ತುಂಬಿದ ಹಾಗೂ ಆರ್ಥಿಕವಾಗಿ ಬಡತನ ರೇಖೆಗಿಂತ ಕೆಳಗಿರುವ ಮಹಿಳೆಯರು ಅದರಲ್ಲೂ ಬುಡಕಟ್ಟು ಮಹಿಳೆಯರು ಪ್ರಯೋಜನ ಪಡೆಯಲು ಆರ್ಹರಿರುತ್ತಾರೆ. ಅಲ್ಲದೆ ಇದರಲ್ಲಿ ಅಂಗವಿಕಲ ಮಹಿಳೆ, ನಿರ್ಗತಿಕ ಮಹಿಳೆಯರು ಸಹ ಇರುತ್ತಾರೆ'.[೬]

ಜಾಗೃತಿ ಯೋಜನೆ

* 'ಪ್ರಾಯಪೂರ್ವ ಬಾಲಕಿಯರಲ್ಲಿ ಆರೋಗ್ಯ, ನೈರ್ಮಲ್ಯ, ಪೋಷಣೆ, ಕುಟುಂಬ ಕಲ್ಯಾಣ ಮಗುವಿನ ಆರೈಕೆ ಮತ್ತು ಗೃಹ ನಿರ್ವಹಣೆ ಬಗ್ಗೆ ಅರಿವು ಮೂಡಿಸುವುದು.

* ಪ್ರಾಯಪೂರ್ವ ಬಾಲಕಿಯರಿಗೆ ವೃತ್ತಿ ಕುಶಲತೆಯನ್ನು ಒದಗಿಸುವುದು.

* ಪ್ರಾಯಪೂರ್ವ ಬಾಲಕಿಯರನ್ನು ಅವರ ಮುಂದೆ ಬರುವ ತಾಯ್ತನ ಪ್ರವೇಶಿಸಲು ದಾರಿ ಮಾಡಿಕೊಟ್ಟು ಅವಳು ಕೇಂದ್ರದ ಚಟುವಟಿಕೆಗಳ ಬಗ್ಗೆ ತಿಳಿದುಕೊಂಡು ಶಾಲಾಪೂರ್ವ ಚಟುವಟಿಕೆಗಳನ್ನು ನಡೆಸಲು ಅಂಗನವಾಡಿ ಕಾರ್ಯಕರ್ತೆಗೆ ಸಹಾಯ ಮಾಡುವುದು ಈ ಯೋಜನೆ ಮುಖ್ಯ ಉದ್ದೇಶವಾಗಿದೆ'.[೬]

ಮಹಿಳಾ ಕಾನೂನು ಪ್ರದೇಶದ ಹೆಣ್ಣು ಮಕ್ಕಳಿಗೆ ಹಾಜರಾತಿ ಶಿಷ್ಯವೇತನ

'ಶಾಲೆಗೆ ಹೋಗುವ ಗ್ರಾಮಾಂತರ ಹೆಣ್ಣು ಮಕ್ಕಳು ಶಾಲೆಯನ್ನು ಬಿಡುವುದನ್ನು ತಪ್ಪಿಸುವುದು ಹಾಗೂ ಮಹಿಳೆಯರ ಸಾಕ್ಷರತೆಯನ್ನು ಹೆಚ್ಚಿಸುವ ಸಲುವಾಗಿ ಆರ್ಥಿಕ ಸಹಾಯ ಮಾಡುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.

ಅರ್ಹತೆ : ಹೆಣ್ಣು ಮಗುವು ಭಾರತ ಪ್ರಜೆಯಾಗಿರಬೇಕು. ಒಂದನೆ ತರಗತಿಯಿಂದ ಹಾಜರಾತಿ ಶಿಷ್ಯವೇತನ ಪಡೆಯಲು ಅರ್ಜಿಸಲ್ಲಿಸುವ ತರಗತಿಯವರೆಗೆ ಪಡೆಯಬಹುದು. ಹಾಗೆಯೇ ಕರ್ನಾಟಕ ಸರ್ಕಾರದ ಮಾನ್ಯತೆ ಪಡೆದಿರುವ ಕರ್ನಾಟಕದಲ್ಲಿರುವ ವಿದ್ಯಾಸಂಸ್ಥೆಗಳಲ್ಲಿ ವ್ಯಾಸಂಗ ಮಾಡಬೇಕು.

* ಬಾಲಕಿ ೨೦,೦೦೦ ಜನಸಂಖ್ಯೆಗಿಂತ ಕಡಿಮೆ ಇರುವ ಗ್ರಾಮದಲ್ಲಿ ವಾಸಮಾಡುತ್ತಿರಬೇಕು.

* ಬಾಲಕಿ ೫ನೇ ತರಗತಿಯಿಂದ ೧೦ನೇ ತರಗತಿಯವರೆಗೆ ಕರ್ನಾಟಕ ಸರ್ಕಾರದ ಮಾನ್ಯತೆ ಪಡೆದ ಕರ್ನಾಟಕ ರಾಜ್ಯದಲ್ಲಿರುವ ವಿದ್ಯಾಸಂಸ್ಥೆಗಳಲ್ಲಿ ವ್ಯಾಸಂಗ ಮಾಡಿರಬೇಕು.

* ಕುಟುಂಬದ ವಾರ್ಷಿಕ ರೂಪಾಯಿ ೧೦,೦೦೦ ವರಗೆ ಇರಬೇಕು.

* ಹಿಂದಿನ ತರಗತಿಯಲ್ಲಿ ಶೇಕಡ ೮೦ರಷ್ಟು ಹಾಜರಾತಿ ಹೊಂದಿರಬೇಕು.

* ಬಾಲಕಿ ಮೊದಲನೆ ಪ್ರಯತ್ನದಲ್ಲಿ ಕನಿಷ್ಟ ಶೇಕಡ ೪೦ರಷ್ಟು ಅಂಕಗಳು ಪಡೆದು ಉತ್ತೀರ್ಣರಾಗಿರಬೇಕು.

ಅನುದಾನ ವಿಧಾನ : ಈ ಯೋಜನೆಯ ಹಾಜರಾತಿ ಶಿಷ್ಯವೇತನ ನೀಡುವ ಪ್ರಮಾಣ ತರಗತಿ ಮತ್ತು ಅವಧಿ ಈ ಕೆಳಕಂಡಂತೆ ಇದೆ.

ತರಗತಿ	ಒಂದು ತಿಂಗಳಿಗೆ ಶಿಷ್ಯವೇತನದ ದರ	ಶಿಷ್ಯವೇತನದ ಅವಧಿ
೧. ೫ನೇ ತರಗತಿಯಿಂದ ೭ನೇ ತರಗತಿಯವರೆಗೆ	೨೫.೦೦ ರೂಪಾಯಿ	೧೦ ತಿಂಗಳು
೨. ೮ನೇ ತರಗತಿಯಿಂದ ೧೦ನೇ ತರಗತಿಯವರೆಗೆ	೫೦.೦೦ ರೂಪಾಯಿ	೧೦ ತಿಂಗಳು

ಬಾಲಕಾರ್ಮಿಕ ಪುನರ್ವಸತಿ ಯೋಜನೆ : ಬಾಲಕಾರ್ಮಿಕರನ್ನು ಪುನರ್ವಸತಿಗೊಳಿಸುವ ಉದ್ದೇಶದಿಂದ ಬಾಲಕಾರ್ಮಿಕರನ್ನು ಅದರಲ್ಲೂ ಹೆಣ್ಣು ಮಕ್ಕಳನ್ನು ವಿದ್ಯಾಭ್ಯಾಸದ ಮುಖ್ಯವಾಹಿನಿಗೆ ಸೇರಿಸುವುದು ಪ್ರತಿಜಿಲ್ಲೆಯಲ್ಲಿ ವಿಶೇಷ ಶಾಲೆಯನ್ನು ಪ್ರಾರಂಭಿಸಿ ೬ ತಿಂಗಳವರೆಗೆ ಬಾಲ ಕಾರ್ಮಿಕರಿಗೆ ಅ ಅಸಂಪ್ರದಾಯಿಕ ಶಿಕ್ಷಣ, ಪೌಷ್ಠಿಕತೆ, ಆಹಾರ, ಆರೋಗ್ಯ, ಮನರಂಜನೆ ಇತ್ಯಾದಿಗಳನ್ನು ನೀಡಲಾಗುತ್ತಿದೆ.

ಅರ್ಹತೆ : ಅಪಾಯಕಾರಿಯಾದ ಅಥವಾ ಅಪಾಯಕಾರಿಯಲ್ಲದ ಉದ್ದಿಮೆಗಳಲ್ಲಿ ಕೆಲಸ ಮಾಡುತ್ತಿರುವ ಬಾಲಕಾರ್ಮಿಕರು ಅದರಲ್ಲೂ ಹೆಣ್ಣು ಮಕ್ಕಳು ಈ ಯೋಜನೆಯ ಪ್ರಯೋಜನೆ ಪಡೆಯಲು ಅರ್ಹರಿರುತ್ತಾರೆ.

ಅನುದಾನ ವಿಧಾನ : ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲ್ಪಟ್ಟ ಸಮಿತಿಯು ಸೂಕ್ತವಾದ ಸ್ವಯಂ ಸೇವಾ ಸಂಸ್ಥೆಯನ್ನು ಗುರುತಿಸಿ ಬಾಲಕಾರ್ಮಿಕರಿಗೆ ವಿಶೇಷ ಶಾಲೆಯನ್ನು ಪ್ರಾರಂಭಿಸಲು ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಜಾರಿಗೆ ತಂದಿರುತ್ತಾರೆ.

ಮಹಿಳಾ ಕಾನೂನು ಪದವೀಧರರಿಗೆ ಧನ ಸಹಾಯ

ಕಾನೂನು ಪದವಿ ಪಡೆದಿರುವ ಮಹಿಳೆಯರಿಗೆ ಕಾನೂನು ಆಡಳಿತದಲ್ಲಿ ತರಬೇತಿ ಪಡೆಯಲು ಆರ್ಥಿಕ ಸಹಾಯ ನೀಡುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.

ಅರ್ಹತೆ : ಕುಟುಂಬದ ವಾರ್ಷಿಕ ವರಮಾನವು ಎಲ್ಲಾ ಮೂಲಗಳಿಂದ ೪೦ ಸಾವಿರ ರೂಪಾಯಿಗಳಿಗಿಂತ ಕಡಿಮೆ ಇರಬೇಕು.

* ಕಾನೂನು ಪಡೆದಿರುವ ಮಹಿಳೆ ೩೫ ವರ್ಷ ವಯೋಮಿತಿಯೊಳಗಿರಬೇಕು.

* ಅಭ್ಯರ್ಥಿಯು ಬಾರ್ ಕೌನ್ಸಿನಲ್ಲಿ ತಮ್ಮ ಹೆಸರನ್ನು ನೊಂದಾಯಿಸಬೇಕು ಮತ್ತು ಪಬ್ಲಿಕ್ ಪ್ರಾಸಿಕ್ಯೂಟರ್ ಅಥವಾ ೨ ವರ್ಷ ವಕೀಲಿಕೆ ಮಾಡಿ ಅನುಭವ ಪಡೆದು ಅನುಭವ ಇರುವ ವಕೀಲರ ಅಧೀನದಲ್ಲಿ ತರಬೇತಿ ಹೊಂದಿರಬೇಕು.

ಅನುದಾನ ವಿಧಾನ : ತರಬೇತಿ ಪಡೆಯಲು ಆಯ್ಕೆಯಾದ ಮಹಿಳಾ ಕಾನೂನು ಪದವೀಧರರಿಗೆ ಮಾಹೆಯಾನ ೭೫೦.೦೦ ರೂಪಾಯಿಗಳು ಮಾತ್ರ ಆರ್ಥಿಕ ಸಹಾಯ ಧನವನ್ನು ನಾಲ್ಕು ವರ್ಷಗಳವರೆಗೆ ನೀಡಲಾಗುತ್ತದೆ. ತರಬೇತಿಗೆ ನೊಂದಾಯಿಸಿಕೊಳ್ಳಲು ರೂಪಾಯಿ ೪೬೦.೦೦ಗಳನ್ನು ಮಾತ್ರ ಮತ್ತು ಅತ್ಯಾವಶ್ಯಕ ಕಾನೂನು ಪುಸ್ತಕಗಳನ್ನು ಖರೀದಿಸಲು ರೂಪಾಯಿ ೫೦೦.೦೦ಗಳನ್ನು ನೀಡಲಾಗುತ್ತದೆ.

ವಿಧವಾ ವೇತನ

ಯಾವುದೇ ರೀತಿಯ ಜೀವನಾಧಾರವೂ ಇಲ್ಲದ ನಿರ್ಗತಿಕ ವಿಧವೆಯರಿಗೆ ಹಣಕಾಸು ನೆರವು ನೀಡುವ ಮೂಲಕ ಭದ್ರತೆಯನ್ನು ಒದಗಿಸುವುದು.

ಅರ್ಹತೆ : ವಿಧವೆಯು ೧೮ ವರ್ಷಕ್ಕೆ ಮೇಲ್ಪಟ್ಟು ವಯಸ್ಸಿನವರಾಗಿದ್ದು ಸಂಕಷ್ಟ ಸ್ಥಿತಿಯಲ್ಲಿದ್ದು

ಹಣಕಾಸಿನ ನೆರವಿನ ಅವಶ್ಯಕತೆ ಇರಬೇಕು.

* ಪತಿಯು ಜೀವಿಸಿಲ್ಲದ ಅಥವಾ ಮೃತಪಟ್ಟಿರುವವನ ಪತ್ನಿ ಅವಳ ಸಂಬಂಧಿಕರ ಆಶ್ರಯವಿಲ್ಲದೆ ಮತ್ತು ೬,೦೦೦ ರೂಪಾಯಿಗಳಿಗೆ ಮೀರದ ವಾರ್ಷಿಕ ಆದಾಯ ಹೊಂದಿಲ್ಲದಿರುವ ಮಹಿಳೆಯಾಗಿರಬೇಕು.

* ಅಂಗವಿಕಲರ ವೇತನ, ವೃದ್ಧಾಪ್ಯವೇತನ ಮುಂತಾದ ಯೋಜನೆಗಳಡಿ ನಿರ್ವಹಣಾ ಭತ್ಯೆಗೆ ಅರ್ಹರಾಗಿರುವ ವಿಧವೆಯರು ವಿಧವಾ ವೇತನಕ್ಕೆ ಅರ್ಹರಾಗಿರುವುದಿಲ್ಲ.

ಆರ್ಥಿಕ ಸಹಾಯ : ಪ್ರತಿ ತಿಂಗಳು ರೂಪಾಯಿ ೧೦೦ಂಗಳನ್ನು ಮಾತ್ರ ನಿರ್ಗತಿಕ ವಿಧವೆಯರಿಗೆ ಸಂದಾಯ ಮಾಡಲಾಗುವುದು.

ಸಂಕಷ್ಟ ಪರಿಸ್ಥಿತಿಯಲ್ಲಿರುವ ಮಕ್ಕಳಿಗೆ ಶಿಷ್ಯವೇತನ

೫ನೇ ತರಗತಿಯಿಂದ ಪದವಿ ಶಿಕ್ಷಣದವರೆಗೆ ವ್ಯಾಸಂಗ ಮಾಡುತ್ತಿರುವ ದೇವದಾಸಿಯರ ಮಕ್ಕಳು, ವೇಶ್ಯಯರ ಮಕ್ಕಳು, ಖೈದಿಗಳ ಮಕ್ಕಳು ಮತ್ತು ಕುಡಿತದ ದುಶ್ಚಟಕ್ಕೆ ಬಲಿಯಾದ ಕುಟುಂಬದ ಮಕ್ಕಳಿಗೆ ಆರ್ಥಿಕ ಸಹಾಯ ನೀಡುವುದು ಈ ಯೋಜನೆಯ ಉದ್ದೇಶವಾಗಿರುತ್ತದೆ.

ಅನುದಾನ ವಿಧಾನ : ೧೦ ತಿಂಗಳು ಆರ್ಥಿಕ ಸಹಾಯವನ್ನು ಕೆಳಕಂಡಂತೆ ಮಂಜೂರಾತಿ ನೀಡಲಾಗುತ್ತದೆ.

೫ನೇ ತರಗತಿಯಿಂದ ೭ನೇ ತರಗತಿ, ತಿಂಗಳಿಗೆ ರೂ.೧೦೦, ೮ನೇ ತರಗತಿಯಿಂದ ೧೦ನೇ ತರಗತಿಗೆ ತಿಂಗಳಿಗೆ ರೂ. ೧೫೦, ಹಾಗೂ ಪಿ.ಯು.ಸಿ.ಯಿಂದ ಪದವಿ ಶಿಕ್ಷಣಕ್ಕೆ ತಿಂಗಳಿಗೆ ರೂ. ೩೦೦.೦೦

(ಮೂಲ : ಕರ್ನಾಟಕ ವಿಕಾಸ ಮಾರ್ಚ್ ೨೦೦೦ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಯೋಜನೆಗಳು ಎಂ.ಆರ್ ರಂಗಸ್ವಾಮಯ್ಯ ಸಹಾಯಕ ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ)

ಸ್ವ-ಶಕ್ತಿ ಯೋಜನೆ

ಗ್ರಾಮೀಣ ಪ್ರದೇಶದಲ್ಲಿ ಆರ್ಥಿಕವಾಗಿ ಹಿಂದುಳಿದ ಮಹಿಳೆಯರನ್ನು ಆರ್ಥಿಕವಾಗಿ ಅಭಿವೃದ್ಧಿ ಪಡಿಸಲು ಹಾಗೂ ಆರ್ಥಿಕವಾಗಿ ಸ್ವಾವಲಂಭಿಗಳನ್ನಾಗಿ ಮಾಡಲು ಕರ್ನಾಟಕ ರಾಜ್ಯದ ಮಹಿಳಾ ಅಭಿವೃದ್ಧಿ ನಿಗಮವು ೨೦೦೦-೦೧ರಲ್ಲಿ **ಮಹಿಳಾ ಸಬಲೀಕರಣ ವರ್ಷವೆಂದು** ಘೋಷಿಸಿತು. ಈ ಯೋಜನೆಯು ಮಹಿಳೆಯರ ಬಲವರ್ಧನೆಗೆ ಸಹಾಯಕವಾಗುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಮಹಿಳಾ ಮಂಡಲಗಳು ಈ ಯೋಜನೆಯಡಿ ಕಾರ್ಯನಿರ್ವಹಿಸುತ್ತವೆ. ಈ ಯೋಜನೆಯು ತನ್ನ ಆಡಳಿತವನ್ನು ಯಾವರೀತಿ ಮಾಡುತ್ತದೆ, ಹಾಗೂ ತನ್ನ ಉದ್ದೇಶಗಳನ್ನು ಕಾರ್ಯನುಷ್ಠಾನಗೊಳಿಸುವ ರೀತಿ ಮತ್ತು ಯೋಜನೆಯ ತಂತ್ರವನ್ನು ಈ ಮುಂದಿನಂತೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಸ್ವ-ಶಕ್ತಿ ಯೋಜನೆಯ ಪಕ್ಷಿನೋಟ

ಈ ಯೋಜನೆಯು ಬಡತನ ನಿವಾರಣಾ ಕಾರ್ಯಕ್ರಮವಾಗಿದೆ. ಈ ಯೋಜನೆಯು ಆರ್ಥಿಕವಾಗಿ ಹಿಂದುಳಿದ ಗ್ರಾಮೀಣ ಪ್ರದೇಶದ ಬುಡಕಟ್ಟು ಮಹಿಳೆಯರನ್ನು ಮತ್ತು ಬಡತನಾ ರೇಖೆಯ ಕೆಳಗಿರುವ ಮಹಿಳೆಯರನ್ನು ದೃಷ್ಟಿಯಲ್ಲಿರಿಸಿಕೊಂಡಿದೆ. ಆರ್ಥಿಕವಾಗಿ ಸಬಲರನ್ನಾಗಿ ಮತ್ತು ಸ್ವಾವಲಂಬಿಗಳಾನ್ನಾಗಿ ಮಾಡಲು ತರಬೇತಿ ಘಟಕಗಳನ್ನು ಹಾಗೂ ಉತ್ಪಾದನಾ ಘಟಕಗಳನ್ನು ಪ್ರಾರಂಭಿಸಲು ಸ್ವ-ಶಕ್ತಿ ಯೋಜನೆಯಡಿಯಲ್ಲಿ ಅವಕಾಶವಿದೆ. ಈ ಹಿನ್ನೆಲೆಯಲ್ಲಿ ಮಹಿಳಾ ಸ್ವ-ಸಹಾಯ ಸಂಘಗಳನ್ನು ಸ್ಥಾಪಿಸಿ ಹಲವಾರು ಮಹಿಳೆಯರಿಗೆ ಬ್ಯಾಂಕು ಮೂಲಕ ಸಾಲವನ್ನು ಒದಗಿಸುವುದು ಹಾಗೂ ಮಕ್ಕಳು ಮತ್ತು ಮಹಿಳೆಯರ ಬದುಕು ಹಸನಾಗಿಸುವ ಯೋಜನೆಗಳನ್ನು ಹಾಕಿಕೊಳ್ಳುವುದು. ಇದರ ಧ್ಯೇಯವಾಗಿದೆ. ನಂತರ ಮಹಿಳೆಯರಲ್ಲಿ ರಚನಾತ್ಮಕ ಚಟುವಟಿಕೆಗಳ ಕ್ರಿಯಾಶೀಲತೆ ತುಂಬುವ ಹಾಗೂ ವೃತ್ತಿ ಕೌಶಲ್ಯ ವೃದ್ಧಿಸುವಲ್ಲಿ ಮಹಿಳಾ ಅಭಿವೃದ್ಧಿ ಯೋಜನೆಯು ಸಹಾಯವಾಗಿದೆ.

ಈ ಹಿನ್ನೆಲೆಯಲ್ಲಿ ಗ್ರಾಮೀಣ ಪ್ರದೇಶದಲ್ಲಿರುವ ಬುಡಕಟ್ಟು ಮಹಿಳೆಯರು ಮತ್ತು ಬಡವರು. ಆರ್ಥಿಕವಾಗಿ ಹಿಂದುಳಿದವರು, ಆರ್ಥಿಕ ಸಂಕಷ್ಟಕ್ಕೊಳಗಾದವರಿಗೆ ಈ ಸ್ವ-ಶಕ್ತಿ ಯೋಜನೆ ಸಹಾಯವಾಗಬಲ್ಲದು. ಇವರು ಈ ಯೋಜನೆಯ ಮೊರೆ ಹೋಗಲು ಕಾರಣ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಾಗಿ ಬಡವರು ಆರ್ಥಿಕವಾಗಿ ಸಂಕಷ್ಟಕ್ಕೊಳಗಾದವರು ಇರುವುದರಿಂದ ಬ್ಯಾಂಕು ಸಾಲ ಸೌಲಭ್ಯಗಳಿಂದ ಸಾಮಾನ್ಯವಾಗಿ ವಂಚಿತರಾಗಿರುತ್ತಾರೆ. ಆದುದರಿಂದ ತಮ್ಮ ಜೀವನ ಸಾಗಿಸುವ ಸಲುವಾಗಿ ಹಣವನ್ನು ಪಡೆಯಲು ಅನಿವಾರ್ಯವಾಗಿ ಲೇವಾ ದೇವಿಗಾರರು ಮತ್ತು ಶ್ರೀಮಂತರ ಮೊರೆ ಹೋಗಬೇಕಾಗುತ್ತದೆ. ಕೆಲವು ಸಂದರ್ಭಗಳಲ್ಲಿ ತೆಗೆದುಕೊಂಡ ಸಾಲಕ್ಕಿಂತ ಬಡ್ಡಿಯೇ ಹೆಚ್ಚಾಗಿ ಬಡ್ಡಿಯನ್ನು ಕೊಡಲಾಗದೇ ಅಸಲನ್ನು ತೀರಿಸಲಾಗದೆ ಇರುವ ಅಲ್ಪ ಸ್ವಲ್ಪ ಆಸ್ತಿಯನ್ನು ಕಳೆದುಕೊಂಡು ನಿರ್ಗತಿಕರಾಗಬೇಕಾಗುತ್ತದೆ. ನಂತರ ಸಾಲದಲ್ಲಿ ಹುಟ್ಟಿ ಸಾಲದಲ್ಲೇ ಸಾಯುವ ಪರಿಸ್ಥಿತಿ ಬರುತ್ತದೆ. ಈ ದಿಶೆಯಲ್ಲಿ ಲೇವಾ ದೇವಿದಾರರು ಹಾಗೂ ಶ್ರೀಮಂತರ ಕಪಿಮುಷ್ಠಿಯಿಂದ ಬಡವರನ್ನು ಪಾರು ಮಾಡಲು ಈ ಯೋಜನೆ ಸಹಾಯವಾಗುತ್ತದೆ. ಹಾಗೆಯೇ ಲೇವಾ ದೇವಿದಾರರಿಂದ ಶೋಷಣೆಗೆ ಒಳಗಾದವರು ಹೆಚ್ಚಾಗಿ ಬಡ ಬುಡಕಟ್ಟು ಮಹಿಳೆಯರೇ ಆಗಿರುತ್ತಾರೆ ಎಂಬುದು ಇಲ್ಲಿ ಮುಖ್ಯ.

ಆದಕಾರಣ ಇವರಿಗೆ ಸುಲಭವಾಗಿ ಹಣದ ಸೌಲಭ್ಯ ದೊರೆಯುವಂತೆ ಮಾಡುವ ದೃಷ್ಟಿಯಿಂದ ಆರ್ಥಿಕವಾಗಿ ಹಿಂದುಳಿದವರಾದ ಬಡವರಿಗೆ ಮಾತ್ರ ಸ್ವ ಸಹಾಯ ಸಂಘಗಳ ಅವಶ್ಯಕತೆ ಇದೆ ಎಂದು ತಿಳಿದು ಸರ್ಕಾರವು ಸ್ವ-ಶಕ್ತಿ ಯೋಜನೆಯ ಮೂಲಕ ಗ್ರಾಮೀಣ ಪ್ರದೇಶದ ಬಡ ಮಹಿಳೆಯರ ನೆರವಿನಲ್ಲಿ ಈ ಯೋಜನೆಯ ಮುಖಾಂತರ ಸ್ವ-ಸಹಾಯ ಸಂಘಗಳನ್ನು ಸ್ಥಾಪಿಸಿದೆ. ಈ ಸ್ವ-ಶಕ್ತಿ ಯೋಜನೆಯ ಕೆಲವು ಉದ್ದೇಶಗಳನ್ನು ಕೆಳಗೆ ತಿಳಿಸಲಾಗಿದೆ.

* ಮಹಿಳೆಯರಿಗೆ ಆರ್ಥಿಕ ಪ್ರಗತಿ ಸಾಧಿಸುವುದಕ್ಕೆ ನೆರವು ನೀಡುವುದು ಹಾಗೂ ಬ್ಯಾಂಕು ಮೂಲಕ ಸಾಲವನ್ನು ಒದಗಿಸುವುದು.

* ಈ ಯೋಜನೆಯ ಮೂಲಕ ಮಹಿಳೆಯರಲ್ಲಿ ಆತ್ಮ ವಿಶ್ವಾಸ ಮತ್ತು ಸ್ವಾವಲಂಬನೆಯನ್ನು ಹೆಚ್ಚಿಸುವುದು.

* ಬಡ ಮಹಿಳೆಯರ ಆದಾಯವನ್ನು ಹೆಚ್ಚಿಸಿ ಆರ್ಥಿಕ ಸ್ಥಿರತೆಯನ್ನು ಮೂಡಿಸುವುದು.

* ಆರೋಗ್ಯ ಮತ್ತು ಸ್ವಚ್ಛತೆ ಬಗ್ಗೆ ಸದಸ್ಯರಲ್ಲಿ ಜಾಗೃತಿ ಮೂಡಿಸುವುದು.

* ಬಡತನ ರೇಖೆಗಿಂತಲೂ ಕೆಳಗಿರುವ ಗ್ರಾಮೀಣ ಬುಡಕಟ್ಟು ಮಹಿಳೆಯರ ಸರ್ವತೋಮುಖ ಅಭಿವೃದ್ಧಿ ಹಾಗೂ ಸ್ವಾವಲಂಬನೆಗೆ ಆದ್ಯತೆ ನೀಡುವುದು.

* ಸಾಮಾಜಿಕ ಅಭಿವೃದ್ಧಿಯಲ್ಲಿ ಅಂತರಾಷ್ಟ್ರೀಯ ಮಾದರಿಯಾಗುವಂತೆ ಮಾಡುವುದು.

* ಸ್ವ ಸಹಾಯ ಗುಂಪು ಮತ್ತು ಹಣಕಾಸು ಸಂಸ್ಥೆಗಳ ನಡುವೆ ನಿರಂತರ ಸಂಬಂಧ ಬೆಳೆಸುವುದು.

* ಮಹಿಳೆಯರ ಸಮಸ್ಯೆಗಳಿಗೆ, ಅಗತ್ಯಗಳಿಗೆ ಸ್ಪಂದಿಸಲು ಸರಕಾರದ ಇಲಾಖೆಗಳು ಸರ್ಕಾರೇತರ ಹಾಗೂ ಹಣಕಾಸು ಸಂಸ್ಥೆಗಳನ್ನು ಜಾಗೃತಗೊಳಿಸಿ ಅವರ ಬಲ ಹೆಚ್ಚಿಸುವುದು.

* ಉಳಿತಾಯ ಹಾಗೂ ಸಾಲ ನಿರ್ವಹಣೆಯ ಬಗ್ಗೆ ಅರಿವು ಮೂಡಿಸುವುದು.

* ಸಾಮಾಜಿಕ ಬದಲಾವಣೆಯಲ್ಲಿ ಮಧ್ಯವರ್ತಿಗಳಾಗಿರುವಂತೆ ಮಹಿಳೆಯರನ್ನು ಸಶಕ್ತರನ್ನಾಗಿಸುವುದು.

ಈ ರೀತಿ ಈ ಯೋಜನೆಯು ತನ್ನ ಉದ್ದೇಶಗಳನ್ನು ಹೊಂದಿದೆ. ಇಷ್ಟಲ್ಲದೆ ಯೋಜನೆಯು ಕೆಲವೊಂದು ವಿಶೇಷ ಕಾರ್ಯಕ್ರಮಗಳನ್ನು ಹೊಂದಿದೆ. ಅವು ಈ ರೀತಿ ಇವೆ.

೧. ಮಹಿಳಾ ಸಂಘಟನೆ ಹಾಗೂ ಸಂಘ ಸಂಸ್ಥೆಗಳ ಬಲವರ್ಧನೆ

* ಉಳಿತಾಯ ಮತ್ತು ಸಾಲ ನಿರ್ವಹಣೆಯ ಆಧಾರದ ಮೇಲೆ ಸ್ವ-ಸಹಾಯ ಸಂಘಗಳ ರಚನೆ.

* ಸೂಕ್ತ ತರಬೇತಿ, ಮಾಹಿತಿ, ಶಿಕ್ಷಣ ಮತ್ತು ಸಂಪರ್ಕ ಸಾಧನಗಳಿಂದ ಗುಂಪುಗಳ ಸಾಮರ್ಥ್ಯ ಮತ್ತು ಶಕ್ತಿಯನ್ನು ಬೆಳಸಿ ಬಲಗೊಳಿಸುವುದು.

* ಸ್ವ-ಸಹಾಯ ಗುಂಪುಗಳ ಒಕ್ಕೂಟಗಳನ್ನು ಸಂಘಟಿಸಿ ಬಲಗೊಳಿಸುವುದು.

* ಈ ಯೋಜನೆಯ ಕಾರ್ಯ ಪ್ರಕ್ರಿಯೆಯಲ್ಲಿ ಭಾಗವಹಿಸುವ ಸಂಘ, ಸಂಸ್ಥೆಗಳೆಂದರೆ ಮಹಿಳಾ ಅಭಿವೃದ್ಧಿ ನಿಗಮ, ಸ್ವಯಂ ಸೇವಾ ಸಂಸ್ಥೆಗಳು, ಸರ್ಕಾರದ ವಿವಿಧ ಅಭಿವೃದ್ಧಿ ಇಲಾಖೆಗಳು, ಬ್ಯಾಂಕು ಮತ್ತು ಹಣಕಾಸು ಸಂಸ್ಥೆಗಳು.

೨. ಆರ್ಥಿಕ ಉತ್ಪಾದನಾ ಕಾರ್ಯಕ್ರಮಗಳಿಗೆ ಪೂರಕ ವ್ಯವಸ್ಥೆಯನ್ನು ರೂಪಿಸುವುದು

* ಬಂಡವಾಳ ಕ್ರೋಢೀಕರಣ

* ಕೃಷಿಯಾದಾರಿತ ಹಾಗೂ ಕೃಷಿಯೇತರ ಕಾರ್ಯಕ್ರಮಗಳಿಗೆ ಅವಶ್ಯವಿರುವ ವ್ಯವಹಾರಿಕ ಮತ್ತು ತಾಂತ್ರಿಕ ಸೇವೆಗಳನ್ನು ಒದಗಿಸುವುದು.

೩. ಸಾಮಾಜಿಕ ಸೇವೆ ಹಾಗೂ ಸಮುದಾಯ ಸ್ವತ್ತುಗಳ ನಿರ್ಮಾಣಕ್ಕೆ ಅಗತ್ಯವಿರುವ ಬಂಡವಾಳ ಕ್ರೋಢೀಕರಣಕ್ಕೆ ಪೂರಕ ವ್ಯವಸ್ಥೆಯನ್ನು ರೂಪಿಸುವುದು.

* ಉತ್ತಮ ಆರೋಗ್ಯ

ಕಾರ್ಯನಿರತ ಮಹಿಳೆಯರ ಅನುಕೂಲಕ್ಕಾಗಿ ಶಿಶುಪಾಲನಾ ಕೇಂದ್ರಗಳು.

ಈ ರೀತಿ ಈ ಯೋಜನೆಯು ಅನೇಕ ಕಾರ್ಯಕ್ರಮಗಳನ್ನು ಹೊಂದಿದೆ.

ಯೋಜನೆಯ ಅನುಷ್ಠಾನದ ತಂತ್ರಗಳು

ಬಡತನದಲ್ಲಿರುವ ಮಹಿಳೆಯರ ಮೇಲೆ ನಿರ್ದಿಷ್ಟ ಪ್ರಭಾವ ಬೀರುವ ಸಮಗ್ರತಾ ದೃಷ್ಠಿಯ ಜೊತೆಯಲ್ಲಿ ವಿವೇಚನಾಯುತ ಸಶಕ್ತತೆ ಹಾಗೂ ಅಭಿವೃದ್ಧಿಯ ಚಟುವಟಿಕೆಗಳನ್ನು ಒಂದುಗೂಡಿಸುವುದೇ ಈ ಯೋಜನೆಯ ಅನುಷ್ಟಾನ ತಂತ್ರವಾಗಿದೆ. ಈ ಯೋಜನೆಯು ನಾಲ್ಕು ಆಧಾರ ಸ್ತಂಭಗಳನ್ನು ಆಧರಿಸಿದೆ.

* ಪ್ರಸ್ತುತ ಯಶಸ್ವಿ ಸ್ವ-ಸಹಾಯ ಸಂಘ ಅಥವಾ ಗುಂಪುಗಳ ಅನುಭವ.

* ಗುಂಪುಗಳಿಗೆ ಸಾಲ ನೀಡುವಿಕೆಯಲ್ಲಿ ಬೆಳೆಯುತ್ತಿರುವ ಬ್ಯಾಂಕುಗಳ ಸಂವೇದನಾಶೀಲತೆ.

* ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ಪಂಚಾಯತರಾಜ್ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ನೀಡಿದ ಅವಕಾಶಗಳ ಸದುಪಯೋಗ.

* ಇತರೆ ಚಟುವಟಿಕೆಗಳ ಅನುಭವ.

ಯೋಜನೆಯ ಅನುಷ್ಠಾನದ ಹಂತಗಳು

ಸ್ವ-ಶಕ್ತಿ ಯೋಜನೆಯ ಅವಧಿ ೫ ವರ್ಷಗಳು. ಈ ೫ ವರ್ಷಗಳಲ್ಲಿ ಮೂರು ಹಂತಗಳಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸುವುದು.

ಹಂತ ೧. (೦-೪ ತಿಂಗಳು)

ಪ್ರಾಥಮಿಕ ಹಂತ : ಈ ಹಂತದಲ್ಲಿ ಪ್ರಮುಖವಾಗಿ ನಡೆಯುವ ಕ್ರಿಯೆಗಳು

೧. ಪ್ರತಿ ಗ್ರಾಮದಲ್ಲಿಯೂ ಜನತೆಯ ಮೇಲೆ ಪರಿಣಾಮ ಬೀರುವ, ಅಭಿಪ್ರಾಯ ರೂಪಿಸುವ ನಾಯಕರನ್ನು ಅಥವಾ ಮುಖಂಡರನ್ನು ಗುರುತಿಸುವುದು.

೨. ಗುರುತಿಸಿದ ನಾಯಕರಿಗೆ ಯೋಜನೆಯ ಕುರಿತು ಸಂಪೂರ್ಣ ಮಾಹಿತಿಯನ್ನು ನೀಡುವುದು ಹಾಗೂ ಗ್ರಾಮ ಸಭೆಯನ್ನು ನಡೆಸಲು ದಿನಾಂಕವನ್ನು ನಿಗಧಿಗೊಳಿಸುವದು.

೩. ಗುಂಪಿನ ಪ್ರತಿ ನಿಧಿಗಳನ್ನು ಆಯ್ಕೆ ಮಾಡುವುದು.

೪. ಬಡತನ ರೇಖೆಗಿಂತ ಕೆಳಗಿರುವ ಮಹಿಳೆಯರನ್ನು ಗುರುತಿಸಿ ಸ್ವ-ಸಹಾಯ ಸಂಘವನ್ನು ರಚಿಸುವುದು.

೫. ಸ್ವ ಸಹಾಯ ಸಂಘದ ಮೊದಲ ಸಭೆ ಸಂಘದ ನಿಬಂಧನೆಗಳನ್ನು ಅಳವಡಿಸಿಕೊಳ್ಳುವುದು.

೬. ಉಳಿತಾಯ ಹಾಗೂ ಸಾಲ ನಿರ್ವಹಣೆಯ ಬಗ್ಗೆ ಅರಿವು ಮೂಢಿಸುವುದು.

ಹಂತ ೨ (೪-೧೫ ತಿಂಗಳು) ಸಂಘದ ಸ್ಥಿರತೆ

೧. ನಿರಂತರ ಉಳಿತಾಯ ಕಾರ್ಯಕ್ರಮಗಳು

೨. ಜಾಗೃತಿ ಕಾರ್ಯಕ್ರಮಗಳು

೩. ತರಬೇತಿ

ಹಂತ ೩ (೧೫-೩೬ ತಿಂಗಳು) ಸ್ವಾವಲಂಬನೆ ಬೆಳವಣಿಗೆ

೧. ಕೃಷಿಯಾಧಾರಿತ ಚಟುವಟಿಕೆಗಳು

೨. ಕೃಷಿಯೇತರ ಚಟುವಟಿಕೆಗಳು

೩. ಸರ್ಕಾರಿ ಇಲಾಖೆಗಳೊಂದಿಗೆ ಸಂಬಂಧ

೪. ವಾಣಿಜ್ಯ ಹಾಗೂ ನಬಾರ್ಡ್ ಬ್ಯಾಂಕುಗಳೊಂದಿಗೆ ಸಂಬಂಧ

ಈ ರೀತಿ ಸ್ವ-ಶಕ್ತಿ ಯೋಜನೆಯ ಮಹಿಳೆಯರನ್ನು ಅದರಲ್ಲಿ ಹಿಂದುಳಿದ ಮತ್ತು ಆರ್ಥಿಕವಾಗಿ ದುರ್ಬಲವಾಗಿರುವ ಮಹಿಳೆಯರ ಅಭಿವೃದ್ಧಿಗೆ ಹಾಗೂ ಸಾಮಾಜಿಕ ಬದಲಾವಣೆಗೆ ಪೂರಕ ಪರಿಸರವನ್ನು ಸೃಷ್ಟಿಸುವ ಪ್ರಕ್ರಿಯೆಗಳನ್ನು ಬಲಪಡಿಸುವುದು ಈ ಯೋಜನೆಯ ತಂತ್ರವಾಗಿದೆ. ಅದರಂತೆ ಈ ಸ್ವಶಕ್ತಿಯ ಆಶಯವನ್ನು ನೋಡಿದಾಗ

ಸ್ವ-ಶಕ್ತಿ ಯೋಜನೆಯ ಆಶಯ

ಸ್ವ-ಸಹಾಯ ಸಂಘಗಳ ಮಹಿಳೆಯರಲ್ಲಿ........

೧. ಆತ್ಮವಿಶ್ವಾಸ, ಆತ್ಮಗೌರವ ಹಾಗೂ ಸ್ವಾಯತ್ತತೆಯನ್ನು ಹೆಚ್ಚಿಸುವುದು.

೨. ಗುಂಪಿನ ಸದಸ್ಯರಲ್ಲಿ ಅವಶ್ಯಕತೆಗಳನ್ನು ಗುರುತಿಸುವ, ಆಗ್ರಹ ಪಡಿಸುವ ಮತ್ತು ವೈಯಕ್ತಿಕ ಹಾಗೂ ಗುಂಪಿನ ಹಕ್ಕುಗಳನ್ನು ಪ್ರತಿಪಾಧಿಸುವ ಸಾಮರ್ಥ್ಯವನ್ನು ಬೆಳೆಸುವುದು.

೩. ಆರ್ಥಿಕ ಹಾಗೂ ಸಾಮಾಜಿಕ ಸಂಪನ್ಮೂಲಗಳ ಮೇಲೆ ಹೆಚ್ಚಿನ ನಿಯಂತ್ರಣ ಮತ್ತು ರಾಜಕೀಯ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾತ್ರವಹಿಸುವ ಅವಕಾಶಗಳನ್ನು ಕಲ್ಪಿಸುವುದು. ಈ ರೀತಿ ಈ ಯೋಜನೆಯು ಮಹಿಳೆಯರನ್ನು ಸ್ವ-ಸಹಾಯ ಗುಂಪುಗಳಲ್ಲಿ ಒಂದೆಡೆ ಸೇರಿಸಿ, ಹೆಚ್ಚಿನ ಸ್ವಾವಲಂಬನೆ, ಆತ್ಮವಿಶ್ವಾಸ ಬೆಳೆಸಿ ಇವರ ಬದುಕಲ್ಲಿ ಗುಣಾತ್ಮಕ ಬದಲಾವಣೆಯನ್ನು ತರುವುದಾಗಿದೆ.

ಆಡಳಿತ ರಚನೆ

ಈ ಯೋಜನೆಯು ಕೇಂದ್ರದ ಯೋಜನಾ ಆಯೋಗದ ಒಂಬತ್ತನೇ ಪಂಚವಾರ್ಷಿಕ ಯೋಜನೆಯಲ್ಲಿ ಮಹಿಳಾ ಅಭಿವೃದ್ಧಿಗಾಗಿ ಸಾಮಾಜಿಕ ಮತ್ತು ಆರ್ಥಿಕ ವಲಯಗಳ ಅಭಿವೃದ್ಧಿ ಸಮ್ಮಿಲನವು, ಕೆಲವು ಮಹಿಳೆಯರ ಬಗ್ಗೆ ಗುರಿಗಳನ್ನು ಇಟ್ಟುಕೊಂಡು ಅವುಗಳು ಪೂರಕವಾಗುವಂತೆ ರೂಪಿಸಿದೆ. ಸಾಮಾಜಿಕ ಬದಲಾವಣೆಯಲ್ಲಿ ಮಧ್ಯವರ್ತಿಗಳಾಗಿರುವಂತೆ ಮಹಿಳೆಯರನ್ನು ಅದರಲ್ಲಿಯೂ ಆರ್ಥಿಕವಾಗಿ ಹಿಂದುಳಿದ ಬುಡಕಟ್ಟು ಮಹಿಳೆಯರು ಮತ್ತು ಇತರೆ ಮಹಿಳೆಯರನ್ನು ಸಶಕ್ತರನ್ನಾಗಿಸುವುದು. ಹಾಗೆಯೇ ಅಸ್ಥಿತ್ವದಲ್ಲಿರುವ ಸೇವಾ ಕಾರ್ಯಕ್ರಮಗಳ ಮೂಲಕ ಮಹಿಳೆಯರನ್ನು ಸಮಗ್ರ ಸಶಕ್ತತೆಯತ್ತ ದುಡಿಯುವಂತೆ ಮಾಡುವುದು. ನಂತರ ಮಹಿಳೆಯರನ್ನು ಸ್ವ-ಸಹಾಯ ಗುಂಪುಗಳ ಮುಖಾಂತರ ಸಂಘಟಿಸಿ ಮಹಿಳಾ ಸಶಕ್ತತೆಯ ಪ್ರಕ್ರಿಯೆಯನ್ನು ಆರಂಭಿಸಿ ಆಧುನಿಕ ಮಾರುಕಟ್ಟೆಗನುಗುಣವಾಗಿ ಕೌಶಲ್ಯತೆಯನ್ನು ಬೆಳೆಸುವುದು ಈ ಯೋಜನೆಯ ಮುಖ್ಯ ಕರ್ತವ್ಯವಾಗಿದೆ.

ಈ ಯೋಜನೆಯು ಕೇಂದ್ರದಲ್ಲಿ ಅಂದರೆ ರಾಷ್ಟ್ರಮಟ್ಟದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿಯಲ್ಲಿ ಬರುತ್ತದೆ. ನಂತರ ಕೇಂದ್ರದಲ್ಲಿ ಅಥವಾ ರಾಷ್ಟ್ರಮಟ್ಟದಲ್ಲಿ ಈ ಯೋಜನೆಯ ಪ್ರಮುಖ ಪಾಲುದಾರರು ಅಂದರೆ 'ರಾಷ್ಟ್ರೀಯ ಸಲಹಾ ಗುಂಪು', 'ಕೇಂದ್ರೀಯ ಯೋಜನಾ' ಬೆಂಬಲ ಘಟಕ, ಇದರ ಮುಖ್ಯ ಬೆಳವಣಿಗೆಯನ್ನು ಗುರುತಿಸುವ ಮತ್ತು ಅವಲೋಕಿಸುವ ಸಂಸ್ಥೆಗಳು ರಾಷ್ಟ್ರೀಯ ಮಟ್ಟದಲ್ಲಿ ಈ ಯೋಜನೆಯ ಆಡಳಿತವನ್ನು ನಡೆಸುವುದು ಕಂಡು ಬರುತ್ತದೆ. ಹಾಗೆಯೇ ರಾಜ್ಯ ಮಟ್ಟದಲ್ಲಿ ಸಹ ಹಲವಾರು ಘಟಕಗಳು ಪ್ರಮುಖ ಪಾಲುದಾರರಾಗಿ ಆಡಳಿತವನ್ನು ಮತ್ತು ಇವುಗಳನ್ನು ಪೋಷಿಸಿ ಬೆಳೆಸುವುದು ಕಂಡು ಬರುತ್ತದೆ. ರಾಜ್ಯ ಮಟ್ಟದಲ್ಲಿ ಈ ಸ್ವ-ಶಕ್ತಿ ಯೋಜನೆಯು ರಾಜ್ಯ ಯೋಜನಾ ಚಾಲನಾ ಸಮಿತಿಯಡಿಯಲ್ಲಿ ಬರುತ್ತದೆ. ನಂತರ ಇದನ್ನು 'ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ' 'ರಾಜ್ಯ ಯೋಜನಾ ಕಾರ್ಯನಿರತ ಗುಂಪು' 'ರಾಜ್ಯ ಮಹಿಳಾ ಅಬಿವೃದ್ಧಿ ನಿಗಮ', 'ರಾಜ್ಯ ಯೋಜನಾ ನಿರ್ವಹಣಾ ಘಟಕ', ಈ ರೀತಿ ಯೋಜನೆಯ ಪ್ರಮುಖ ಪಾಲುದಾರರಾಗಿರುವುದು ಕಂಡು ಬರುತ್ತದೆ. ಸ್ವ-ಶಕ್ತಿ ಮಹಿಳಾ ಸ್ವ-ಸಹಾಯ ಸಂಘಗಳಿಗೆ ಜಿಲ್ಲಾ ಮಟ್ಟದಲ್ಲಿ ಪ್ರಮುಖ ಆಡಳಿತಗಾರರೆಂದರೆ ಜಿಲ್ಲಾ ಯೋಜನಾ ವ್ಯವಸ್ಥಾಪಕರು.

ಈ ಜಿಲ್ಲಾ ವ್ಯವಸ್ಥಾಪಕರು ಆಯಾ ತಾಲೂಕಿನ ಸ್ವಯಂ ಸೇವಾ ಸಂಸ್ಥೆಗಳಿಗೆ, ಸರ್ಕಾರೇತರ ಸಂಸ್ಥೆಗಳಿಗೆ ಮತ್ತು ಸ್ವ-ಸಹಾಯ ಸಂಘಗಳಿಗೆ ಸೂಕ್ತ ಉತ್ತೇಜನ ಪ್ರೋತ್ಸಾಹ ಹಾಗೂ ಮೇಲ್ವಿಚಾರಣಾ ಕಾರ್ಯ ಕೂಡ ನಡೆಸಿಕೊಂಡು ಬರುತ್ತಿದ್ದಾರೆ. ಅದರಂತೆ ತಾಲೂಕು ಮಟ್ಟದಲ್ಲಿ ಈ ಯೋಜನೆಯನ್ನು ಕೋ ಆರ್ಡಿನೇಟರ್ (ಸಂಯೋಜಕ) ಇದರ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಾರೆ. ಈ ಹಿನ್ನೆಲೆಯಲ್ಲಿ ಅಧ್ಯಯನ ಕ್ಷೇತ್ರವಾದ ಕೂಡ್ಲಿಗಿ ತಾಲೂಕಿನಲ್ಲಿ ಸ್ವ-ಶಕ್ತಿ ಯೋಜನೆಯ ಉಸ್ತುವಾರಿಯನ್ನು ಕೂಡ್ಲಿಗಿಯ ಡಿ. ಪಿ. ಜಿ. (Development Promotion Groups) ಸಂಸ್ಥೆಯು ನೋಡಿಕೊಳ್ಳುತ್ತದೆ. ಈಗಾಗಲೇ ಹೇಳಿದಂತೆ ಪ್ರಸ್ತುತದಲ್ಲಿ ಈ ಯೋಜನೆಯು ದೇಶದ ಆರು ರಾಜ್ಯಗಳಲ್ಲಿ ಇರುವುದು ಕಂಡುಬರುತ್ತದೆ. ಅವುಗಳೆಂದರೆ: ಉತ್ತರ ಪ್ರದೇಶ, ಬಿಹಾರ, ಗುಜರಾತ್, ಹರಿಯಾಣ, ಮಧ್ಯ ಪ್ರದೇಶ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಏಕಕಾಲದಲ್ಲಿ ಆರಂಭಗೊಂಡಿದೆ. ಈ ಯೋಜನೆಯ ಅವಧಿ ೫ ವರ್ಷಗಳು. ಈ ಅವಧಿಯಲ್ಲಿ ಕನಿಷ್ಠ ೭೪೦೦ ಹಾಗೂ ೧೨೦೦೦ ಗರಿಷ್ಠ ಮಹಿಳಾ ಸ್ವ ಸಹಾಯ ಸಂಘಗಳನ್ನು ರಚಿಸಿ ಮಹಿಳೆಯರನ್ನು ಆರ್ಥಿಕವಾಗಿ ಸಶಕ್ತರನ್ನಾಗಿಸುವುದು ಈ ಯೋಜನೆಯ ಆಕಾಂಕ್ಷೆಯಾಗಿದೆ. ಈ ಯೋಜನೆಗೆ ವಿಶ್ವಬ್ಯಾಂಕು, ಅಂತರರಾಷ್ಟ್ರೀಯ ಕೃಷಿನಿಧಿ ಸಂಸ್ಥೆಗಳು ಹಣಕಾಸಿನ ನೆರವನ್ನು ಭಾರತ ಸರ್ಕಾರದ ಮೂಲಕ ನೀಡಿ ಆಯಾ ರಾಜ್ಯಗಳ ಮಹಿಳಾ ಅಭಿವೃದ್ಧಿ ನಿಗಮಗಳಿಗೆ ಯೋಜನಾ ಅನುಷ್ಠಾನದ ಜವಾಬ್ದಾರಿಯನ್ನು ನೀಡಿವೆ.

ಕರ್ನಾಟಕ ರಾಜ್ಯದಲ್ಲಿ ಈ ಸ್ವ-ಶಕ್ತಿ ಯೋಜನೆಯು ಮೊದಲ ಹಂತ ಮತ್ತು ಎರಡನೆಯ ಹಂತದಲ್ಲಿ ನಾಲ್ಕು ಜಿಲ್ಲೆಗಳಲ್ಲಿ ಇರುವುದು ಕಂಡು ಬರುತ್ತದೆ. ಇದರಲ್ಲಿ ಮತ್ತೆ ಪ್ರಸ್ತಾವಿತ ಹಂತದಲ್ಲಿ ಮೂರು ಜಿಲ್ಲೆಗಳಲ್ಲಿ ಈ ಸ್ವ-ಶಕ್ತಿ ಯೋಜನೆ ಇರುವುದು. ಅವುಗಳೆಂದರೆ ಚಿತ್ರದುರ್ಗ, ಕೋಲಾರ, ಬಳ್ಳಾರಿ, ತುಮಕೂರು, ಕೊಪ್ಪಳ, ರಾಯಚೂರು, ಗುಲಬರ್ಗಾ ಜಿಲ್ಲೆಗಳನ್ನು ಒಳಗೊಂಡಿದೆ. ಈ ಯೋಜನೆಯು ನಾಲ್ಕು ಜಿಲ್ಲೆಗಳನ್ನು ಸೇರಿಸಿ ೨೪,೦೦೦ ಮಹಿಳೆಯರನ್ನು ಒಳಗೊಂಡಂತೆ ೧೨೦೦ ಸ್ವ-ಸಹಾಯ ಸಂಘಗಳನ್ನು ರಚಿಸುವುದು ಈ ಯೋಜನೆಯ ಗುರಿಯಾಗಿತ್ತು. ಯೋಜನಾ ವಿಸ್ತರಣಾ ಜಿಲ್ಲೆಗಳಲ್ಲಿ ೧೮,೦೦೦ ಅಧಿಕ ಮಹಿಳೆಯರನ್ನು ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ಸ್ವ-ಸಹಾಯ ಸಂಘಗಳನ್ನು ಸಂಘಟಿಸಲಾಗಿದೆ. ಆಯ್ಕೆಯು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿರಬೇಕು. ಈ ಯೋಜನೆಯ ಮೂಲಕ ಸ್ವ-ಸಹಾಯ ಸಂಘದ ರಚನೆಯಿಂದ ಮಹಿಳೆಯರು ಮುನ್ನಡೆಯುವಲ್ಲಿ ಸಫಲರಾಗುತ್ತಿದ್ದಾರೆ.

ಸ್ವ-ಸಹಾಯ ಸಂಘಗಳ ಪರಿಚಯ

'ಗ್ರಾಮೀಣ ಪ್ರದೇಶದಲ್ಲಿರುವ ಬುಡಕಟ್ಟು ಮಹಿಳೆಯರು ಮತ್ತು ಇತರೆ ಹಿಂದುಳಿದ ಕಡು ಬಡವರನ್ನು, ಶ್ರೀಮಂತರು ಲೇವಾ-ದೇವಿದಾರರಿಂದ ಆರ್ಥಿಕ ಶೋಷಣೆಯಿಂದ ಮುಕ್ತಿಗೊಳಿಸಿ ಸುಲಭ ಬಡ್ಡಿದರದಲ್ಲಿ ಆರ್ಥಿಕ ನೆರವನ್ನು ನೀಡಿ ಅವರ ಸರ್ವತೋಮುಖ ಪ್ರಗತಿಗೆ ನೆರವಾಗುವ

ದೃಷ್ಠಿಯಿಂದ ಸರ್ಕಾರ ಗ್ರಾಮೀಣ ಪ್ರದೇಶದಲ್ಲಿ ಹಿಂದುಳಿದವರಿಗೆ ಮಹಿಳಾ ಅಭಿವೃದ್ಧಿಯ ಕಾರ್ಯಕ್ರಮದ ಮೂಲಕ ಸ್ವ ಶಕ್ತಿ ಯೋಜನೆಯಡಿಯಲ್ಲಿ ಸ್ವ-ಸಹಾಯ ಸಂಘಗಳನ್ನು ಸ್ಥಾಪಿಸಿದೆ. ಈ ಸ್ವ-ಸಹಾಯ ಗುಂಪುಗಳನ್ನು ರಚಿಸಿರುವ ಕಾರಣ ಮಹಿಳೆಯರ ಅಭಿವೃದ್ದಿಗೆ ಸಂಬಂಧಿಸಿದಂತೆ ಹೇಳುವುದಾದರೆ ಯಾವುದೇ ಹಿಂದುಳಿದ ಮಹಿಳೆಯರೆಲ್ಲರೂ ಒಟ್ಟಾಗಿ ಸೇರಿ ಸಂಘಟಕರಾಗಿದ್ದಾರೆ' ಎಂದು ಅಭಿಪ್ರಾಯ ಪಡಬಹುದು.

ಭಾರತ ಗ್ರಾಮೀಣ ಪ್ರದೇಶಗಳೇ ಹೆಚ್ಚಾಗಿರುವ ದೇಶ ಈ ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ಶೇಕಡಾ ೭೦ರಷ್ಟು ಭಾಗ ಜನ ವಾಸವಾಗಿದ್ದಾರೆ ಇದರಲ್ಲಿ ಬಹುತೇಕ ಜನರು ಬಡತನದಲ್ಲಿ ಬದುಕು ಸಾಗಿಸುತ್ತಿದ್ದಾರೆ. ನಮಗೆ ಸ್ವಾತಂತ್ರ್ಯ ಬಂದು ೫೦ ವರ್ಷಗಳು ಕಳೆದು ಹೋಗಿದ್ದರೂ ಅವರಿಗೆ ಅನ್ನ, ವಿದವಾ, ವಸತಿ, ಆರೋಗ್ಯ, ಉದ್ಯೋಗಗಳನ್ನು ಕಲ್ಪಿಸಲಾಗಿಲ್ಲ. ಇದಕ್ಕೆ ಕಾರಣ ಈ ಬಗ್ಗೆ ಚಿಂತಿಸುವ ಪರಿಹಾರ ಕಂಡುಕೊಳ್ಳುವ ಅವರದ್ದೇ ಆದ ಸಂಘಟನೆ ಇಲ್ಲದಿರುವುದೇ ಆಗಿದೆ. ಅದರಲ್ಲಿಯೂ ಬುಡಕಟ್ಟು ಮಹಿಳೆಯರು ಸಂಘಟಿತರಾದರೆ ಈ ಜ್ವಲಂತ ಸಮಸ್ಯೆಗಳನ್ನು ತಕ್ಕಮಟ್ಟಿಗೆ ಪರಿಹರಿಸಲು ಸಾಧ್ಯವಾದೀತು. ಈ ನಿಟ್ಟಿನಲ್ಲಿ ಬಡ ಜನರನ್ನು ಸಂಘಟಿಸಿ ಅವರ ಸಂಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ದಿಗೆ ಸ್ವ-ಸಹಾಯ ಸಂಘಗಳು ಖಂಡಿತವಾಗಿ ಮಹತ್ತರ ಪಾತ್ರವಹಿಸುತ್ತಿವೆ.

"ಈ ಸ್ವ ಸಂಘ ಅಥವಾ ಸ್ವ ಸಹಾಯ ಸಂಘವೆಂದರೆ ಸಮಾನ ಆಸಕ್ತಿ ಇರುವ ೧೦ರಿಂದ ೨೦ ಬಡ ಪರಿಶಿಷ್ಠ ಮಹಿಳೆಯರು ತಮ್ಮ ಸಾಮಾಜಿಕ, ಆರ್ಥಿಕ ಅಭಿವೃದ್ಧಿಗಾಗಿ ಹಾಗೂ ಸಮಸ್ಯೆಗಳ ಪರಿಹಾರಕ್ಕಾಗಿ ಒಂದು ನಿರ್ಧಿಷ್ಟ ಜಾಗ ಮತ್ತು ನಿರ್ಧಿಷ್ಟ ವೇಳೆಗೆ ಸೇರಿ ಸಹಭಾಗಿತ್ವದಲ್ಲಿ ಚರ್ಚಿಸಿ ಸರಿಯಾದ ತೀರ್ಮಾನಗಳ ಮೂಲಕ ತಮ್ಮದೇ ಆದ ಸ್ವಂತ ಬಂಡವಾಳ ಹೂಡಿ ಪರಸ್ಪರ ಸಹಾಯ ಮಾಡಿಕೊಳ್ಳುವ ಗುಂಪನ್ನು ಸ್ವ-ಸಹಾಯ ಸಂಘ" ಎಂದು ಕರೆಯಬಹುದು. ನಂತರ "ಸಾಮಾಜಿಕ ಮತ್ತು ಆರ್ಥಿಕ ಸಾಮಾನತೆಯುಳ್ಳ ಬಡ ಕುಂಟುಂಬಗಳ ಒಂದು ಸಣ್ಣ ಸಂಘಟನೆಗೆ ಸ್ವ-ಸಹಾಯ ಸಂಘ ಎನ್ನಬಹುದು". ಈ ಸಂಘದ ಸದಸ್ಯರು ತಮ್ಮ ಅಭಿವೃದ್ದಿಯ ಕುರಿತು ಚಿಂತಿಸಲು ಪ್ರತಿವಾರ ಎಲ್ಲಾ ಸದಸ್ಯರಿಗೂ ಅನುಕೂಲವಾದ ಸಮಯದಲ್ಲಿ ಒಂದೆಡೆ ಸೇರಿ ಮುಕ್ತವಾಗಿ ಚರ್ಚಿಸಿ, ತೀರ್ಮಾನಗಳನ್ನು ತೆಗೆದುಕೊಳ್ಳುತ್ತಾರೆ. ಉಳಿತಾಯ ಸಾಲ ನೀಡಿಕೆ, ಸಾಲದ ಉದ್ದೇಶ, ಸಾಲದ ಮೊತ್ತ, ಬಡ್ಡಿಯ ದರ, ಸಾಲ ಮರುಪಾವತಿಯ ಅವಧಿ ಮುಂತಾದ ಎಲ್ಲಾ ವಿಚಾರಗಳನ್ನು ಸಂಘದ ಸಭೆಯಲ್ಲಷ್ಟೇ ನಿರ್ಧರಿಸುತ್ತಾರೆ. ಮಹಿಳೆಯರು ಸಭೆ ಸೇರುವುದರಿಂದ ಯಾರಿಗೂ ಯಾವುದೇ ತರಹದ ಅನಾನೂಕೂಲತೆ, ಆರ್ಥಿಕ ನಷ್ಟವಾಗದಂತೆ ಎಚ್ಚರಿಕೆ ವಹಿಸುತ್ತಾರೆ. ಸದಸ್ಯರು ಮಾಡಿದ ಉಳಿತಾಯವನ್ನು ಕೂಡ ಸಂಘದ ಸಭೆಯಲ್ಲೇ ಸಂಗ್ರಹಿಸಿ ಅದನ್ನು ಹೇಗೆ ವಿನಿಯೋಗಿಸಬೇಕೆಂಬ

ನಿರ್ಧಾರವನ್ನು, ಸಂಘದಲ್ಲಿರುವ ಉಳಿತಾಯದ ಹಣವನ್ನು ಯಾರಿಗೆ ಕೊಡಬೇಕೆಂಬ ತೀರ್ಮಾನ ಸಂಘದ ಸದಸ್ಯರೆಲ್ಲರಿಗೂ ಹಾಗೂ ಸಂಘದ ಪ್ರತಿನಿಧಿಗಳಿಗೆ ಸೇರಿರುತ್ತದೆ.

ಯಾವುದೇ ಸಂಘ ಯಶಸ್ವಿಯಾಗಿ ಕಾರ್ಯನಿರ್ವಹಿಸಬೇಕಾದರೆ ಪ್ರತಿಯೊಬ್ಬರ ಸಹಕಾರ ಇರಬೇಕು. ಪ್ರತಿಯೊಂದು ಸಂಘಗಳಿಗೆ ಬ್ಯಾಂಕುಗಳ ಸಂಪರ್ಕದ ಜೊತೆಗೆ ಸರ್ಕಾರದ ಇಲಾಖೆಗಳ ಸಹಕಾರ ಇರಬೇಕು. ಸಂಘದ ನಾಯಕತ್ವದಲ್ಲಿರುವ ಪದಾಧಿಕಾರಿಗಳು ತಮ್ಮ ಕುಟುಂಬದ ಸದಸ್ಯರಿಗಿಂತ ಹೆಚ್ಚಿನ ರೀತಿಯಲ್ಲಿ ಸದಸ್ಯರನ್ನು ನೋಡಿಕೊಳ್ಳಬೇಕು. ಆಗ ಮಾತ್ರ ಸಂಘಗಳು ಯಶಸ್ವಿಯಾಗಿ ಕಾರ್ಯ ನಿರ್ವಹಿಸಿಕೊಂಡು ಹೋಗುವುದರಲ್ಲಿ ಮತ್ತು ಸುಧಾರಣತೆಯನ್ನು ಸಾಧಿಸುವುದರಲ್ಲಿ ಯಾವ ಸಂದೇಹವೂ ಇಲ್ಲ ಎಂದು ಹೇಳಬಹುದು. ಯಾವುದೇ ಒಬ್ಬ ಸದಸ್ಯರು ಮತ್ತು ಪ್ರತಿನಿಧಿಗಳಲ್ಲಿ ಸ್ವಲ್ಪ ವೈಮನಸ್ಸು ಬಂದರೆ ಸಂಘಗಳು ಯಶಸ್ವಿಯಾಗಲು ಸಾಧ್ಯವಿಲ್ಲ. ಯಾವ ದೇಶದಲ್ಲಿ ಮಹಿಳೆಯರು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಕ್ರಿಯಾಶೀಲರಾಗಿ ಭಾಗಿಗಳಾಗಿರುತ್ತಾರೋ ಅಲ್ಲಿನ ಅಭಿವೃದ್ಧಿಯ ಪ್ರಕ್ರಿಯೆ ಅಥವಾ ಮಟ್ಟವು ಯಾವ ದೇಶದಲ್ಲಿ ಮಹಿಳೆಯರ ಅಭಿವೃದ್ಧಿ ಸಹಭಾಗಿತ್ವ ಕ್ಷೀಣವಾಗಿರುತ್ತದೋ, ಅಲ್ಲಿನ ಅಭಿವೃದ್ಧಿಯ ಮಟ್ಟಕ್ಕಿಂತ ಉತ್ತಮವಾಗಿರುತ್ತದೆ.

ಸ್ವ-ಸಹಾಯ ಸಂಘಗಳು ನಮ್ಮ ರಾಷ್ಟ್ರದ ಆರ್ಥಿಕ ವಲಯದಲ್ಲಿ ಆಧ್ಯತಾ ಕ್ಷೇತ್ರವಾಗಿ ಪರಿಣಮಿಸಿರುವುದನ್ನು ಕಾಣಬಹುದು. ಆರ್ಥಿಕವಾಗಿ ಹಿಂದುಳಿದ ಗ್ರಾಮೀಣ ಪ್ರದೇಶದ ಮಹಿಳೆಯರ ಮಧ್ಯೆ ಇವು ದಿನೇ ದಿನೇ ಜನಾನುರಾಗಿಯಾಗಿ ಮಿನಿಬ್ಯಾಂಕುಗಳಂತೆ ಕಾರ್ಯ ನಿರ್ವಹಿಸುತ್ತಿವೆ. ಗುಂಪಿನ ಸದಸ್ಯರು ಖರ್ಚನ್ನು ಮಿತಗೊಳಿಸಿ ಅಲ್ಪ ಆದಾಯದಲ್ಲೇ ತುಸು ಹಣವನ್ನು ಉಳಿಸಿ ಅದನ್ನೇ ಗುಂಪಿನ ತೀರ್ಮಾನದಂತೆ ಆಂತರಿಕ ಸಾಲವಾಗಿ ಪಡೆದು ತಮ್ಮ ಆರ್ಥಿಕ ಬೇಡಿಕೆಗಳನ್ನು ಈಡೇರಿಸಿಕೊಳ್ಳುತ್ತಾರೆ. ಉಳಿತಾಯದ ಸಂಗ್ರಹಣೆಯ ಸಾಲನೀಡಿಕೆಯಿಂದ ಲಾಭಗಳಿಸುವುದು ಹಾಗೂ ಬ್ಯಾಂಕು ಪದ್ಧತಿಯಲ್ಲಿನ ಮೂಲ ಸಿದ್ಧಾಂತ, ಅಂತಹ ಸೈದ್ಧಾಂತಿಕ ತಳಹದಿಯ ಮೇಲೆ ಸ್ವ-ಸಹಾಯ ಗುಂಪುಗಳು ಈಗ ಭರದಿಂದ ಕಾರ್ಯನಿರ್ವಹಿಸುತ್ತಿವೆ. ಅವುಗಳ ಆರೈಕೆಯ ಜವಾಬ್ದಾರಿಯನ್ನು ಆಯಾ ಪ್ರದೇಶದ ಸರ್ಕಾರೇತರ ಅಥವಾ ಸ್ಥಳೀಯ ಸೇವಾ ಸಂಸ್ಥೆ ಮತ್ತು ಬ್ಯಾಕುಗಳು ನಿರ್ವಹಿಸುತ್ತಿವೆ. ಜೊತೆಗೆ ಬ್ಯಾಂಕುಗಳು ಉತ್ತಮ ಕಾರ್ಯನಿರ್ವಹಿಸುವ ಗುಂಪುಗಳಿಗೆ ಹೆಚ್ಚುವರಿ ಆರ್ಥಿಕ ನೆರವನ್ನು ನೀಡುತ್ತವೆ.

ಒಟ್ಟಿನಲ್ಲಿ ಸ್ವ-ಸಹಾಯ ಗುಂಪುಗಳಲ್ಲಿರುವ ಹಿಂದುಳಿದ ಗ್ರಾಮೀಣ ಮಹಿಳೆಯರು ತಮ್ಮ ವಿವೇಚನಾ ಹಾದಿಯಲ್ಲಿ ಕಂಡುಬಂದು ಸದೃಡ ಹೆಜ್ಜೆ ಆರ್ಥಿಕ ಸಮೀಕರಣ ಮಹಿಳೆಯರ ಶೋಷಣೆಯ ಹೋರಾಟದಲ್ಲಿ ಪ್ರಮುಖ ಅಂಶವಾಗಿದ್ದು ಅದನ್ನು ಕಾರ್ಯಗತಗೊಳಿಸುವಲ್ಲಿ ಆಕೆಯ ಇಚ್ಛಾಶಕ್ತಿ ದೃಢಮನಸ್ಸು ಹಾಗೂ ಸ್ವಾಭಿಮಾನ ಸ್ವ-ಸಹಾಯ ಗುಂಪುಗಳ ಕಾರ್ಯವೈಖರಿಯ ಮೂಲಕ

ವ್ಯಕ್ತವಾಗಿದೆ. ನೇರ ನಡೆ ನುಡಿ, ಸಮರ್ಥ ಹೂಡಿಕೆ, ಬಳಕೆ ನಿಯಮಿತ ಮರುಪಾವತಿ ಅಭಿವೃದ್ಧಿಯ ಗುರಿ ತಲುಪುವಲ್ಲಿ ಇಟ್ಟಿರುವ ದಾಪುಗಾಲು ಮಹಿಳೆಯರಲ್ಲಿ ಸಾಮರ್ಥ್ಯ ಹಾಗೂ ನಂಬಿಕೆ ಹೆಚ್ಚಿಸಿದ್ದು ಸಾಮಾಜಿಕ ಸ್ಥಾನಮಾನ ಹೆಚ್ಚಿ ಬಾಳಿನಲ್ಲಿ ಉತ್ಸಾಹ ಹೆಚ್ಚಿಸಿದೆ. ಈ ದುಡಿಮೆಯು ಅವರ ಮೇಲಿನ ದಬಾವಣೆ, ಶೋಷಣೆ, ತಡೆವಲ್ಲಿ ಜೀವನ ಮಟ್ಟ ಸುಧಾರಿಸುವಲ್ಲಿ ಪ್ರಮುಖ ಪಾತ್ರನಿರ್ವಹಿಸುತ್ತಿದೆ. ಬದುಕಿನಲ್ಲಿ ವಿಶ್ವಾಸ ಮೂಡಿಸಿ ತನ್ನ ಇಚ್ಛೆಯಂತೆ ಮಕ್ಕಳ, ಮನೆಯ ಭವಿಷ್ಯ ರೂಪಿಸುವ ಯಶಸ್ವಿ ನಿರ್ವಹಣೆಯ ಗುರಿ ತಲುಪುವಲ್ಲಿ ಸ್ವ-ಸಹಾಯ ಗುಂಪುಗಳು ಮಹಿಳೆಯರಿಗೆ ಸಹಕಾರಿಯಾಗಲಿವೆ. ಮುಂಬರುವ ದಿನಗಳಲ್ಲಿ ಮಹಿಳೆಯರ ಉನ್ನತಿಯ ಉದ್ದೇಶ ಸಾಕಾರಗೊಂಡು ತನ್ಮೂಲಕ ದೇಶದ ಅಭಿವೃದ್ಧಿ ಯೋಜನೆಗಳಲ್ಲಿ ಗುರುತುಮೂಡಿಸುತ್ತವೆ ಎಂದು ಹೇಳಿದರೆ ತಪ್ಪಾಗಲಾರದು.

ಸ್ವ-ಸಹಾಯ ಸಂಘಗಳ ಬೆಳವಣಿಗೆಯಲ್ಲಿ ಬ್ಯಾಂಕುಗಳ ಪಾತ್ರ

ಬ್ಯಾಂಕುಗಳು ಮತ್ತು ಶಾಖೆಗಳು ತಮ್ಮ ಸೇವಾ ಕ್ಷೇತ್ರದಲ್ಲಿ ಬಡವರನ್ನು ಗುರುತಿಸಿ ಸ್ವ-ಸಹಾಯ ಸಂಘಗಳನ್ನು ಪ್ರಾರಂಭಿಸಲು ಅವರಿಗೆ ತಿಳುವಳಿಕೆ ನೀಡಬೇಕು. ಬ್ಯಾಂಕುಗಳು ಸ್ವ-ಸಹಾಯ ಸಂಘಗಳಿಗೆ ಉಳಿತಾಯವಾದ ಹಣವನ್ನು ಬ್ಯಾಂಕಿನಲ್ಲಿ ಖಾತೆಯನ್ನು ಪ್ರಾರಂಭಿಸಲು ಸಹಕರಿಸಿ ಈ ಸಂಘಗಳಿಗೆ ಸಾಲ ಸಂಪರ್ಕವನ್ನು ಒದಗಿಸುವುದರ ಮೂಲಕ ಪ್ರೋತ್ಸಾಹಿಸಬೇಕು. "ಸ್ವ-ಸಹಾಯ ಸಂಘಗಳು ತಮಗೆ ಅನುಕೂಲವಾದ ಬ್ಯಾಂಕ್ ಶಾಖೆಯಲ್ಲಿ ಅಂದರೆ ಸೇವಾ ಕ್ಷೇತ್ರ ಶಾಖೆಯಲ್ಲಿ ಇರದಿದ್ದರೂ ಕೂಡ ಖಾತೆ ತೆರೆಯಬಹುದು. 'ಸ್ವ-ಸಹಾಯ ಸಂಘಗಳಿಗೆ ಸುಲಭವಾಗಿ ಶೀಘ್ರವಾಗಿ ಅವಶ್ಯವಿರುವಷ್ಟು ಸಾಲವನ್ನು ಒದಗಿಸಬೇಕು. ಮಾರ್ಜಿನ್ ಹಣ ಹಾಗೂ ಆಧಾರ ಪಡೆದುಕೊಳ್ಳುವ ನಿಯಮಗಳನ್ನು ಸಾಧ್ಯವಿಲ್ಲದಷ್ಟು ಸಡಲಿಕೆಬೇಕು. ಸ್ವ-ಸಹಾಯ ಸಂಘದೊಡನೆ ಸದಾ ಸಂಪರ್ಕವಿಟ್ಟುಕೊಂಡು ಅವರಿಗೆ ಸೂಕ್ತ ಮಾರ್ಗದರ್ಶನ ಕೊಟ್ಟು ಅವರ ನಡುವಳಿಕೆ ಕಾರ್ಯಕ್ರಮಗಳನ್ನು ಗಮನಿಸುತ್ತಿರಬೇಕು. ಅವರ ಅನಿಸಿಕೆಗಳಿಗೆ ಸ್ಪಂದಿಸಿ ಸಂಘ ಹಾಗೂ ಬ್ಯಾಂಕ್ ನಡುವಿನ ಸಂಬಂಧ ವೃದ್ಧಿಸಲು ಪ್ರಯತ್ನಿಸಬೇಕು'. (ಕರ್ನಾಟಕ ವಿಕಾಸ ಜನವರಿ ೨೦೦೦)

ಬ್ಯಾಂಕಿನಿಂದ ಸ್ವ-ಸಹಾಯ ಸಂಘಗಳು ಸಾಲ ಸೌಲಭ್ಯ ಪಡೆಯಬೇಕಾದರೆ ಇವುಗಳು ಚೆನ್ನಾಗಿ ಕಾರ್ಯನಿರ್ವಹಿಸುತ್ತಿದ್ದರೆ ಅಂತಹ ಸ್ವ-ಸಹಾಯ ಸಂಘಗಳಿಗೆ ಸಾಲ ಸೌಲಭ್ಯ ಒದಗಿಸುವಂತೆ ಭಾರತೀಯ ರಿಜರ್ವ್ ಬ್ಯಾಂಕು ತನ್ನ ದಿನಾಂಕ ೨.೪.೯೬ರ ಸುತ್ತೋಲೆಯಲ್ಲಿ ತಿಳಿಸಿದೆ. ಸ್ವ-ಸಹಾಯ ಸಂಘದ ಸದಸ್ಯರು ಪ್ರಾರಂಭದಲ್ಲಿ ಅನುತ್ಪಾದಕ ವೆಚ್ಚಗಳಿಗೆ ಸಾಲ ತೆಗೆದುಕೊಂಡರೂ ತಿಳುವಳಿಕೆ ಬೆಳೆದಂತೆ ಅನುತ್ಪಾದಕ ಸಾಲಗಳು ಕಡಿಮೆಯಾಗಿ ಆದಾಯ ತರುವಂತ ವೆಚ್ಚಗಳಿಗೆ ಹೆಚ್ಚು ಸಾಲ ಪಡೆಯುವಲ್ಲಿ ಮುಂದಾಗಿರುವುದನ್ನು ನಾವು ಇತ್ತೀಚಿನ ಹಲವು ಸಂಘಗಳನ್ನು ನೋಡಬಹುದು. ಆದರೆ ಕೆಲವೊಂದು ಸಂಘಗಳು ಇನ್ನು ಅನುತ್ಪಾದಕ ವೆಚ್ಚಗಳಿಗೆ ಸಾಲ ಪಡೆದುಕೊಳ್ಳುವುದು ಕಂಡು

[illegible]

[illegible]

[illegible]

[illegible]

ಬರುತ್ತದೆ. ಕಾರಣ ಈ ಸಂಘಗಳನ್ನು ಪ್ರೋತ್ಸಾಹಿಸುವ ಸದಸ್ಯರು, ಕುಟುಂಬದ ಸದಸ್ಯರು ಸರಿಯಾಗಿ ಪ್ರೇರಣೆ ನೀಡಿಲ್ಲ ವಾದ್ದರಿಂದ ಇವು ಆರ್ಥಿಕವಾಗಿ ಹಿಂದುಳಿಯಲು ಕಾರಣವಾಗಿವೆ. ಸ್ವ-ಸಹಾಯ ಗುಂಪುಗಳ ಮೂಲಕ ಬಡವರಿಗೆ ಸಾಲ ವಿತರಣೆ ಮಾಡುವುದರಿಂದ ಬಡಜನರ ಬಡತನ ನಿವಾರಣೆಯಾಗುತ್ತಾ ಬಂದಿದೆ. ಈ ರೀತಿ ಸಂಘಗಳಿಗೆ ಬ್ಯಾಂಕುಗಳು ಕಾರಣವಾಗಿವೆ.

ಯೋಜನೆಯ ಅನುಷ್ಠಾನದಲ್ಲಿ ಬ್ಯಾಂಕುಗಳ ಪಾತ್ರ

ಯಾವುದೇ ಒಂದು ಯೋಜನೆ ಸಫಲವಾಗಬೇಕಾದರೆ ಬ್ಯಾಂಕುಗಳು ಅತ್ಯಾವಶ್ಯಕ ಎಂದು ಹೇಳಬಹುದು. ಈ ಯೋಜನೆಯು ಸಹ ತನ್ನ ಮುಖಾಂತರ ರೂಪಗೊಂಡ ಸ್ವ-ಸಹಾಯ ಸಂಘಗಳು ಬ್ಯಾಂಕುಗಳ ಸಂಪರ್ಕದೊಂದಿಗೆ ಇವೆ. ಅದರಂತೆ ಬ್ಯಾಂಕುಗಳು ಸಹ ಅವೋಗವಾಗಿ ಕಾರ್ಯನಿರ್ವಹಿಸುತ್ತಿವೆ. ಸರ್ಕಾರವು ರಾಷ್ಟ್ರೀಕೃತ ವಾಣಿಜ್ಯ ಬ್ಯಾಂಕುಗಳ ಮೂಲಕ ಹಾಗೂ ತುಂಗಭದ್ರಾ ಗ್ರಾಮೀಣ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಕಾರ್ಪೋರೇಷನ್ ಬ್ಯಾಂಕ್, ವ್ಯವಸಾಯ ಸೇವಾ ಸಹಕಾರ ಸಂಘ ನಿಯಮಿತ, ಕೃಷಿ ಅಭಿವೃದ್ಧಿ ಬ್ಯಾಂಕ್ ಇವುಗಳ ಮೂಲಕ ಈ ಸ್ವ-ಶಕ್ತಿ ಯೋಜನೆಯನ್ನು ಜಾರಿಗೊಳಿಸಿದೆ. ಸರ್ಕಾರ ಮತ್ತು ಬ್ಯಾಂಕುಗಳು ಸಹಯೋಗದೊಂದಿಗೆ ಸ್ವ ಸಹಾಯ ಸಂಘದ ಸದಸ್ಯರುಗಳಿಗೆ ಸಾಲ ನೀಡಲಾಗುವುದು ಮತ್ತು ಸಾಲ ಮರು ವಸುಲಾತಿಯ ಸಂಪೂರ್ಣ ಜವಾಬ್ದಾರಿ ಬ್ಯಾಂಕಿಗೆ ಇರುತ್ತದೆ. ಅದಕ್ಕೋಸ್ಕರ ಬ್ಯಾಂಕುಗಳು ಸಂಘದ ಸದಸ್ಯರೊಡನೆ ಉತ್ತಮ ಸಂಬಂಧ ಹೊಂದುವುದು ಅತ್ಯಾಗತ್ಯವಾಗಿದೆ. ಇನ್ನು ಈ ಯೋಜನೆಗೆ ವಿಶ್ವಬ್ಯಾಂಕು, ಅಂತರಾಷ್ಟ್ರೀಯ ಕೃಷಿ ನಿಧಿಗಳು ಹಾಗೂ ಹಣಕಾಸಿನ ಅಭಿವೃದ್ಧಿ ಸಂಸ್ಥೆಗಳು ಹಣಕಾಸಿನ ನೆರವನ್ನು ಭಾರತ ಸರ್ಕಾರದ ಮೂಲಕ ನೀಡಿ ಸಂಘಗಳನ್ನು ಉತ್ತಮಪಡಿಸಿದೆ.

ಬ್ಯಾಂಕುಗಳಿಗೆ ಸರಕಾರವು ಸಲಹೆ ಸೂಚನೆ ನೀಡಲು ಭಾರತೀಯ ಕೇಂದ್ರ ಬ್ಯಾಂಕ್‌ನ್ನು ನೇಮಿಸಿದೆ. ಬ್ಯಾಂಕುಗಳು ಯೋಜನೆಯ ಅನುಷ್ಠಾನದಲ್ಲಿ ಕೊನೆಯ ಹಂತವಾಗಿರುವುದರಿಂದ ಇವು ಮಹತ್ವದ ಪಾತ್ರವನ್ನು ವಹಿಸುತ್ತಿವೆ. ಸಂಘದ ಖಾತೆ ಬ್ಯಾಂಕಿನಲ್ಲಿ ತೆರೆದ ಮೇಲೆ ಸಂಘಕ್ಕೂ ಬ್ಯಾಂಕಿಗೂ ನಿಕಟ ಸಂಬಂಧ ಬೆಳೆಯುತ್ತಾ ಹೋಗುತ್ತದೆ. ಒಂದು ವರ್ಷದ ನಂತರ ಒಳ್ಳೆಯ ಸಂಘಗಳು ಯಾವುದೇ ಬ್ಯಾಂಕಿನಿಂದ ಸಾಲ-ಸೌಲಭ್ಯವನ್ನು ಮೊದಲ ಬಾರಿಗೆ ಕನಿಷ್ಠ ೧೦ ಸಾವಿರ ಕೊಡುತ್ತದೆ. ನಂತರ ಸಂಘ ಚೆನ್ನಾಗಿ ನಡೆದಂತೆ ಹಂತ ಹಂತವಾಗಿ ೫೦,೦೦೦ದ ವರೆಗೂ ಪಡೆಯಬಹುದು. ಇದು ಸಂಘದ ಅಗತ್ಯವನ್ನು ಅವಲಂಭಿಸಿರುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿ ಎಲ್ಲಾ ಬ್ಯಾಂಕುಗಳಿಗಿಂತ ತುಂಗಭದ್ರಾ ಗ್ರಾಮೀಣ ಬ್ಯಾಂಕ್‌ನವರು ಗುಂಪಿನ ರಚನೆ ಹಾಗೂ ಸಾಲ ಸಂಪರ್ಕದಲ್ಲಿ ಶೇ. ೬೦ರಷ್ಟು ಸಾಲ ಒದಗಿಸಿದ್ದಾರೆ.

ಪ್ರಸ್ತುತದಲ್ಲಿ ಈ ಯೋಜನೆಯಲ್ಲಿರುವ ಬ್ಯಾಂಕುಗಳು ಸ್ವ-ಶಕ್ತಿಯ ಸ್ವ-ಸಹಾಯ ಸಂಘಗಳ

ಜೊತೆ ಯಾವ ರೀತಿಯಲ್ಲಿ ಸಂಪರ್ಕ ಪಡೆದುಕೊಂಡಿವೆ ಎಂಬುದನ್ನು ಮತ್ತು ಯಾವ ಸಂಘವು ಯಾವ ಬ್ಯಾಂಕಿನಲ್ಲಿ ತನ್ನ ಖಾತೆಯನ್ನು ತೆರೆದಿದೆ ಎಂಬುದನ್ನು ನೋಡಿದಾಗ

ಸಂಘದ ಹೆಸರು	ಸಂಘ ವ್ಯವಹರಿಸುವ ಬ್ಯಾಂಕ್‌ನ ಹೆಸರು
ಶ್ರೀ ವಾಲ್ಮೀಕಿ ಮಹಿಳಾ ಸ್ವ-ಸಹಾಯ ಸಂಘ ಹ್ಯಾಳ್ಯಾ	ಕಾರ್ಪೋರೇಶನ್ ಬ್ಯಾಂಕ್ ದೂಪದಹಳ್ಳಿ
ಶ್ರೀ ಜಗದಾಂಬಿಕಾ ಮಹಿಳಾ ಸ್ವ-ಸಹಾಯ ಸಂಘ ಹ್ಯಾಳ್ಯಾ	ಕಾರ್ಪೋರೇಷನ್ ಬ್ಯಾಂಕ್ ದೂಪದಹಳ್ಳಿ
ಶ್ರೀ ಮಲಿಯಮ್ಮ ಮಹಿಳಾ ಸ್ವ-ಸಹಾಯ ಸಂಘ	ತುಂಗಭದ್ರಾ ಗ್ರಾಮೀಣ ಬ್ಯಾಂಕ್ ಬಣವಿಕಲ್ಲು
ಶ್ರೀ ಸಾರಿದುರುಗಮ್ಮ ಮಹಿಳಾ ಸ್ವ-ಸಹಾಯ ಸಂಘ, ಬಡಲಡುಕು	ವ್ಯವಸಾಯ ಸೇವಾ ಸಹಕಾರ ಸಂಘ ನಿಯಮಿತ ಬಡಲಡುಕು
ಶ್ರೀ ದುರ್ಗಾದೇವಿ ಮಹಿಳಾ ಸ್ವ-ಸಹಾಯ ಸಂಘ ಶಿವಪುರ	ತುಂಗಭದ್ರಾ ಗ್ರಾಮೀಣ ಬ್ಯಾಂಕ್ ಕೂಡ್ಲಿಗಿ
ಶ್ರೀ ಉಮಾದೇವಿ ಮಹಿಳಾ ಸ್ವ-ಸಹಾಯ ಸಂಘ	ವ್ಯವಸಾಯ ಸೇವಾ ಸಹಕಾರ ಸಂಘ ನಿಯಮಿತ ಮರಬ
ಶ್ರೀ ದುರ್ಗಾದೇವಿ ಮಹಿಳಾ ಸ್ವ-ಸಹಾಯ ಸಂಘ ಗಂಗಮ್ಮನಹಳ್ಳಿ	ಕರ್ಪೋರೇಶನ್ ಬ್ಯಾಂಕ್ ಕೊಟ್ಟೂರು
ಶ್ರೀ ಪ್ರಿಯಾಂಕ ಮಹಿಳಾ ಸ್ವ-ಸಹಾಯ ಸಂಘ ಕಾಮಯ್ಯನಹಟ್ಟಿ	ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಕೂಡ್ಲಿಗಿ
ಶ್ರೀ ಹುಲಿಗೆಮ್ಮ ಮಹಿಳಾ ಸ್ವ-ಸಹಾಯ ಸಂಘ ಸೂಲದಹಳ್ಳಿ	ತುಂಗಭದ್ರಾ ಗ್ರಾಮೀಣ ಬ್ಯಾಂಕ್ ಬಣವಿಕಲ್ಲು
ಶ್ರೀ ವೇಣುಗೋಪಾಲ ಸ್ವಾಮಿ ಮಹಿಳಾ ಸ್ವ-ಸಹಾಯ ಸಂಘ ಗುಣಸಾಗರ	ತುಂಗಭದ್ರಾ ಗ್ರಾಮೀಣ ಬ್ಯಾಂಕ್ ಬಣವಿಕಲ್ಲು
ಶ್ರೀ ಮದಗಾಂಬಿಕಾ ಮಹಿಳಾ ಸ್ವ-ಸಹಾಯ ಸಂಘ ಗುಣಸಾಗರ	ತುಂಗಭದ್ರಾ ಗ್ರಾಮೀಣ ಬ್ಯಾಂಕ್ ಬಣವಿಕಲ್ಲು

054693
"ಅಂಗನ್ನಡ" ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಶ್ರೀ ನೇತ್ರಾವತಿ ಮಹಿಳಾ ಸ್ವ-ಸಹಾಯ ಸಂಘ ಸೂಲದಹಳ್ಳಿ	ತುಂಗಭದ್ರಾ ಗ್ರಾಮೀಣ ಬ್ಯಾಂಕ್ ಬಣವಿಕಲ್ಲು
ಶ್ರೀ ಕಿತ್ತೂರು ರಾಣಿ ಚೆನ್ನಮ್ಮ ಮಹಿಳಾ ಸ್ವ-ಸಹಾಯ ಸಂಘ ಸೂಲದಹಳ್ಳಿ	ತುಂಗಭದ್ರಾ ಗ್ರಾಮೀಣ ಬ್ಯಾಂಕ್ ಬಣವಿಕಲ್ಲು

ಬ್ಯಾಂಕಿಂಗ್ ವ್ಯವಸ್ಥೆಯ ಜೊತೆಗೆ ಸಂಘಗಳ ಸಾಲ ಸಂಪರ್ಕ ನಿರ್ಮಾಣ ಮತ್ತು ಆಯ್ಕೆಯ ವಿಧಾನ

ಬ್ಯಾಂಕುಗಳ ಮೂಲಕ ಪೂರಕ ಸಾಲದ ವ್ಯವಸ್ಥೆಗಾಗಿ ಸಂಸ್ಥೆಗಳು ಈ ಕೆಳಗಿನ ಅರ್ಹತೆಗಳನ್ನು ಹೊಂದಿ ಬ್ಯಾಂಕಿಂಗ್ ವ್ಯವಸ್ಥೆಯ ಜೊತೆಗೆ ಸಂಪರ್ಕ ನಿರ್ಮಿಸಬೇಕಾಗುತ್ತದೆ.

೧. ಸ್ವ-ಸಹಾಯ ಸಂಘಗಳು ಕನಿಷ್ಠ ಪಕ್ಷ ಆರು ತಿಂಗಳಿಂದ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿರಬೇಕು.

೨. ಅವುಗಳ ಸರಿಯಾದ ಉಳಿತಾಯ ಹಾಗೂ ಸಾಲ ನಿರ್ವಹಣೆಯಲ್ಲಿ ತೊಡಗಿದ್ದು ಉತ್ತಮ ಕಾರ್ಯನಿರ್ವಹಿಸುತ್ತಿರಬೇಕು.

೩. ಲೆಕ್ಕ ಪತ್ರಗಳ ದಾಖಲಾತಿಗಳನ್ನು ಸಂಘಗಳು ಸರಿಯಾದ ರೀತಿಯಲ್ಲಿ ಇಡುತ್ತಿರಬೇಕು.

೪. ಸಮಾನ ವಿಚಾರ, ಸಮಾನ ಮನೋಭಾವನೆ, ಪರಸ್ಪರ ಸಹಕಾರ ಭಾವನೆ ಸಂಘಗಳ ಜೀವಾಳವಾಗಿ ಸದಸ್ಯರಲ್ಲಿ ಸದಾ ಒಗ್ಗಟ್ಟು ಪ್ರತಿಬಿಂಬಿತವಾಗಿರಬೇಕು.

ಸಂಘಗಳಿಗೆ ಸಾಲ ನೀಡಲು ಬ್ಯಾಂಕುಗಳು ಅನುಸರಿಸುವ ಕಾರ್ಯ ವಿಧಾನಗಳು

೧. ಸಾಲವನ್ನು ನೇರವಾಗಿ ಸ್ವ-ಸಹಾಯ ಸಂಘಗಳಿಗೆ ನೀಡುವುದು.

೨. ಸಾಲವನ್ನು ಸ್ವಯಂ ಸೇವಾ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳಿಗೆ, ಸ್ವ-ಸಹಾಯ ಸಂಘಗಳಿಗೆ ಎರವಲು ನೀಡುವುದಕ್ಕಾಗಿ ಕೊಡಬಹುದು.

೩. ಸ್ವ-ಸಹಾಯ ಸಂಘಗಳಿಗೆ ನೇರವಾಗಿ ಬ್ಯಾಂಕುಗಳು ಸಾಲ ಸೌಲಭ್ಯ ನೀಡುವಾಗ ಅವರ ಉಳಿತಾಯಕ್ಕೆ ತಕ್ಕಂತೆ ಸಾಲ ನೀಡಬೇಕಾಗುತ್ತದೆ. ಪ್ರಾರಂಭದಲ್ಲಿ ಉಳಿತಾಯ ಮತ್ತು ಸಾಲದ ಪ್ರಮಾಣ ೧:೧ ಅಥವಾ ೧:೨ರಷ್ಟು ಇದ್ದು ಮುಂದೆ ಸಂಘವು ಮರುಪಾವತಿಸುವಲ್ಲಿ ವಿಶ್ವಾಸಕ್ಕೆ ಪಾತ್ರವಾದಲ್ಲಿ ಸಾಲದ ಪ್ರಮಾಣವನ್ನು ಸ್ವ ಸಹಾಯ ಸಂಘಗಳಿಗೆ ೧:೪ ರಷ್ಟು ಹೆಚ್ಚಿಸಲು ನಿರ್ಧರಿಸುತ್ತದೆ. (ಗ್ರಾಮೀಣ ಮಹಿಳೆಯರ ಅಭಿವೃದ್ಧಿಯಲ್ಲಿ ಸ್ವ-ಸಹಾಯ ಸಂಘಗಳ ಪಾತ್ರ ವೆಂಕಟಯ್ಯ ಅಪ್ಪಗೆರೆ, ೨೦೦೨).

ಸಂಘದ ಸಾಮಾನ್ಯ ನಿಧಿ

ಸಂಘದಲ್ಲೇ ಉಳಿಯುವ ಸಾಮಾನ್ಯನಿಧಿ	ಸಂಘದಿಂದ ಹಿಂತಿರಿಗಿಸುವ ಸಾಮಾನ್ಯನಿಧಿ
* ಸದಸ್ಯರ ಪ್ರವೇಶ ಶುಲ್ಕ (ಪ್ರತಿ ಸದಸ್ಯರು ಸಂಘಕ್ಕೆ ಸೇರುವಾಗ ಕಟ್ಟುವ ಹಣ)	ಸದಸ್ಯರ ಉಳಿತಾಯ ಹಣ (ಸದಸ್ಯರು ಪ್ರತಿವಾರ ಸಂಘಕ್ಕೆ ಕಟ್ಟುವ ಉಳಿತಾಯ)
* ಆರೋಗ್ಯ ನಿಧಿ	ಸರ್ಕಾರ, ಬ್ಯಾಂಕ್ ಮತ್ತು ಇತರ ಸಂಘ ಸಂಸ್ಥೆಗಳಿಂದ ಸಂಘಕ್ಕೆ ಸಾಲವಾಗಿ ಕೊಟ್ಟ ಹಣ
* ಸದಸ್ಯರಿಂದ ಬಂದ ಸಾಲ ಬಡ್ಡಿ ಹಣ ಸ್ವಂತದ ಖಾತೆಗೆ ಬ್ಯಾಂಕಿನಿಂದ ಬಂದ ಬಡ್ಡಿ ಹಣ	
* ದಂಡ ವಸೂಲಾತಿ ಹಣ	
* ಸರ್ಕಾರ ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳಿಂದ ಬಂದ ಸಹಾಯ ಧನ	

ಸಂಘದ ಪ್ರತಿನಿಧಿಗಳು

ಪ್ರಥಮ ಪ್ರತಿನಿಧಿ ಜವಾಬ್ದಾರಿಗಳು

* ವಾರದ ಸಭೆಗಳನ್ನು ತಪ್ಪದೆ ನಡೆಯುವಂತೆ ನೋಡಿಕೊಳ್ಳುವುದು.
* ಸದಸ್ಯರೆಲ್ಲ ಒಗ್ಗಟ್ಟಿನಿಂದ ಸಂಘವನ್ನು ನಡೆಸಲು ಪ್ರೋತ್ಸಾಹಿಸುವುದು.
* ಸದಸ್ಯರಿಗೆ ತಿಳುವಳಿಕೆ ಮಟ್ಟವನ್ನು ಹೆಚ್ಚಿಸುವುದು
* ಎಲ್ಲಾ ಲೆಕ್ಕ ಪುಸ್ತಕಗಳನ್ನಿಟ್ಟುಕೊಳ್ಳುವುದು.

ಇದರಲ್ಲಿ ದ್ವಿತೀಯ ಪ್ರತಿನಿಧಿ ಜವಾಬ್ದಾರಿಗಳು ಇರುವುದು ಕಂಡು ಬರುತ್ತವೆ.

ಸಭೆಯ ದಿನಾಂಕವನ್ನು ತಿಳಿಸುವುದು, ಸಭೆಯ ಕಾರ್ಯಕಲಾಪವನ್ನು ನಿಗದಿಮಾಡುವುದು., ನಗದು ಪೆಟ್ಟಿಗೆಯ ಕೀಲಿಯನ್ನು ಇಟ್ಟುಕೊಳ್ಳುವುದು. ಇಬ್ಬರು ಪ್ರತಿನಿಧಿಗಳ ಜವಾಬ್ದಾರಿಗಳು ಒಂದೇ ರೀತಿಯಲ್ಲಿರುವುದು ಕಂಡುಬರುತ್ತದೆ.

ಗುಂಪಿನ ಪ್ರಾರಂಭಿಕ ಉಪ ನಿಯಮಗಳು

.... ಸ್ವ-ಸಹಾಯ ಗುಂಪು

.... ಗ್ರಾಮ

* ದಿನಾಂಕ .... ರಂದು ಜರುಗಿದ ಗುಂಪಿನ ವಾರದ ಸಭೆಯಲ್ಲಿ ಕೆಳಗೆ ಸಹಿಮಾಡಿರುವ ಸದಸ್ಯರ ಸಮಕ್ಷಮ ಕೈಗೊಂಡ ನಿರ್ಣಯಗಳು.

* ಕೆಳಗೆ ಸಹಿ ಮಾಡಿರುವ............... (೧೦ರಿಂದ ೨೦ ಸದಸ್ಯರೊಳಗೆ) ಸದಸ್ಯರು ಸೇರಿ ಸ್ವ-ಸಹಾಯ ಗುಂಪನ್ನು ಈ ದಿನ ರಚಿಸಿಕೊಂಡಿರುತ್ತೇವೆ.

* ಸದರಿ ಗುಂಪಿನ ರಚನೆಯ ಉದ್ದೇಶ, ಸದಸ್ಯರು ಪ್ರತಿವಾರ ಕನಿಷ್ಠ ರೂ.ಗಳನ್ನು ಉಳಿತಾಯ ಮಾಡುವುದು.

* ಉಳಿತಾಯ ಮಾಡಿದ ಹಣದಿಂದ ಅತ್ಯಂತ ಅಗತ್ಯವಿದ್ದ ಸದಸ್ಯರಿಗೆ ಗುಂಪಿನ ವಾರದ ಸಭೆಯ ನಿರ್ಣಯದಂತೆ ಆಂತರಿಕ ಸಾಲ ನೀಡುವುದಕ್ಕೆ ಬಳಸಿಕೊಳ್ಳಲಾಗುವುದು. ಈ ಸಾಲಗಳು ಅಲ್ಪಾವಧಿಯಾಗಿದು ಅದಕ್ಕೆ ಶೇಕಡ ಮಾಹೆಯಾನ ರೂ....... (೧ . ರಿಂದ ೫) ಬಡ್ಡಿಯನ್ನು ವಿಧಿಸಲಾಗುವುದು. ಬಡ್ಡಿ ಮತ್ತು ಅಸಲುಗಳನ್ನೊಳಗೊಂಡಂತೆ ವಾರದ ಕಂತುಗಳನ್ನು ನಿಗಧಿಗೊಳಿಸಲಾಗವುದು.

* ಪ್ರತಿವಾರ ಸೋಮವಾರ ಅಥವಾ ನಿಗದಿತ ವಾರದಂದು ಸಾಯಂಕಾಲ ೬ ಗಂಟೆಗೆ ಸಂಘದ ಕಛೇರಿ ಅಥವಾ ಪಂಚಾಯ್ತಿ ಕಟ್ಟಡ ಅಥವಾ ಸದಸ್ಯರ ಮನೆ ಆವರಣದಲ್ಲಿ ಪಾಳಿ ಆಧಾರದ ಮೇಲೆ ಸದಸ್ಯರೊಬ್ಬರ ಅಧ್ಯಕ್ಷತೆಯಲ್ಲಿ ಗುಂಪಿನ ವಾರದ ಸಭೆ ಜರುಗುವುದು. ಪ್ರತಿ ಸಭೆಯ ನಡವಳಿಕೆಗಳನ್ನು ತಪ್ಪದೇ ಬರೆದಿಡುತ್ತಾರೆ. ವಾರದ ಸಭೆಗೆ ಗೈರು ಹಾಜರಾದ ಸದಸ್ಯರಿಗೆ ದಂಡ ವಿಧಿಸುವ ಅಧಿಕಾರ ಗುಂಪಿಗಿದೆ.

* ಉಳಿತಾಯದ ಮತ್ತು ಸಾಲದ ಕಂತುಗಳ ಹಣವನ್ನು ಸದಸ್ಯರು ವಾರದ ಸಭೆಯಲ್ಲಿ ಸರ್ವಸದಸ್ಯರ ಸಮಕ್ಷಮವೇ ಪಾವತಿಸಬೇಕು. ಆ ಹಣವನ್ನು ಮುಂದಿನ ದಿನಗಳ ಒಳಗಾಗಿಯೇ ಬ್ಯಾಂಕಿನ ಖಾತೆಗೆ ಜಮಾ ಮಾಡತಕ್ಕದ್ದು, ಯಾವುದೇ ಕಾರಣದಿಂದ ಬ್ಯಾಂಕಿನ ಖಾತೆಗೆ ಜಮಾ ಮಾಡದೆ ಯಾವುದೇ ಸದಸ್ಯರು ಗುಂಪಿನ ಹಣವನ್ನು ತಮ್ಮ ಬಳಿ ಇರಿಸಿಕೊಳ್ಳುವುದಾಗಲೀ ಅಥವಾ ನೇರವಾಗಿ ಆ ಹಣವನ್ನು ಸದಸ್ಯರಿಗೆ ಆಂತರಿಕ ಸಾಲ ನೀಡಲು ಅವಕಾಶವಿಲ್ಲ. ಬದಲಾಗಿ ಬ್ಯಾಂಕು ಖಾತೆಯ ಚೆಕ್ ಮೂಲಕವೇ ಸಾಲ ಮತ್ತು ಇತರೆ ಪಾವತಿಗಳನ್ನು ಕಡ್ಡಾಯವಾಗಿ ಮಾಡತಕ್ಕದ್ದು.

* ಸದರಿ ಗುಂಪಿನ ಬ್ಯಾಂಕು ಖಾತೆಯನ್ನು ಸ್ಥಳೀಯ ಅಥವಾ ಹತ್ತಿರದ....... ಬ್ಯಾಂಕಿನಲ್ಲಿ

ತೆರೆಯಲು ಮತ್ತು ವ್ಯವಹರಿಸಲು ಕೆಳಗಿನ ಇಬ್ಬರು ಸದಸ್ಯರಿಗೆ ಅಧಿಕಾರ ನೀಡಲಾಗಿದೆ. ಇವರನ್ನು ಪ್ರತಿನಿಧಿ-೧, ಪ್ರತಿನಿಧಿ -೨ ಎಂದು ಕರೆಯಲಾಗಿದೆ. ಪ್ರತಿ ಎರಡು ವರ್ಷಕ್ಕೊಮ್ಮೆ ಅಥವಾ ಗುಂಪಿನ ಸರ್ವಮತದ ಮೂಲಕ ಮುಂಚಿತವಾಗಿ ಇರವನ್ನು ಬದಲಿಸುವ ಅಧಿಕಾರ ಗುಂಪಿನ ಸದಸ್ಯರಿಗಿದೆ.

* ಆಂತರಿಕ ಉಳಿತಾಯ ಮತ್ತು ಸಂಪನ್ಮೂಲದ ಹೊರತಾಗಿ ಅಗತ್ಯವಾದಲ್ಲಿ ಗುಂಪಿನ ಖಾತೆಯಿರುವ ಬ್ಯಾಂಕಿನಿಂದ ಸಾಲ ಸೌಲಭ್ಯಗಳನ್ನು ಗುಂಪಿನ ಹೆಸರಿನಲ್ಲಿ ಪಡೆಯಲು ಮತ್ತು ಅದಕ್ಕೆ ಸಂಬಂಧಿಸಿದ ಸಾಲದ ಪತ್ರಗಳಿಗೆ ಸಹಿ ಮಾಡಲು ಪ್ರತಿನಿಧಿ-೧ ಮತ್ತು ಪ್ರತಿನಿಧಿ-೨ ಇವರಿಗೆ ಅವಕಾಶ ನೀಡುವ ಅಧಿಕಾರ ಗುಂಪಿನ ಸಭೆಗಿರುತ್ತದೆ.

* ಯಾವುದೇ ಸದಸ್ಯರನ್ನು ಉಚ್ಚಾಟಿಸುವ ಮತ್ತು ಹೊಸ ಸದಸ್ಯರನ್ನು ಸೇರ್ಪಡೆ ಮಾಡಿಕೊಳ್ಳುವ ಅಧಿಕಾರ ಗುಂಪಿನ ಸಭೆಗಿರುತ್ತದೆ. ಸದಸ್ಯರಿಂದ ಸಾಲ ವಸೂಲಿ ಮಾಡುವ ಮತ್ತು ಉಳಿತಾಯ ಹಣವನ್ನು ಸಂಗ್ರಹಿಸುವ ಜವಾಬ್ದಾರಿ ಗುಂಪಿನ ಪ್ರತಿ ಸದಸ್ಯರ ಮೇಲಿರುತ್ತದೆ.

* ಉಚ್ಚಾಟಿಸುವ ಅಥವಾ ಗುಂಪನ್ನು ತೊರೆಯುವ ಸದಸ್ಯರಿಗೆ ಅವರ ಉಳಿತಾಯದ ಒಟ್ಟು ಮೊತ್ತದಲ್ಲಿ ಶೇಕಡ ೨೫ರಷ್ಟು ಕಡಿತಗೊಳಿಸಿ ಉಳಿದ ಶೇಕಡ ೭೫ರಷ್ಟು ಹಣವನ್ನು ಹಿಂತಿರುಗಿಸಲಾಗುವುದು. ಆ ಸಮಯದಲ್ಲಿ ಸಾಲವಿದ್ದರೆ ಆ ಹಣವನ್ನು ಸರಿಹೊಂದಿಸಿಕೊಳ್ಳಲಾಗುವುದು. ಆದಾಗ್ಯೂ ಸಾಲ ಉಳಿದರೆ ಅದನ್ನು ಪೂರ್ತಿ ವಸೂಲಿ ಮಾಡಿದ ನಂತರ ಬಿಡುಗಡೆ ಮಾಡುವುದು. ಗುಂಪನ್ನು ತ್ಯಜಿಸುವ ಸದಸ್ಯರ ರಾಜಿನಾಮೆ ಗುಂಪಿನಲ್ಲಿ ಅಂಗೀಕಾರವಾಗಿರಬೇಕು.

* ಹೊಸ ಸದಸ್ಯರನ್ನು ಮಧ್ಯದ ಅವಧಿಯಲ್ಲಿ ಸೇರ್ಪಡಿಸಿಕೊಳ್ಳುವ ನಿರ್ಣಯವನ್ನು ಕೈಗೊಂಡಲ್ಲಿ ಪ್ರವೇಶವಾಗುವ ಹೊಸ ಸದಸ್ಯರು ಇತರೆ ಹಾಲಿ ಸದಸ್ಯರ ಒಟ್ಟು ಉಳಿತಾಯದ ಮೊತ್ತಕ್ಕೆ ಸರಿಸಮನಾಗಿ ಉಳಿತಾಯ ಹಣ ಸಂದಾಯ ಮಾಡಿ ಸೇರಬೇಕು. ಅಂಥವರಿಗೆ ಮಧ್ಯಪ್ರವೇಶದ ದಿನದಿಂದ ಕನಿಷ್ಟ ಮೂರು ತಿಂಗಳವರಿಗೆ ಯಾವುದೇ ಸಾಲಸೌಲಭ್ಯ ವಿಸ್ತರಿಸಲಾಗದು.

* ಪ್ರತಿ ಮಾರ್ಚ್ ತಿಂಗಳ ವರ್ಷಾಂತ್ಯಕ್ಕೆ ಗುಂಪಿನ ಲಾಭನಷ್ಟ ಲೆಕ್ಕವನ್ನು ಬ್ಯಾಂಕಿನವರ ನೆರವಿನಿಂದ ಲೆಕ್ಕ ಹಾಕಿಸಿ ಲಾಭಗಳಿಕೆಯನ್ನು ಸಮನಾಗಿ ಹಂಚಿಕೊಳ್ಳುವುದು. ನಷ್ಟ ಸಂಭವಿಸಿದ್ದರೆ ಅದನ್ನು ಸಮನಾಗಿ ಹಂಚಿಕೊಳ್ಳುವುದು.

ಸದಸ್ಯರ ಹೆಸರು	ಸಹಿ
೧	
೨	
೩	
೪	
೫.	

ವಿವರ (ನಮೂನೆ)

೧. ಸದಸ್ಯತ್ವ ಸಂಖ್ಯೆ ....

ದಿನಾಂಕ............

೨. ಹೆಸರು ಮತ್ತು ವಿಳಾಸ :

೩. ಜಾತಿ :

೪. ವಯಸ್ಸು :

೫. ವಿದ್ಯೆ :

೬. ಉದ್ಯೋಗ :

೭. ಕುಟುಂಬದ ಗಾತ್ರ :

೮. ತರಬೇತಿ (ಇದ್ದಲ್ಲಿ ವಿವರ) :

೯. ಜಮೀನಿನ ವಿವರ : ಒಣಭೂಮಿ ಎ........................ ಗುಂ

ನೀರಾವರಿ ಎ........................... ಗುಂ

೧೦. ಮನೆ (ಸ್ವಂತ/ಬಾಡಿಗೆ ಹಾಗೂ ನಮೂನೆ ವಿವರ) :

೧೧. ಇತರ ಆಸ್ತಿಗಳು (ದನ, ಕುರಿ ಇತ್ಯಾದಿ) :

೧೨. ಕುಟುಂಬದ ವಾರ್ಷಿಕ ವರಮಾನ :

೧೩. ಸ್ವಂತ/ಕುಟುಂಬದ ಇತರೆ ಸಾಲಗ :

೧೪. ವಿವಾಹಿತ/ಅವಿವಾ :

ಪ್ರವೇಶ ಶುಲ್ಕ ರೂ.. ಗಳು ಸಂದಾಯವಾಗಿದೆ.

ಸದಸ್ಯರ ರುಜು

ಪ್ರತಿನಿಧಿ-೧

ಪ್ರತಿನಿಧಿ-೨

ನಗದು ಪುಸ್ತಕ

.... ಪುಟ ಸಂಖ್ಯೆ........

ಜಮಾ	ರೂ	ಖರ್ಚು	ರೂ
೧. ಬ್ಯಾಂಕಿನಿಂದ ಹಿಂತೆಗೆದ ಹಣ		೧. ಸಾಲ ವಿತರಣೆ	
೨. ಪ್ರಾರಂಭಿಕ ನಗದು ಶುಲ್ಕ		೨. ಇತರೆ ಖರ್ಚು	
೩. ಉಳಿತಾಯದಿಂದ ಬಂದ ಹಣ		೩.	
೪. ಸಾಲ ಮರುಪಾವತಿಯಿಂದ		೪.	
೫. ಸೇವಾಶುಲ್ಕದಿಂದ		೫. ಬ್ಯಾಂಕಿಗೆ ಜಮಾ ಮಾಡಬೇಕಾದ ಹಣ	
೬. ಇತರೆ ಜಮ		೬. ಅಂತಿಮ ನಗದು ಶುಲ್ಕ (ರೂ. ೫ಂಕ್ಕಿಂತ ಮೀರಬಾರದು)	
ಮೊತ್ತ		ಮೊತ್ತ	

ಖಾತಾವಾರು ಜಮಾ ವಿವರ :

ಖಾತೆ ಸಂಖ್ಯೆ	ಹೆಸರು	ಉಳಿತಾಯ	ಮರುಪಾವತಿ	ಸೇವಾಶುಲ್ಕ	ದಂಡ	ಇತರೆ	ಸದಸ್ಯರ ಸಹಿ
ಮೊತ್ತ							

ಅತಿಥಿಗಳ ಸಲಹೆ/ಅಭಿಪ್ರಾಯ

ಸದಸ್ಯರ ಉಳಿತಾಯ ಮತ್ತು ಸಾಲದ ಖಾತೆ

ಹೆಸರು : .... ತಂದೆ/ಗಂಡನ ಹೆಸರು ....

ಉಳಿತಾಯ ರೂ.					ಉಳಿತಾಯ ರೂ.					ಉಳಿತಾಯ ರೂ.				
ದಿನಾಂಕ	ಉಳಿತಯಾ	ಒಟ್ಟು	ಹಣ	ಸಹಿ	ದಿನಾಂಕ	ಉಳಿತಯಾ	ಒಟ್ಟು	ಹಣ	ಸಹಿ	ದಿನಾಂಕ	ಉಳಿತಯಾ	ಒಟ್ಟು	ಹಣ	ಸಹಿ

....................................ಶಾಖೆ ಪುಟ ಸಂಖ್ಯೆ.................

ಖಾತೆ ಸಂಖ್ಯೆ :........................ ಸಾಲ ರೂ...................

ಸಾಲದ ಉದ್ದೇಶ:................................. ಅವಧಿ............... ಕಂತಿನ ಹಣ...................

ಸಾಲದ ಮೊತ್ತ: .... ಬಡ್ಡಿದರ............ (ಸೇವಾಶುಲ್ಕ ಸೇರಿ)ತಿಂಗಳಿಗೆ ಶೇ.......

ದಿನಾಂಕ	ವಿವರ	ಅಸಲುಬಡ್ಡಿ	ಖರ್ಚು	ಜಮಾ	ಮೊತ್ತ	ಸಹಿ	ಸುಸ್ತಿ ಬಾಕಿ	
							ಅಸಲು	ಬಡ್ಡಿ

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ಸ್ವಸಹಾಯ ಸಮೂಹಗಳ ಉಳಿತಾಯ : ಚಾಲ್ತಿಖಾತೆ ತೆರೆಯಲು ಅರ್ಜಿ

ಶಾಖಾಧಿಕಾರಿಗಳು ಖಾತೆ ಸಂಖ್ಯೆ :

.... ಬ್ಯಾಂಕ್ ಹಾಳೆ ಸಂಖ್ಯೆ :

.... ಇವರಿಗೆ,

ಮಾನ್ಯರೇ,

.... ಎಂದು ಕರೆಯಲಾಗುವ ನಮ್ಮ ಸ್ವಸಹಾಯ ಸಮೂಹದ (ಗುಂಪಿನ) ಉಳಿತಾಯ: ಚಾಲ್ತಿಖಾತೆಯನ್ನು ತಮ್ಮ ಶಾಖೆಯಲ್ಲಿ ಪ್ರಾರಂಭಿಸಬೇಕೆಂದು ಈ ಮೂಲಕ ತಮ್ಮನ್ನು ಕೋರುತ್ತೇವೆ. ಖಾತೆ ತೆರೆಯಲು ಅಗತ್ಯವಿರುವ ಈ ಕೆಳಕಂಡ ದಾಖಲೆಗಳನ್ನು ಅರ್ಜಿಯ ಜೊತೆಗೆ ಲಗತ್ತಿಸಿದ್ದೇವೆ.

೧. ಸಮೂಹದ (ಗುಂಪಿನ) ಬೈಲಾದ ಪ್ರಮಾಣೀಕೃತ ಪ್ರತಿ (ಉಪ ನಿಬಂಧನೆಗಳ ಪ್ರತಿ) (ಇತೀಚಿನ ವರೆಗಿನ ತಿದ್ದುಪಡಿಗಳೊಂದಿಗೆ)

೨. ಖಾತೆಯನ್ನು ಪ್ರಾರಂಭಿಸುವ ಮತ್ತು ನಿರ್ವಹಿಸುವ ಕುರಿತಾಗಿ ಮಹಾಸಭೆ : ಆಡಳಿತ ಮಂಡಳಿ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಇತ್ತೀಚೆಗೆ ತೆಗೆದುಕೊಂಡ ನಿರ್ಣಯದ ಪ್ರತಿ.

೩. ಖಾತೆಯ ವ್ಯವಹಾರಕ್ಕಾಗಿ ನಿಯೋಜಿತರಾದವರ ಮಾದರಿ ಸಹಿ. ಪದಾಧಿಕಾರಿಯೊಬ್ಬರ ದೃಢೀಕರಣದೊಂದಿಗೆ.

೪. ಸ್ವಸಹಾಯ ಸಮೂಹದ ನೊಂದಣಿ ಪತ್ರ (ಇದ್ದಲ್ಲಿ)

೫. ಖಾತೆ ನಿರ್ವಹಿಸುವವರ ಇತ್ತೀಚಿನ ೩ ಭಾವಚಿತ್ರಗಳು.

ಉಳಿತಾಯ : ಚಾಲ್ತಿಖಾತೆಯನ್ನು ನಡೆಸುವುದಕ್ಕಾಗಿ ಸದ್ಯಕ್ಕೆ ಜಾರಿಯಲ್ಲಿರುವ : ಕಾಲಕಾಲಕ್ಕೆ ಬದಲಾವಣೆಯಾಗುವ ಬ್ಯಾಂಕಿನ ನಿಯಮಾವಳಿಗಳಿಗೆ ಬದ್ದರಾಗಿ ಅವುಗಳನ್ನು ಪಾಲಿಸುತ್ತೇವೆಂದು ನಾವು ಒಪ್ಪುತ್ತೇವೆ. ನಮ್ಮ ಸ್ವಸಹಾಯ ಸಮೂಹದ ಧ್ಯೇಯ ಧೋರಣೆ ಆಡಳಿತ ಮಂಡಳಿಯ ರಚನೆ ಮತ್ತು ಕಾರ್ಯ ವಿಧಾನದಲ್ಲಿ ಆಗಬಹುದಾದ ಮುಂದಿನ ಬದಲಾವಣೆಗಳನ್ನು ಕಾಲ ಕಾಲಕ್ಕೆ ನಾವು ತಮಗೆ ಲಿಖಿತ ರೂಪದಲ್ಲಿ ಸಲ್ಲಿಸುತ್ತೇವೆ. ಅದುವರೆಗೆ ಈಗ ಸಲ್ಲಿಸಿರುವ ನಮ್ಮ ಬೈಲಾದಲ್ಲಿನ ನೀತಿ ನಿಯಮಾವಳಿಗಳು ಊರ್ಜಿತದಲ್ಲಿರುತ್ತವೆ.

* ನಾವು ಬೇರೆ ಯಾವುದೇ ಬ್ಯಾಂಕಿನಲ್ಲಿ ಯಾವುದೇ ತರಹದ ಸಾಲ ಸೌಲಭ್ಯವನ್ನು ಹೊಂದಿರುವುದಿಲ್ಲ ಹಾಗೂ ಒಂದು ವೇಳೆ ಅಂತಹ ಯಾವುದೇ ತರಹದ ಸಾಲ ಸೌಲಭ್ಯ ಬೇರೆ ಬ್ಯಾಂಕಿನಿಂದ ಹೊಂದಿದ ಪಕ್ಷದಲ್ಲಿ ತಮ್ಮ ಗಮನಕ್ಕೆ ತರುತ್ತೇವೆ.

[illegible]

* ನಾವು ಈ ಕೆಳ ಕಾಣಿಸಿದ ಹಣಕಾಸು ಸಂಸ್ಥೆಗಳಿಂದ ಕೆಳಗಿನಂತೆ ಸಾಲ ಸೌಲಭ್ಯ ಹೊಂದಿರುತ್ತೇವೆ.

ಬೇರೆ ಶಾಖೆಗಳಿಂದ ಬೇರೆ ಬ್ಯಾಂಕುಗಳಿಂದ ಮತ್ತು ಇತರ ಹಣಕಾಸು ಸಂಸ್ಥೆಗಳಿಂದ ನಮಗೆ ಬರಬಹುದಾದ ಹಾಗೂ ಸಂಗ್ರಹಣೆ ಮಾಡಿಕೊಳ್ಳುವುದಕ್ಕಾಗಿ ತಮ್ಮ ಶಾಖೆಗೆ ನಾವು ನೀಡಬಹುದಾದ ಚೆಕ್ಕುಗಳು, ಡಿಮ್ಯಾಂಡ್ ಡ್ರಾಫ್ಟ್‌ಗಳು, ಬಿಲ್ಲುಗಳು ಮತ್ತು ಹುಂಡಿಗಳನ್ನು ತಾವು ಸಂಪೂರ್ಣವಾಗಿ ನಮ್ಮ ಜವಾಬ್ದಾರಿಯ ಮೇಲೆ ಸಂಗ್ರಹಣೆಗಾಗಿ ಕಳಿಸಲು ಮತ್ತು ಒಂದು ವೇಳೆ ತಾವು ನಮ್ಮ ಅನುಕೂಲಕ್ಕಾಗಿ ಮುರಿಸಿಕೊಟ್ಟ (ಡಿಸ್ಕೌಂಟ್ ಮಾಡಿದ) ಚೆಕ್ ಡಿಮ್ಯಾಂಡ್ ಡ್ರಾಫ್ಟ್ ಮತ್ತು ಬಿಲ್ಲುಗಳು ಸಕಾಲದಲ್ಲಿ ನಗದಾಗಿ ತಮಗೆ ಬರದಿದ್ದ ಪಕ್ಷದಲ್ಲಿ ಸದರಿ ಮೊತ್ತವನ್ನು ಇತರ ಖರ್ಚುಗಳು ಶುಲ್ಕ ಮತ್ತು ಬಡ್ಡಿ ಸಮೇತ ತಾವು ಕೇಳಿದಾಗ ವಾಪಸ್ಸು ತುಂಬಲು ನಾವು ಸಿದ್ದರಿದ್ದೇವೆ ಎಂದು ಈ ಮೂಲಕ ತಿಳಿಸಬಯಸುತ್ತೇವೆ.

ನಮ್ಮ ಖಾತೆಯ ವ್ಯವಹಾರಕ್ಕಾಗಿ ನಿಯಮಾನುಸಾರ ಚೆಕ್ ಪುಸ್ತಕವನ್ನು ನೀಡಲು ವಿನಂತಿಸಿ ಕೊಳ್ಳುತ್ತಿದ್ದೇವೆ.

ತಮ್ಮ ವಿಶ್ವಾಸಿಗಳು

ಅಧ್ಯಕ್ಷರು	ಕಾರ್ಯದರ್ಶಿಗಳು
ಪ್ರತಿನಿಧಿ-೧	ಪ್ರತಿನಿಧಿ-೨

ಪರಿಚಯಕಾರರು

ನನಗೆ ಶ್ರೀ/ಶ್ರೀಮತಿ.................................. ಇವರ ಪರಿಚಯ ಕಳೆದ ....ವರ್ಷಗಳಿಂದ ಇದೆ ಇವರ ಖಾತೆಯನ್ನು ಪ್ರಾರಂಭಿಸುವ ವಿಷಯವನ್ನು ಬ್ಯಾಂಕು ಪರಿಗಣಿಸಬಹುದೆಂದು ಶಿಫಾರಸು ಮಾಡುತ್ತೇನೆ.

ಹೆಸರು :

ವಿಳಾಸ : ಖಾತೆ ಸಂಖ್ಯೆ :

ಪರಿಚಯಕಾರರ ಸಹಿ

ಕಛೇರಿಯ ಉಪಯೋಗಕ್ಕಾಗಿ :

ನನ್ನ ಸಮ್ಮುಖದಲ್ಲಿ ಸಹಿ ಹಾಕಲಾಗಿದೆ. ಪರಿಚಯಕಾರರ ಸಹಿಯನ್ನು ತಾಳೆ ನೋಡಲಾಗಿದೆ ಮತ್ತು ಖಾತೆ ತೆರಯಲು ಅನುಮತಿ ನೀಡಲಾಗಿದೆ.

ಶಾಖಾಧಿಕಾರಿ

[illegible]

[illegible]

[illegible]

[illegible]

[illegible]

ಅಡಿಟಿಪ್ಪಣಿಗಳು

೧. ಪ್ರಭಾಕರ ಶಿಶಿಲ., ಅಭಿವೃದ್ಧಿ ಮತ್ತು ಯೋಜನಾ ಅರ್ಥಶಾಸ್ತ್ರ

೨. ಗುಲಾಬಿ ಬಿಳಿಮಾಲೆ., ಮಹಿಳಾ ಅಧ್ಯಯನದ ವಿಶೇಷ ಸಂಚಿಕೆ

೩. ಎಚ್.ಎಸ್.ಶ್ರೀಮತಿ., ಮಹಿಳಾ ಅಧ್ಯಯನ ಉತ್ತರಾಯಣ ಸಂಚಿಕೆ, ಕನ್ನಡ ವಿಶ್ವವಿದ್ಯಾಲಯ

೪. ಟಿ.ಆರ್.ಚಂದ್ರಶೇಖರ ಮತ್ತು ಎಂ. ಚಂದ್ರಪೂಜಾರಿ ಅಭಿವೃದ್ಧಿ ಅಧ್ಯಯನ

೫.೬. ಎಂ.ಆರ್.ರಂಗಸ್ವಾಮಯ್ಯ., ಅಭಿವೃದ್ಧಿ ಯೋಜನೆಗಳು

ಮೂಲ ಆಕಾರಗಳು

ಎ.ಟಿ.ಸೂರ್ಯವಂಶಿ ಸ್ವಸಹಾಯ ಸಂಘಗಳ ಪರಿಚಯ ಕರ್ನಾಟಕ ವಿಕಾಸ ತಿಂಗಳ ಪತ್ರಿಕೆ

ಶಿವಾನಂದ ಮೇಟಿ ಕರ್ನಾಟಕ ವಿಕಾಸ ತಿಂಗಳ ಪತ್ರಿಕೆ

ಟಿ.ಆರ್.ಚಂದ್ರಶೇಖರ ಮಹಿಳೆ : ಆರ್ಥಿಕತೆ ಮತ್ತು ಅಭಿವೃದ್ಧಿ

ಬಿ.ಎನ್.ಪೈ., ವೆಂಕಟಯ್ಯ ಅಪ್ಪಗೇರಿ., ಲೆಕ್ಕ ಪತ್ರಗಳ ನಮೂನೆಗಳು : ತುಂಗಭದ್ರ ಗ್ರಾಮೀಣಬ್ಯಾಂಕ್ ಪ್ರಧಾನ ಕಛೇರಿ ಬಳ್ಳಾರಿ.

ಸ್ವಶಕ್ತಿ ಯೋಜನೆ ಕರ್ನಾಟಕ ರಾಜ್ಯ ಮಹಿಳಾ ಅಬಿವೃದ್ಧಿ ನಿಗಮ

ಅಧ್ಯಾಯ ೫

ವರ್ತಮಾನದಲ್ಲಿ ಸ್ವ-ಶಕ್ತಿ ಯೋಜನೆ ಮತ್ತು ಬುಡಕಟ್ಟು ಮಹಿಳೆಯರ ಆರ್ಥಿಕ ಸ್ಥಿತಿಗತಿ

* ಮಹಿಳೆಯರ ಉನ್ನತಿಗೆ ಸ್ವಸಹಾಯ ಸಂಘಗಳ ಕೊಡುಗೆ
* ಮಹಿಳೆಯರನ್ನು ಸಶಕ್ತಗೊಳಿಸುವಿಕೆಯಲ್ಲಿ ಸ್ವಸಹಾಯ ಸಂಘಗಳು
* ಮಹಿಳೆಯರ ಸಶಕ್ತೀಕರಣ
* ಮಹಿಳೆಯರ ದುಡಿಮೆಯ ಸಹಭಾಗಿತ್ವ
* ಮಹಿಳೆಯರ ಸ್ವಸಹಾಯ ಗುಂಪಿನ ಸಂಘಟನೆ
* ಯೋಜನೆ ಮೂಲಕ ಸ್ವಸಹಾಯ ಸಂಘದ ರಚನೆ
* ಸ್ವಸಹಾಯ ಗುಂಪಿನ ರಚನೆಯಿಂದ ಮಹಿಳೆಯರ ಮೇಲಾಗುವ ಪರಿಣಾಮಗಳು
* ಗ್ರಾಮೀಣ ಮಹಿಳೆಯರು ಮತ್ತು ಸ್ವಸಹಾಯ ಸಂಘಗಳು
* ಅಭಿವೃದ್ಧಿಯಲ್ಲಿ ಮಹಿಳೆ -ಡಾ. ಅಮರ್ತ್ಯಸೇನರವರ ವಿಚಾರಧಾರೆ

೫. ವರ್ತಮಾನದಲ್ಲಿ ಸ್ವ-ಶಕ್ತಿ ಯೋಜನೆ ಮತ್ತು ಬುಡಕಟ್ಟು ಮಹಿಳೆಯರ ಆರ್ಥಿಕ ಸ್ಥಿತಿಗತಿ

ಒಂದು ದೇಶ ಅಥವಾ ಪ್ರದೇಶದಲ್ಲಿ ಅಭಿವೃದ್ಧಿಯು, ಮಹಿಳೆಯರು ಅದರಲ್ಲಿಯೂ ಬುಡಕಟ್ಟು ಮಹಿಳೆಯರು ಮತ್ತು ಇತರೆ ಹಿಂದುಳಿದ; ಕೆಳಜಾತಿಯ 'ಮಹಿಳೆಯರ ಬದುಕಿನ ಸ್ಥಿತಿಗತಿಗಳನ್ನು ಉತ್ತಮಪಡಿಸಿದೆಯೋ ಅಥವಾ ಹಾನಿಗೊಳಪಡಿಸಿದೆಯೋ ಎಂಬುದರ ಬಗ್ಗೆ ಭಾರತದಲ್ಲಿ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ತೀವ್ರ ರೀತಿಯ ಚರ್ಚೆ ೧೯೭೦ರ ದಶಕದ ಪ್ರಾರಂಭದಿಂದಲೂ ನಡೆಯುತ್ತಾ ಬಂದಿದೆ. ಅಭಿವೃದ್ಧಿಯು ಮಹಿಳೆಯರ ಬದುಕಿನ ಸ್ಥಿತಿಗತಿಯ ಮೇಲೆ ಹಾನಿಯುಂಟು ಮಾಡುವಲ್ಲಿ ಕಾರಣವಾಗಿರುವ ಮತ್ತೊಂದು ಬಹುಮುಖ್ಯ ಸಂಗತಿಯೆಂದರೆ ಅದರ ಪುರುಷಶಾಹಿ ಸ್ವರೂಪವಾಗಿದೆ. ಮಹಿಳೆಯರನ್ನು ಸಾಮಾಜಿಕ ಘಟಕವೆಂದು ಅಭಿವೃದ್ಧಿಯ ನಿಯೋಗಿಗಳೆಂದು ಅಭಿವೃದ್ಧಿಯು ಸಾಧ್ಯವೆಂದೂ ಪರಿಗಣಿಸುವುದರಲ್ಲಿನ ವೈಫಲ್ಯವೇ ಅಭಿವೃದ್ಧಿಯನ್ನು ಮಹಿಳೆಯರ ವಿರೋಧಿ ಸಂಗತಿಯನ್ನಾಗಿ ಮಾಡಿಬಿಟ್ಟಿದೆ'.[೧]

ಇಂದು ಬುಡಕಟ್ಟು ಮಹಿಳೆಯರನ್ನು ಸಾಮಾಜಿಕ ಮತ್ತು ಆರ್ಥಿಕ ಘಟಕವಾಗಿ ನೋಡುವ ಪರಿ ರೂಢಿಗೆ ಬಂದಿದೆ. 'ಸಾಮಾಂತವಾದಿ ಆರ್ಥಿಕ ವ್ಯವಸ್ಥೆಯು ನಾಶವಾಗಿ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆ ರೂಪಗೊಳ್ಳುವ ವಿಕಾಸವಾದಿ ಪ್ರಕ್ರಿಯೆಯನ್ನು ಕೈಗಾರಿಕೀಕರಣದಲ್ಲಿ, ನಗರೀಕರಣದಲ್ಲಿ, ಆಧುನೀಕರಣದಲ್ಲಿ, ವಿಭಕ್ತಿಕರಣದಲ್ಲಿ ಗುರುತಿಸಬಹುದಾಗಿದೆ'.[೨] ಭಾರತದ ಸಂದರ್ಭದಲ್ಲಿ ಹಾಗೂ ಕರ್ನಾಟಕದ ಸಂದರ್ಭದಲ್ಲಿ ಅಭಿವೃದ್ಧಿಯ ದೃಷ್ಟಿಯಿಂದ ಅತ್ಯಂತ ಕೆಳಮಟ್ಟದಲ್ಲಿರುವ, ಅಂಚಿನಲ್ಲಿರುವ, ನಿಕೃಷ್ಟರಾಗಿರುವ ವಂಚಿತ ವರ್ಗವೆಂದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮಹಿಳೆಯರು. ಇಲ್ಲಿ ಅಭಿವೃದ್ಧಿಯನ್ನು ಈ ಮಹಿಳೆಯರ ನೆಲೆಯಿಂದ ಪರಿಭಾವಿಸಿಕೊಳ್ಳಬೇಕಾಗಿದೆ.

ದೇಶದಲ್ಲಿ ಪರಿಶಿಷ್ಟ ಮಹಿಳೆಯರ ಬದುಕು ಅಭಿವೃದ್ಧಿಯ ಎಲ್ಲಾ ಹಿತಾಸಕ್ತಿಗಳನ್ನು ಪ್ರತಿನಿಧಿಸುತ್ತದೆ. ಪರಿಶಿಷ್ಟ ಮಹಿಳೆಯರ ಬದುಕು ಸಮಾಜದಲ್ಲಿ ಅಂಚಿನಲ್ಲಿರುವ ಎಲ್ಲಾ ವಂಚಿತವರ್ಗಗಳ ಬದುಕನ್ನು ಪ್ರತಿನಿಧಿಸುತ್ತದೆ. "ನೈಲಾಕಬೀರ್ ಹೇಳುವಂತೆ ಜಗತ್ತಿನಲ್ಲಿ ನಿಕೃಷ್ಟರ ಮತ್ತು ವಂಚಿತರ ಬದುಕು ರಾಚನಿಕವಾಗಿ ಬದಲಾದಾಗ ಮಾತ್ರ ಅಭಿವೃದ್ಧಿಗೆ ಸಮಾನತೆಗೆ ಒಂದು

[illegible]

[illegible]

[illegible]

[illegible]

[illegible]

[illegible]

ಅರ್ಥ ಬರುವುದು ಸಾಧ್ಯ”.[೩] ಅಭಿವೃದ್ಧಿಯನ್ನು ಉದ್ದೇಶವನ್ನಾಗಿ ಮಾಡಿಕೊಂಡು ಎಲ್ಲಾ ನೊಂದ ಮಹಿಳೆಯರು ತನ್ನ ಆಧುನಿಕ ಕಾಲದಲ್ಲಿ ಸ್ವಾವಲಂಬಿಗಳಾಗಿ ಬದುಕು ಪ್ರಾರಂಭಿಸಿದ್ದಾರೆ.

ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಮಹಿಳೆಯರು ಮತ್ತು ಬುಡಕಟ್ಟು ಮಹಿಳೆಯರು ತೊಡಗಿಕೊಳ್ಳುವುದರಿಂದ ಅವರಿಗೆ ತೀವ್ರ ಹಾನಿಯಾಗಿದೆ. ಆದ್ದರಿಂದ ಅವರ ಜೀವನಮಟ್ಟ ಕೀಳಾಗಿದೆ, ಎಂದು ಒಂದು ಕಾಲಕ್ಕೆ ಹೇಳಲಾಗುತ್ತಿತ್ತು. “ಆದರೆ ಇಂದು ಹಾನಿಯನ್ನು ಕುರಿತ ಚರ್ಚೆ ತಿರುವು ಮುರುವು ಆಗಿದೆ. ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳೆಯರು ತೀವ್ರವಾಗಿ ತೊಡಗಿಕೊಳ್ಳುವುದರಿಂದ ಹಾನಿಯಾಗಿರುವುದು ಅಭಿವೃದ್ಧಿಗೆ ವಿನಾ ಮಹಿಳೆಯರಿಗಲ್ಲ ಎಂದು ವಾದಿಸಲಾಗುತ್ತಿದೆ. ಜನಸಂಖ್ಯೆಯಲ್ಲಿ ಸರಿಸುಮಾರು ಅರ್ಧದಷ್ಟಿರುವ ಮಹಿಳೆಯರ ದುಡಿಮೆ ಕರ್ತೃತ್ವ ಶಕ್ತಿ ಅನಾವಶ್ಯಕವಾಗಿ ಪೋಲಾಗುತ್ತಿದ್ದರೆ ಜಡವಾಗಿ ಬಿದ್ದಿದ್ದರೆ ಅದರ ಹಾನಿಯು ಅಭಿವೃದ್ಧಿಗೆ ಮತ್ತು ಆರ್ಥಿಕತೆಗೆ ತಟ್ಟುತ್ತದೆ. ಮಹಿಳೆಯರಿಗೆ ಅಭಿವೃದ್ಧಿ ಬೇಕು ಎಂಬ ಕಾಲ ಹೋಗಿ ಇಂದು ಅಭಿವೃದ್ಧಿಗೆ ಮಹಿಳೆಯರು ಬೇಕು ಎನ್ನುವ ಕಾಲ ಬಂದಿದೆ”.[೪]

ಭಾರತ ದೇಶದಲ್ಲಿ ಮಹಿಳೆಯರು ಅದರಲ್ಲೂ ಈ ಬುಡಕಟ್ಟು ಮಹಿಳೆಯರ ಅಭಿವೃದ್ಧಿಗೆ ಸಂಬಂಧಿಸಿದಂತೆ ಸರ್ಕಾರಗಳು ಹಾಗೂ ಅಂತರರಾಷ್ಟ್ರೀಯ ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳು ಮಹಿಳೆಯರ ದೈನಂದಿನ ಹಿತಾಸಕ್ತಿಗಳನ್ನು ಅವರ ಸ್ಥಿತಿಗತಿಗಳನ್ನು ಉತ್ತಮಪಡಿಸುವಲ್ಲಿ ಪೂರ್ಣವಾಗಿ ತೊಡಗಿಸಿಕೊಂಡಿರುವುದನ್ನು ಕಾಣಬಹುದು. “ಮಹಿಳೆಯರ ಊಟ, ವಸತಿ, ವಸ್ತ್ರ, ಮದುವೆ, ಮಕ್ಕಳು, ಉದ್ಯೋಗ ಮುಂತಾದವು ಸ್ಥಿತಿಗತಿಗಳಿಗೆ ಅಥವಾ ದೈನಂದಿನ ಹಿತಾಸಕ್ತಿಗಳಿಗೆ ಸಂಬಂಧಪಟ್ಟಿದ್ದಾವೆ. ಸರ್ಕಾರ ಮತ್ತು ಅವು ಜಾರಿಗೊಳಿಸುವ ಮಹಿಳೆಯರ ಅಭಿವೃದ್ಧಿ ಕಾರ್ಯಕ್ರಮಗಳು ಮಹಿಳೆಯರ ಸ್ಥಿತಿಗತಿಗಳನ್ನು ಉತ್ತಮಪಡಿಸುವ ದಿಶೆಯಲ್ಲಿ ಹೆಚ್ಚು ಕ್ರಿಯಾಶೀಲವಾಗಿರುತ್ತವೆ”.[೫]

ನಮ್ಮ ದೇಶದಲ್ಲಿ ಮಹಿಳೆಯರ ಅದರಲ್ಲೂ ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದವರಿಗೆ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಲು ಸರ್ಕಾರವು ಯೋಜನೆಗಳ ಮೂಲಕ ನಿರ್ಧರಿಸಿತು. “ಭಾರತದಲ್ಲಿ ಪಂಚವಾರ್ಷಿಕ ಯೋಜನೆಗಳು ‘ಕಲ್ಯಾಣ ರಾಜ್ಯ’ವೊಂದನ್ನು ಸ್ಥಾಪಿಸುವ ಘನ ಉದ್ದೇಶವನ್ನು ಹೊಂದಿದೆ”.[೬] ಇದರಲ್ಲಿ ಮಹಿಳೆಯರ ಅಭಿವೃದ್ಧಿ ಕಾರ್ಯಕ್ರಮಗಳು ಹಲವಾರು ಯೋಜನೆಗಳ ಮುಖಾಂತರ ಬುಡಕಟ್ಟು ಮಹಿಳೆಯರ ಸ್ಥಿತಿಗತಿಯನ್ನು ಹಾಗೂ ಅವರ ಅಭಿವೃದ್ಧಿಗೆ ಸೂಕ್ತ ಸಲಹೆ ನೀಡಲು ಸರ್ಕಾರವು ಮಹಿಳೆಯರು ಅತ್ಯಂತ ಕ್ರಿಯಾಶೀಲರಾಗಿ ತಮ್ಮ ಸ್ಥಾನಮಾನವನ್ನು ಹೆಚ್ಚಿಸಿಕೊಳ್ಳುವಂತೆ ಹಲವಾರು ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ.

ದೇಶದ ಅಭಿವೃದ್ಧಿಗೆ ಮಹಿಳೆಯರ ಉತ್ಪಾದನಾ ಸಾಮರ್ಥ್ಯವನ್ನು ಉತ್ತಮಪಡಿಸಬೇಕು ಎಂಬ ತಿಳುವಳಿಕೆ ಉಂಟಾದದ್ದು ತುಂಬಾ ಮಹತ್ವದ ಸಂಗತಿಯಾಗಿದೆ. ನಂತರ ಮಹಿಳಾ ಅಭಿವೃದ್ಧಿ

ಯೋಜನೆಯಡಿಯಲ್ಲಿ 'ಸ್ವ-ಶಕ್ತಿ' ಯೋಜನೆಯಲ್ಲಿ ಮಹಿಳೆಯರನ್ನು ತೊಡಗಿಸಿಕೊಂಡು ಅವರು ಆಧುನಿಕ ಸಮಾಜದಲ್ಲಿ ತಮ್ಮ ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಸ್ವತಂತ್ರ ಮತ್ತು ಸ್ವಾವಲಂಬಿಗಳಾಗಿ ಬದುಕನ್ನು ಸಿದ್ಧಪಡಿಸಿಕೊಂಡಿದ್ದಾರೆ. ಇದರಿಂದ ಗ್ರಾಮೀಣ ಪ್ರದೇಶದಲ್ಲಿ ಹಲವಾರು ಸ್ವ ಸಹಾಯ ಸಂಘಗಳನ್ನು ಮಾಡಿಕೊಂಡು ಸ್ವಯಂ ಉದ್ಯೋಗ, ವ್ಯಾಪಾರ, ಮತ್ತು ಕೂಲಿಯ ಅವಕಾಶಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಮಾಡುತ್ತಾ ಸಂಘಕ್ಕೆ ತಮ್ಮ ಸ್ವಲ್ಪ ಹಣವನ್ನು ಸೇರಿಸಿಕೊಂಡು ಉತ್ತಮ ರೀತಿಯಲ್ಲಿ ಬದುಕು ಸಾಗಿಸುತ್ತಿರುವುದು ಕಂಡು ಬರುತ್ತದೆ.

ಒಂದು ಕಾಲದಲ್ಲಿ "ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಹಿಳೆಯರ ಅಭಿವೃದ್ಧಿಗಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಸಂಪೂರ್ಣವಾಗಿ ವಿಫಲಗೊಂಡಿವೆ"[೭] ಎಂಬ ವಾದವಿತ್ತು. ಆದರೆ ಇಪ್ಪತ್ತನೆಯ ಶತಮಾನದ ಅಂತಿಮ ಕಾಲದಲ್ಲಿ ಮಹಿಳೆಯರು ಹಲವಾರು ರಂಗಗಳಲ್ಲಿ ಪ್ರವೇಶಿಸಿ ತಂತ್ರಜ್ಞಾನ ಇನ್ನು ಅನೇಕ ಕಾಲಸರಣಿಯಲ್ಲಿ ಅಭಿವೃದ್ಧಿಯ ಯೋಜನೆಯನ್ನು ರೂಪಿಸಿಕೊಂಡು ಮುನ್ನುಗ್ಗುತ್ತಿದ್ದಾರೆ. "ಇಂದಿಗೂ ಮಹಿಳೆಯರ ಅಭಿವೃದ್ಧಿಯನ್ನು ಸರ್ಕಾರ ಮತ್ತು ಪಂಚವಾರ್ಷಿಕ ಯೋಜನೆಗಳು, 'ಕಲ್ಯಾಣವಾದಿ' ನೆಲೆಯಲ್ಲಿ ನೋಡುತ್ತಿದ್ದಾವೆಯೇ ವಿನಾ ಸಂಘರ್ಷವಾದಿ ನೆಲೆಯಲ್ಲಿ, ಸಮಾನತೆ ನೆಲೆಯಲ್ಲಿ, ಸಾಮಾಜಿಕ ನ್ಯಾಯದ ನೆಲೆಯಲ್ಲಿ ನೋಡುತ್ತಿಲ್ಲ".[೮]

ನಂತರ ಮಹಿಳೆಯರ ಅಭಿವೃದ್ಧಿ ಎಂಬುದು ಒಂದು ಪ್ರತ್ಯೇಕ ಕ್ರಿಯೆಯನ್ನಾಗಿ ನೋಡುವ ಪರಿ ಇತ್ತೀಚೆಗೆ ಪ್ರಾರಂಭವಾಗಿದೆ. ಅಭಿವೃದ್ಧಿಯು ಸಮಾಜದ ಎಲ್ಲಾ ವರ್ಗಗಳ ಹಿತಾಸಕ್ತಿಯನ್ನು ಪೂರೈಸುವತ್ತದೆ, ಎಂಬ ನಂಬಿಕೆಯು ಇಂದು ಸವಾಲನ್ನು ಎದುರಿಸುತ್ತಿದೆ. ಆದರೆ ಇಂದು ಈ ರೀತಿ ಮಹಿಳೆಯರು ಅದರಲ್ಲೂ ಬುಡಕಟ್ಟು ಮಹಿಳೆಯರು ಅಭಿವೃದ್ಧಿ ಕಾರ್ಯಕ್ರಮಗಳನ್ನು ಉಪಯೋಗಿಸಿಕೊಂಡು ಇದರ ಉಪಯೋಗವನ್ನು ಪಡೆದುಕೊಳ್ಳುವಲ್ಲಿ ಸಫಲರಾಗಿದ್ದಾರೆ. ಆದರೆ ಹಿಂದಿನ ಕಾಲದಲ್ಲಿ ಮಹಿಳೆಯರು ಅನುಭೋಗಿ ವಸ್ತುಗಳು, ಇವರ ಬದುಕು ಒಂದು ಕುಟುಂಬಕ್ಕೆ ಮೀಸಲು ಮತ್ತು ಅವರಿಗೆ ತಮ್ಮದೇ ಆದ ಹಿತಾಸಕ್ತಿಗಳು ಇರುವುದಿಲ್ಲ, ಇವಳು ಅಬಲೆ ಎಂದು ಸಮಾಜದಲ್ಲಿ ನಂಬಿಕೆ ಇತ್ತು. ಆದರೆ ಇಂದು ಇದು ಸಂಪೂರ್ಣವಾಗಿ ಬದಲಾಗಿ ಆರ್ಥಿಕ ಚಟುವಟಿಕೆಯಲ್ಲಿ ಮತ್ತು ಉತ್ಪಾದನೆಯಲ್ಲಿ ಪುರುಷರಿಗಿಂತ ವಿಭಿನ್ನ ರೀತಿಯಲ್ಲಿ ತೊಡಗಿಕೊಂಡಿದ್ದಾರೆ.

ಮಹಿಳೆಯರ ಉನ್ನತಿಗೆ ಸ್ವ ಸಹಾಯ ಸಂಘಗಳ ಕೊಡುಗೆ.

"ಅಭಿವೃದ್ಧಿಶೀಲ ರಾಷ್ಟ್ರಗಳ ಮಹಿಳೆಯರ ಶೋಷಣೆಯ ವಿರುದ್ಧ ಚಳುವಳಿ ಹೋರಾಟ ಸತತವಾಗಿ ಮುಂದುವರೆದಿದ್ದು, ಈ ನಿಟ್ಟಿನಲ್ಲಿ ಸರ್ಕಾರ, ಸಂಘ ಸಂಸ್ಥೆಗಳು, ಸ್ತ್ರೀ ವಾದಿ ಚಿಂತಕರು ಅನೇಕ ಯೋಜನೆಗಳನ್ನು ರೂಪಿಸಿಕೊಂಡು ಪ್ರಯತ್ನಶೀಲವಾಗಿವೆ. ಸಮಾಜದ ಒಟ್ಟು ಜನಸಂಖ್ಯೆಯ ಸರಿಸುಮಾರು ಅರ್ಧದಷ್ಟಿರುವ ಮಹಿಳೆಯರು ಇವರು ಪುರುಷರಿಂದ ಕೌಟುಂಬಿಕ ಹಿಂಸೆ ಮುಂತಾದ

ಅನೇಕ ಸಮಸ್ಯೆಗಳಲ್ಲಿ ಬದುಕು ಸವೆಸುತ್ತಿದ್ದಾಳೆ".[೯] ಅದರಲ್ಲಿಯೂ ಬುಡಕಟ್ಟು ಮಹಿಳೆಯರಂತೂ ತುಂಬಾ ಸಮಸ್ಯೆಗಳನ್ನು ಎದುರಿಸುತ್ತಿದ್ದರು. ಇವರು ದುಡಿಮೆ ಮತ್ತು ಆರ್ಥಿಕ ಪರಿಗಣನೆಗೆ ಬಾರದ ಕಾರಣ ದೇಶದ ಅಭಿವೃದ್ಧಿಯ ಯೋಜನೆಯ ಪರಿಧಿಯ ಆಚೆಯೇ ಉಳಿದುಬಿಟ್ಟಿದ್ದರು.

ನಂತರ ಇವರ ದುಡಿಮೆ ಮನೆ ಒಳ ಆವರಣದಲ್ಲಿ ಮತ್ತು ಕೃಷಿ ಕಾರ್ಮಿಕ ಕ್ಷೇತ್ರದಲ್ಲಿ ಇವರ ಉತ್ಪಾದನಾ ಸಾಮರ್ಥ್ಯ ಪುರುಷನಿಗಿಂತ ಹೆಚ್ಚಾದರೂ ಗಳಿಕೆ ಪಾಲುದಾರಿಕೆಯಲ್ಲಿ ಹಂಚುವಿಕೆಯಲ್ಲಿ ಇವರಿಗೆ ದೊರಕುವುದು ಅತಿ ಕಡಿಮೆ. "ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಜಾಗೃತಗೊಂಡ ಮಹಿಳಾ ಚಳುವಳಿ ಆರ್ಥಿಕ ಸ್ವಾತಂತ್ರ್ಯದ ಅಗತ್ಯ ಒತ್ತಿಹೇಳುವುದರೊಡನೆ ಕುಟುಂಬ, ರಾಷ್ಟ್ರದ ಅಭಿವೃದ್ಧಿಯಲ್ಲಿ ಆಕೆಯ ಸಹಭಾಗಿತ್ವದ ಅವಶ್ಯಕತೆಯನ್ನು ಗುರುತಿಸಿತು. ಆ ನಿಟ್ಟಿನಲ್ಲಿ ಹುಡುಕಾಟ ನಡೆಸಿತು".[೧೦] ಬುಡಕಟ್ಟು ಮಹಿಳೆಯರು ಮತ್ತು ಇತರೆ ಮಹಿಳೆಯರಲ್ಲಿ ಶೋಷಣೆ ವಿರುದ್ಧ ಜಾಗೃತ, ಆತ್ಮ ವಿಶ್ವಾಸ ಮತ್ತು ಸಾಮರ್ಥ್ಯ ಚಿಗುರಲು ದಾರಿ ತೆರೆದುಕೊಂಡಿತು. ಇದು ಸ್ವಲ್ಪ ಪಟ್ಟಣ, ನಗರ ಪ್ರದೇಶಗಳಲ್ಲಿ ಕಂಡು ಬಂದಿತು.

"ಆದರೆ ಗ್ರಾಮೀಣ ಪ್ರದೇಶದಲ್ಲಿ ಅನಕ್ಷರಸ್ಥರು, ಬಡವರು ಇರುವ ಬುಡಕಟ್ಟು ಮಹಿಳೆಯರ ಸ್ಥಿತಿಯಲ್ಲಿ ಗುರುತಿಸಬಹುದಾದ ಬದಲಾವಣೆ ಕಂಡುಬರಲಿಲ್ಲ. ಕಾರಣ ಕುಟುಂಬದ ಶೋಷಣೆಗೆ ಒಳಗಾದ ಗ್ರಾಮೀಣ ಪ್ರದೇಶದ ಬುಡಕಟ್ಟು ಮಹಿಳೆಯರು ಮತ್ತು ಇತರೆ ಹಿಂದುಳಿದ ಮಹಿಳೆಯರು ಮೂಢನಂಬಿಕೆ ಸಂಪ್ರದಾಯಗಳ ಚೌಕಟ್ಟಿನಲ್ಲಿ ತನ್ನ ಸಾಮರ್ಥ್ಯದ ಕಲ್ಪನೆಯೇ ಇಲ್ಲದಿರುವುದು ಕ್ಷೇತ್ರಕಾರ್ಯ ಸಮಯದಲ್ಲಿ ಕಂಡು ಬಂದಿತು. ನಂತರ ಇನ್ನು ಹಲವಾರು ಗ್ರಾಮೀಣ ಪ್ರದೇಶಗಳಲ್ಲಿ ಸ್ತ್ರೀ ವಿಮೋಚನಾ ಚಳುವಳಿಯ ವ್ಯಾಪ್ತಿಯಿಂದ ಬಹಳ ದೂರ ಉಳಿದುಕೊಂಡಿರುವುದು ಕಣ್ಣಿಗೆ ಕಾಣುತ್ತದೆ. ಇಂತಹ ಸಂದರ್ಭದಲ್ಲಿ ಮಹಿಳಾ ಅಭಿವೃದ್ಧಿ ನಿಗಮವು "ಸ್ವ-ಶಕ್ತಿ" ಯೋಜನೆಯನ್ನು ಈ ಕ್ಷೇತ್ರದಲ್ಲಿ ಸ್ಥಾಪಿಸಿತ್ತು. ಈ ಯೋಜನೆಯು ಅಲ್ಲದೆ ಇನ್ನು ಹಲವು ಯೋಜನೆಗಳು ಆಧುನಿಕ ಮಹಿಳೆಯರ ಪಾಲಿಗೆ ಬಂದವು ಎಂದು ಹೇಳಬಹುದು. ನಮ್ಮ ಅಧ್ಯಯನದ ವ್ಯಾಪ್ತಿಗೆ ಸ್ವ-ಶಕ್ತಿ ಯೋಜನೆಯಲ್ಲಿರುವ ಸ್ವ-ಸಹಾಯ ಗುಂಪುಗಳು ಕಂಡು ಬರುತ್ತವೆ. ತದನಂತರ ಅಧ್ಯಯನದ ಅನುಕೂಲಕ್ಕಾಗಿ ಇತರೆ ಸ್ವ-ಸಹಾಯ ಸಂಘಗಳನ್ನು ಸಹ ಸಂದರ್ಶನ ಮತ್ತು ಮಾಹಿತಿಯನ್ನು ತೆಗೆದುಕೊಳ್ಳಲಾಗಿದೆ.

ಪ್ರಸ್ತುತ ಸಮಾಜದಲ್ಲಿ ಈ ಕ್ಷೇತ್ರದಲ್ಲಿ ಸ್ವ-ಶಕ್ತಿ ಯೋಜನೆಯಲ್ಲಿರುವ ಸ್ವ ಸಹಾಯ ಗುಂಪುಗಳು ಈ ಪ್ರದೇಶದಲ್ಲಿ ಬಡತನ ರೇಖೆಯ ಕೆಳಗೂ, ಮತ್ತು ಗ್ರಾಮೀಣ ಬುಡಕಟ್ಟು ಮಹಿಳೆಯರಿಗೆ ನವ-ಚೈತನ್ಯದ ಜಗತ್ತೊಂದರ ಪರಿಚಯವನ್ನು ಮಾಡಿಕೊಳ್ಳುವಲ್ಲಿ ಯಶಸ್ವಿಯಾಯಿತು. ಈ ಮಹಿಳೆಯರ ಜಾಗೃತಿಯಲ್ಲಿ ಮತ್ತು ತಮ್ಮ ಹಾದಿಯಲ್ಲಿ ಮೈಲಿಗಲ್ಲಾಯ್ತು. ತನ್ನದೇ ಆದ

ಆರ್ಥಿಕ ನೀತಿಯನ್ನು ರೂಪಿಸಿಕೊಳ್ಳುವುದರ ಜೊತೆಗೆ ಸಾಮಾಜಿಕ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುವಲ್ಲಿ ಈ ಯೋಜನೆಯಲ್ಲಿರುವ ಸ್ವ-ಸಹಾಯ ಗುಂಪುಗಳು ಬಹುದೊಡ್ಡ ಪಾತ್ರ ವಹಿಸುತ್ತಿವೆ.

ಆರ್ಥಿಕ ಹಾಗೂ ಸಾಮಾಜಿಕ ಸಮಾನ ಮನಸ್ಕ ಮಹಿಳೆಯರು ಚಿಕ್ಕ ಚಿಕ್ಕ ಗುಂಪುಗಳನ್ನು ಸ್ವ-ಇಚ್ಛೆಯಿಂದ ರಚಿಸಿಕೊಂಡು ಸಂಘಟಿತರಾಗಿ ಚಿಕ್ಕ ಉಳಿತಾಯ ಮತ್ತು ಅಗತ್ಯಕ್ಕೆ ತಕ್ಕಂತೆ ಸಣ್ಣ ಸಣ್ಣ ಸಾಲಗಳು ತಾವು ಉಳಿತಾಯ ಮಾಡಿದ ಹಣವನ್ನು ಅವಶ್ಯಕತೆ ಇದ್ದವರಿಗೆ ಸರಳ ಬಡ್ಡಿದರಗಳ ಮೂಲಕ ತನ್ನ ನಿಲುಕುವ ವ್ಯಾಪ್ತಿಯಲ್ಲಿ ದುಡಿಮೆಯ ದಾರಿಯಲ್ಲಿ ಮುನ್ನೆಡೆಯುವ ಉದ್ದೇಶವನ್ನು ಸಾಕಾರಗೊಳಿಸುವಲ್ಲಿ ಈ ಯೋಜನೆಯಲ್ಲಿರುವ ಬುಡಕಟ್ಟು ಮಹಿಳೆಯರು ಮತ್ತು ಇತರೆ ಮಹಿಳೆಯರಿಗೆ ಈ ಸ್ವ ಸಹಾಯ ಗುಂಪುಗಳ ಪಾತ್ರ ಶ್ಲಾಘನೀಯ ಎಂದು ಹೇಳಬಹುದು.

"ಕೌಟುಂಬಿಕ, ಸಾಮಾಜಿಕ ಶೋಷಣೆ ಸಮಸ್ಯೆಗಳ ಬಗ್ಗೆ ಕಾಳಜಿ ಹೊಸ ಹೊಸ ದುಡಿಮೆಗಳ ಹುಡುಕಾಟ ಹಾಗೂ ಗಳಿಕೆಯ ಸದ್ವಿನಿಯೋಗದ ಯೋಜನೆಗಳು ಈ ಸ್ವ ಸಹಾಯ ಗುಂಪಿನಲ್ಲಿ ಆಕಾರ ತಳೆದವು. ಬಾಂಗ್ಲಾ ದೇಶ, ಮಲೇಶಿಯಾ, ಇಂಡೋನೇಶಿಯಾ ಮುಂತಾದ ಅಭಿವೃದ್ಧಿಶೀಲ ರಾಷ್ಟ್ರಗಳ ಮೈಕ್ರೋಕ್ರೆಡಿಟ್ ಸಂಘಗಳ ಮಾದರಿಯಲ್ಲಿ ಹಲವಾರು ಯೋಜನೆಗಳ ಮೂಲಕ ಸ್ವ-ಸಹಾಯ ಸಂಘಗಳನ್ನು ಭಾರತದಲ್ಲಿ ಕಾರ್ಯಾರಂಭ ಮಾಡಿ ಹಿಂದುಳಿದ ಮಹಿಳೆಯರ ಲೋಕದಲ್ಲಿ ಬಹುದೊಡ್ಡ ಕ್ರಾಂತಿಯನ್ನೇ ಮಾಡಿತು. ನಂತರ ಭಾರತ ಸರ್ಕಾರವು ಮಹಿಳೆಯರನ್ನು ಸ್ವಾವಲಂಬಿಗಳನ್ನಾಗಿ ಮಾಡಿ ಅವರನ್ನು ಆರ್ಥಿಕ ಪ್ರಗತಿಯತ್ತ ಕೊಂಡೊಯ್ಯಲು ಸ್ವ-ಶಕ್ತಿ ಯೋಜನೆಯನ್ನು ರೂಪಿಸಿದೆ.

ಈ ವ್ಯಾಪ್ತಿಯಲ್ಲಿ ಬರುವ ಸ್ವ-ಸಹಾಯ ಸಂಘಗಳಲ್ಲಿರುವ ಮಹಿಳೆಯರು ಅಲ್ಪ ಸ್ವಲ್ಪ ಓದು ಬರಹ ಜ್ಞಾನವುಳ್ಳ ಬೆರಳೆಣಿಕೆಯ ಮಹಿಳೆಯರನ್ನು ಹೊರತುಪಡಿಸಿದರೆ ಬಹುತೇಕ ಮಹಿಳೆಯರು ಅನಕ್ಷರಸ್ಥರಾಗಿರುವುದು ಕಂಡು ಬರುತ್ತದೆ. ಆದರೂ ಇವರು ಸ್ವಾವಲಂಬಿಗಳಾಗಿ ಬದುಕುವ ಹಂಬಲದಿಂದ ಮತ್ತು ಆಸಕ್ತಿಯಿಂದ ಸ್ವ-ಶಕ್ತಿ ಯೋಜನೆಯಡಿಯಲ್ಲಿ ಸ್ವ-ಸಹಾಯ ಸಂಘಗಳನ್ನು ರಚನೆ ಮಾಡಿಕೊಂಡಿದ್ದಾರೆ ಎಂದು ಹೇಳಬಹುದು. ಈ ಮಹಿಳೆಯರು ಪ್ರತಿವಾರ ಸಭೆ ಸೇರಿ ಆ ವಾರದ ಪ್ರತಿಯೊಬ್ಬ ಸದಸ್ಯರು ತಮ್ಮ ಉಳಿತಾಯದ ಹಣದಲ್ಲಿ ತನ್ನ ಸಂಘದ ನಿಯಮದಂತೆ ತಲಾ ಹತ್ತು ರೂಪಾಯಿಗಳನ್ನು ಸಂಘದ ಪದಾಧಿಕಾರಿಗಳು ಸಂಗ್ರಹ ಮಾಡುತ್ತಾರೆ.

ಈ ನಿಟ್ಟಿನಲ್ಲಿ ಉಳಿತಾಯದ ಒಟ್ಟು ಮೊತ್ತವನ್ನು ಕೂಡಿಸುವುದು ಆ ಬಂಡವಾಳವನ್ನು ಅಗತ್ಯಕ್ಕೆ ತಕ್ಕಂತೆ ವಿನಿಯೋಗಿಸುವುದು, ದುಡಿಸುವುದು ಮತ್ತು ಅಲ್ಪ ಬಡ್ಡಿಯೊಂದಿಗೆ ನಿಗದಿತ ಸಮಯಕ್ಕೆ ಹಿಂತಿರುಗಿಸುವ ನೀತಿ ನಿಯಮಗಳನ್ನು ಸಂಘದ ಎಲ್ಲಾ ಸದಸ್ಯರು ರೂಢಿಸಿಕೊಳ್ಳುವುದು ಕಂಡು ಬರುತ್ತದೆ. ನಂತರ ಸಂಗ್ರಹ ಮಾಡಿದ ಹಣವನ್ನು ಅಗತ್ಯವಿರುವ ಮಹಿಳೆಯರಿಗೆ ವ್ಯವಹಾರ ಮಾಡಲು ಸಾಲ ರೂಪದಲ್ಲಿ ನೀಡುತ್ತಾರೆ. ಹಾಗಯೇ ಪ್ರತಿ ವಾರ ಅಥವಾ ಮೂರು ತಿಂಗಳೊಳಗೆ

ಸಮಯ ನೀಡಿ ಅವರಿಂದ ಕಂತಿನ ರೂಪದಲ್ಲಿ ಸಾಲ ಸಂಗ್ರಹ ಮಾಡುತ್ತಾರೆ. ಈ ಸ್ವ ಸಹಾಯ ಸಂಘದಿಂದ ಸಾಲಪಡೆದಿರುವ ಮಹಿಳೆಯರು ತರಕಾರಿ, ಅಂಗಡಿ, ಹೋಟೆಲ್ ಹಾಗೂ ಕುರಿಸಾಕಾಣಿಕೆ, ಹೈನುಗಾರಿಕೆ ಇನ್ನು ಹಲವು ವ್ಯಾಪಾರಕ್ಕೆ ಹಣವನ್ನು ಸಾಲ ತೆಗೆದುಕೊಂಡು ತಪ್ಪದೇ ಮರುಪಾವತಿ ಮಾಡುತ್ತಿರುವುದು ಕಂಡುಬರುತ್ತದೆ. ತದನಂತರ ಮಹಿಳೆಯರ ಈ ವಿಶ್ವಾಸಾರ್ಹ ಪ್ರಯತ್ನಕ್ಕೆ ಸರ್ಕಾರವು ಮತ್ತು ಬ್ಯಾಂಕುಗಳು, ಸ್ವಯಂ ಸೇವಾ ಸಂಸ್ಥೆಗಳು, ವಿವಿಧ ಅಭಿವೃದ್ಧಿ ಇಲಾಖೆಗಳು ಒತ್ತಾಸೆಯಾಗಿ ನಿಂತಿವೆ. ಸ್ವ-ಸಹಾಯ ಗುಂಪುಗಳ ಯಶಸ್ವಿ ಮುಂದುವರಿಕೆಗೆ ಮಹಿಳೆಯರಲ್ಲಿ ಉಳಿತಾಯ ಮನೋಭಾವ, ಸಾಮರ್ಥ್ಯವರ್ಧನೆ, ದುಡಿಮೆಯ ಮಾರ್ಗ, ಆರ್ಥಿಕ ಚಿಂತನೆ, ಕುಟುಂಬದ ತಾಳ್ಮೆ, ಆತ್ಮ ವಿಶ್ವಾಸ ಹೆಚ್ಚಲು ದಾರಿ ಸುಗಮವಾಯ್ತು ಹಾಗೂ ಮೂಲಭೂತ ಸಾಲ ನೀಡುವವರ ಕಪಿಮುಷ್ಠಿಯಿಂದ ಬಿಡುಗಡೆ ಹೊಂದಿದರು. ಸ್ಥಳೀಯ ಸಂಪನ್ಮೂಲಗಳನ್ನು ಉಳಿಸಿಕೊಂಡು ಗುಡಿ, ಗೃಹ ಕೈಗಾರಿಕೆಗಳಿಗೆ ಉತ್ತೇಜನ ಹಾಗೂ ಸ್ವಯಂ ಉದ್ಯೋಗದ ಸ್ಥಾಪನೆಗೆ ತನ್ಮೂಲಕ ಸ್ವಾವಲಂಬಿ ಬಿಡುಗಡೆಯ ಬದುಕಿಗೆ ನಾಂದಿಯಾಯ್ತು.

ಈ ಹಿನ್ನೆಲೆಯಲ್ಲಿ ಹಣಕಾಸಿನ ವ್ಯವಹಾರ, ಆರ್ಥಿಕ ಅಭಿವೃದ್ಧಿಯ ಜೊತೆಗೆ ಸಂಘಟನಾ ಚತುರತೆ, ಸಹಭಾಗಿತ್ವ, ದಾಖಲೆ ಚರ್ಚೆ, ಚಿಂತನೆಗಳಂತಹ ಭಾವನಾತ್ಮಕ ಒಗ್ಗೂಡುವಿಕೆಗೆ ಅನುವು ಮಾಡಿ ಮಹಿಳೆಯರಲ್ಲಿ ವಿಶ್ವಾಸ ಹೆಚ್ಚಿಸಿ ಯಶಸ್ಸಿನತ್ತ ನಡೆಯಲು ಕಾರಣವಾಯ್ತು. ತನ್ನ ಮೇಲಿನ ಅನ್ಯಾಯಗಳ ವಿರುದ್ಧ ಜಾಗೃತವಾಗಲು ಹಾಗೂ ಈ ಕ್ಷೇತ್ರದಲ್ಲಿ ಹೆಚ್ಚಾಗಿ ಕೃಷಿ ಕೂಲಿಕಾರರು ಇರುವುದರಿಂದ 'ಸ್ವ-ಶಕ್ತಿ' ಯೋಜನೆಯಲ್ಲಿರುವ ಸ್ವ-ಸಹಾಯ ಸಂಘಗಳು ಮಹಿಳೆಯರಿಗೆ ಅದರಲ್ಲಿಯೂ ಬುಡಕಟ್ಟು ಮಹಿಳೆಯರಿಗೆ ಮತ್ತು ಆರ್ಥಿಕವಾಗಿ ತೀರಾ ಹಿಂದುಳಿದ ಮಹಿಳೆಯರಿಗೆ ಒಂದು ವೇದಿಕೆ ಕಲ್ಪಿಸಿಕೊಟ್ಟಿದ್ದು ಮಹತ್ತರ ಸಂಗತಿ.

ಈ ಸ್ವ-ಸಹಾಯ ಗುಂಪುಗಳು ಮಹಿಳೆಯರ ವಿಶ್ವಾಸನೀಯ ವ್ಯವಹಾರದ ಬಗ್ಗೆ ಮೆಚ್ಚಿಗೆ ವ್ಯಕ್ತವಾಗಿದೆ. ಬ್ಯಾಂಕ್ ಅಧಿಕಾರಿಗಳ ಪ್ರಕಾರ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯಲ್ಲಿ ಸಂಘಗಳ ಗಣನೀಯ ಪಾತ್ರ ಗುರುತಿಸುವಂತಹದು. ಮಹಿಳೆಯರ ಅದರಲ್ಲಿಯೂ ಹಿಂದುಳಿದ ಮಹಿಳೆಯರ ಜವಾಬ್ದಾರಿಯುತ ನಡುವಳಿಕೆ ಮತ್ತು ದುಡಿಮೆಯಲ್ಲಿ ಹೊಸ ಹೊಸ ಹುಡುಕಾಟ, ಆಶ್ಚರ್ಯ ಉಂಟುಮಾಡುವಂತಹದು. ಅವರ ಸಭೆಗಳ ನಡಾವಳಿ, ದಾಖಲಾತಿ ಭಾಗವಹಿಸುವಿಕೆ, ನಿಯಮಗಳ ನಿರ್ಧಾರ ಪಾಲಿಸುವಿಕೆ ತಪ್ಪಿದರೆ ಕೊಡಬೇಕಾದ ಶಿಕ್ಷರೂಪದ ಜಲ್ಮಾನೆ ಮುಂತಾದ ಕಟ್ಟುನಿಟ್ಟಿನ ವ್ಯವಹಾರದಿಂದ ಸ್ವ-ಸಹಾಯ ಸಂಘಗಳು ತಮ್ಮ ವಿಶ್ವಾಸಾರ್ಹತೆಯನ್ನು ಹೆಚ್ಚಿಸಿಕೊಂಡಿವೆ.

ಮಹಿಳೆಯರನ್ನು ಸಶಕ್ತಗೊಳಿಸುವಿಕೆಯಲ್ಲಿ ಸ್ವ-ಸಹಾಯ ಗುಂಪುಗಳು

ಸ್ವ-ಸಹಾಯ ಗುಂಪುಗಳು ಗ್ರಾಮೀಣ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ. ಗ್ರಾಮೀಣ ಪ್ರದೇಶಗಳಲ್ಲಿ ವಾಸವಾಗಿರುವ ಬಡ ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗಾಗಿ

ಗುಂಪುಗಳು ರಚನೆಗೊಂಡು ರಚನಾತ್ಮಕ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿವೆ. ಆರ್ಥಿಕ ಅಭಿವೃದ್ಧಿಗೆ ಪೂರಕವಾಗುವಂತೆ ಅನೇಕ ಪ್ರಗತಿಪರ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಹಂತ ಹಂತವಾಗಿ ಯಶಸ್ವಿಯಾಗಿ ಅನುಷ್ಠಾನಗೊಳಿಸುತ್ತಾ ಬಂದಿವೆ. ಕೆಲವು ಸಾಮುದಾಯಿಕ ಧ್ಯೇಯಗಳನ್ನು ಹೊಂದಲು ಜನರು ಸ್ವಯಂ ಪ್ರೇರಿತರಾಗಿ ರಚಿಸಿದಂತಹ ಸಂಘಟನೆಗಳಲ್ಲಿರುವ ಸಂಘಗಳೇ "ಸ್ವ-ಸಹಾಯ ಗುಂಪುಗಳು", ಗ್ರಾಮೀಣ ಆಭಿವೃದ್ಧಿಯ ಹಿನ್ನೆಲೆಯಲ್ಲಿ ಇಂತಹ ಸಂಘಟನೆಗಳಲ್ಲಿ ಒಂದೇ ರೀತಿಯ ಮನೋಭಾವನೆ ಹೊಂದಿರುವ ಬಡ ಜನರು ತಮ್ಮ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗಾಗಿ ನಿರ್ಧಿಷ್ಟ ಗುರಿ ಹಾಗೂ ಉದ್ದೇಶಗಳನ್ನಿಟ್ಟುಕೊಂಡು ವ್ಯವಸ್ಥಿತ ರೀತಿಯಲ್ಲಿ ನಡೆಸುತ್ತಾರೆ".[೨]

ಇವರು ತಮ್ಮ ಅವಶ್ಯಕತೆಗಳಿಗೆ ಸಂಬಂಧಿಸಿದಂತೆ ಸಾಲವನ್ನು ಅನಿವಾರ್ಯವಾಗಿ ಪಡೆಯಬೇಕಾದ ಸಂದರ್ಭಗಳಲ್ಲಿ ಲೇವಾ ದೇವಿದಾರರು, ಸ್ನೇಹಿತರು, ಸಂಬಂಧಿಕರು, ಬ್ಯಾಂಕುಗಳಿಂದ ಹೆಚ್ಚಿನ ಬಡ್ಡಿಯ ದರದಲ್ಲಿ ಪಡೆಯುತ್ತಾರೆ. ಆದರೆ ಸ್ವ ಸಹಾಯ ಗುಂಪುಗಳಲ್ಲಿ ಇಂತಹ ಸಾಲವನ್ನು ಬಡವರಿಗೆ ಅನೌಪಚಾರಿಕ ರೀತಿಯಲ್ಲಿ ಕಡಿಮೆ ಬಡ್ಡಿದರದಲ್ಲಿ ಕೊಡಲಾಗುತ್ತದೆ. ಈ ವಿಧಾನವು ಔಪಚಾರಿಕ ಆರ್ಥಿಕ ನೆರವಿನ ಪೂರಕ ವ್ಯವಸ್ಥೆಯೆನ್ನಬಹುದು. ಇಂತಹ ಗುಂಪುಗಳು ಜನಪ್ರಿಯವಾಗಿದ್ದು ಇದಕ್ಕೆ ಇದರ ಸರಳತನ, ಕಡಿಮೆ ವೆಚ್ಚದ ನಿರ್ವಹಣೆ ಹಾಗೂ ಹೇಗೆಂದರೆ ಹಾಗೆ ಹೊಂದಿಕೊಳ್ಳುವ ಗುಣಗಳೇ ಕಾರಣವೆನ್ನಬಹುದು. ಮಹಿಳೆಯರು ಸಶಕ್ತರಾಗಲು ಇಂತಹ ಸಂಘಟನೆಗಳು ಸರ್ವತಂತ್ರವೆನ್ನಬಹುದು.

ಒಬ್ಬ ಮಹಿಳೆ ತನ್ನ ಅಭಿವೃದ್ಧಿಯ ಹಿತದೃಷ್ಟಿಯಿಂದ ವೈಯಕ್ತಿಕವಾಗಿ ಮುಂದುವರೆಯಲು ಕಷ್ಟಕರವೆನಿಸಬಹುದು. ಆದರೆ ಮಹಿಳಾ ಸಂಘಟನೆಗಳು ಇಂತಹ ಬದಲಾವಣೆಯನ್ನು ಹೆಣ್ಣಿನಿಂದ ಕೇಳಿದಾಗ ಸಮುದಾಯಕ್ಕೆ ತಿರಸ್ಕರಿಸಲು ಕಷ್ಟವಾಗಬಹುದು. ವೈಯಕ್ತಿಕವಾಗಿ ಬಡ ಗ್ರಾಮೀಣ ಮಹಿಳೆಯರು ದುರ್ಬಲತೆಯನ್ನು ಗೆಲ್ಲಲು ಸಾಧ್ಯವಾಗುವುದಿಲ್ಲ. ಆದರೆ ಮಹಿಳೆಯರು ಸಂಘಟನೆಯ ಮೂಲಕ ಹಾಗೂ ಸಾಮೂಹಿಕವಾಗಿ ದುರ್ಬಲತೆಯನ್ನು ಗೆಲ್ಲಲು ಸಾಧ್ಯ. ಅಂದರೆ ಮಹಿಳೆಯರು ತನ್ನ ಬಲಹೀನತೆ ಭಾವನೆಯಿಂದ ಬಲಿಷ್ಠರೆಂಬ ಭಾವನೆಗೆ ಬದಲಾವಣೆ ಹೊಂದಿರಲು ಕಾರಣವಾಗಿದೆ.

ಮಹಿಳೆಯರ ಸಶಕ್ತೀಕರಣ

ಮಹಿಳೆಯರ ಸಶಕ್ತಿಕರಣವು ಜಾಗೃತ ಅಥವಾ ಮಹಿಳೆಯರ ಒಗ್ಗೂಡುವಿಕೆಯ ಮೂಲಕ ಆಗಬೇಕಾಗಿರುವ ಒಂದು ಪ್ರಕ್ರಿಯೆಯಾಗಿದೆ. ಸರ್ಕಾರದ ಯೋಜನೆಗಳು ಮಧ್ಯ ಪ್ರವೇಶಿಸುವಿಕೆಯಿಂದಾಗಿ ಅಸಂಘಟಿತ ಮಹಿಳೆಯರ ಸಮುದಾಯದಲ್ಲಿ ಉಂಟಾದ ಮನೋವಿಕಾಸವು ಅವರನ್ನು ಸಂಘಟಿತರನ್ನಾಗಿ ಪರಿವರ್ತಿಸಲು ಬಹಳ ಸಹಕಾರಿಯಾಯಿತು. ಒಂದು ಕಾಲದಲ್ಲಿ ರಾಜಕೀಯ ಪಕ್ಷಗಳು ಎಡ

ಪಂಥಿಯ ಅಥವಾ ಬಲ ಪಂಥಿಯ ವಿಚಾರಧಾರೆ ಇರಲಿ ಮೂಲತಃ ಇವರ ಸಂಘಟನೆಗಳ ವಿರೋಧವಾಗಿದ್ದು ಅವರನ್ನು ಮತದಾರರನ್ನಾಗಿ ಮಾತ್ರ ಪರಿಗಣಿಸಿ ಅವರ ನೋವುಗಳಿಗೆ ತಮ್ಮ ಸೀಮಿತವಾದ ಪ್ರತಿಕ್ರಿಯೆಗಳನ್ನು ತೋರಿಸುತ್ತಾ ಬಂದಿದೆ.

ನಂತರ ಬೆಳವಣಿಗೆಯ ದಶಕದಲ್ಲಿ ಸ್ವ-ಶಕ್ತಿ ಯೋಜನೆಯು ಮಹಿಳೆಯರನ್ನು ಅದರಲ್ಲೂ ಹಿಂದುಳಿದ ಗ್ರಾಮೀಣ ಪ್ರದೇಶದ ಬುಡಕಟ್ಟು ಮಹಿಳೆಯರನ್ನು ಸಶಕ್ತೀಕರಿಸದೆ ಸಶಕ್ತೀಕರಣ ಎನ್ನುವುದು ಹಲವಾರು ಯೋಜನೆಗಳ ಪ್ರಯತ್ನದಿಂದ ಬಡವರು ಹಾಗೂ ಸಾಮಾಜಿಕವಾಗಿ ಶೋಷಿತ ವರ್ಗದವರು ಒಗ್ಗೂಡಿ ಸಂಘಟನೆಗಳ ರೂಪದಲ್ಲಿ ತಮ್ಮ ಹಕ್ಕುಗಳ ರಕ್ಷಣೆ ಮಾಡುವುದು ಮಹಿಳೆಯರ ಸಶಕ್ತೀಕರಣಕ್ಕೆ ಒಂದು ಮಾದರಿಯಾಗಿದೆ. ಮಹಿಳೆಯರನ್ನು ಕುರಿತಾದ ಯಾವುದೇ ಕಾರ್ಯಕ್ರಮ ಅವರ ಸಶಕ್ತೀಕರಣಕ್ಕೆ ಕುರಿತು ಹೇಳುತ್ತದೆ.

ಮಹಿಳೆಯರ ಸಶಕ್ತೀಕರಣವನ್ನು ಕುರಿತು ಒಂದು ವ್ಯಾಖ್ಯೆ ಹೇಳುತ್ತದೆ. "ಪ್ರಸ್ತುತ ಇರುವ ಶಕ್ತಿ ಸಂಬಂಧಗಳನ್ನು ಪ್ರಶ್ನಿಸುವ ಮತ್ತು ಶಕ್ತಿಯ ಸಂಪನ್ಮೂಲಗಳು ಮೇಲೆ ಹೆಚ್ಚಿನ ನಿಯಂತ್ರಣಗಳಿಸಿಕೊಳ್ಳುವ ಹಾಗೂ ಬಡ ಮಹಿಳೆಯರು ಸಾಮಗ್ರಿ ಮತ್ತು ಶತಮಾನಗಳಿಂದ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಶೋಷಣೆಗೊಳಗಾಗಿ ಸಮಾಜದ ಸಂಪನ್ಮೂಲಗಳನ್ನು ತಮ್ಮ ಬೆಳವಣಿಗೆಗೆ ಬಳಸಿಕೊಳ್ಳಲು ಅವಕಾಶ ಪಡೆದು ನಿಯಂತ್ರಣ ಹೊಂದಲು ಸಾಧ್ಯವಾಗಿಸುವ ಪ್ರಕ್ರಿಯೆಗೆ ಸಶಕ್ತೀಕರಣ ಎಂದು ಹೇಳಬಹುದು. ಸ್ವ-ಶಕ್ತಿ ಯೋಜನೆಯ ಮೂಲಕ ಸಂಘಟಿತರಾದಂತಹ ಬುಡಕಟ್ಟು ಮಹಿಳೆಯರಿಗೆ ತಮ್ಮ ಅಭಿವೃದ್ಧಿ ಕಾರ್ಯಗಳನ್ನು ತಾವೇ ಆಲೋಚಿಸಿ, ಅನುಷ್ಠಾನಗೊಳಿಸುವುದು ಮತ್ತು ಅದರ ಮೇಲ್ವಿಚಾರಣೆಯನ್ನು ಸಹ ನೋಡಿಕೊಳ್ಳುವುದು, ಇದರ ಕರ್ತವ್ಯವಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಸಂಘಗಳನ್ನು ಕಟ್ಟಿಕೊಳ್ಳುವುದಕ್ಕೆ ಮುಂಚಿನ ದಿನಗಳಲ್ಲಿ ಬುಡಕಟ್ಟು ಮಹಿಳೆಯರು ಅದರಲ್ಲಿ ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ಪರಿಜ್ಞಾನವಿಲ್ಲದೆ ಬಹಳ ಮೂಢತನದಿಂದ ಕೂಡಿದ್ದರು ಇವರಲ್ಲಿ ಬಹಳ ಜನ ಅನಕ್ಷರಸ್ಥರಾಗಿದ್ದರಿಂದ ಅನೇಕರಿಗೆ ಹೊರ ಜಗತ್ತಿನ ಸಂಪರ್ಕವಿದ್ದಿಲ್ಲ. ಅನೇಕ ಮಹಿಳೆಯರು ಮಾತಾಡಲು, ಸ್ವತಂತ್ರವಾಗಿ ಚಿಂತಿಸಲು, ಸಮಸ್ಯೆ ವಿಶ್ಲೇಷಿಸಲು ಮತ್ತು ನಿರ್ಣಯ ಕೈಗೊಳ್ಳಲು ಸಂಕೋಚಪಡುತ್ತಿದ್ದರು. ತಮ್ಮ ಬದುಕನ್ನು ತಾವೇ ನಡೆಸುವ ಸ್ಥಿತಿಯಲ್ಲಿರಲಿಲ್ಲ. ಇವರಿಗೆ ಸ್ವತಂತ್ರ ಅಭಿಪ್ರಾಯಗಳನ್ನು ಹೊಂದಲು ಸಹ ಅವಕಾಶವಿರಲಿಲ್ಲ. ಇವರು ಹೆಚ್ಚಾಗಿ ಪುರುಷ ವರ್ಗವನ್ನು ಅವಲಂಬಿಸಿದ್ದರು ಸಾಮಾನ್ಯವಾಗಿ ಮಹಿಳೆಯರು ಶಕ್ತಿಹೀನರು ಆಗಿದ್ದರು ಎಂಬುದು ತಿಳಿದು ಬರುತ್ತದೆ.

ಆದರೆ ಕಾಲಾನುಕ್ರಮದಲ್ಲಿ ಮಹಿಳೆಯರು ಸ್ವ ಸಹಾಯ ಸಂಘಗಳನ್ನು ರಚಿಸಿಕೊಂಡು ತಮ್ಮ

ತಿಳುವಳಿಕೆಯನ್ನು ಪಡೆದು ಜ್ಞಾನವನ್ನು ಇತರ ಜಗತ್ತಿನ ಜೊತೆ ಸಂಪರ್ಕವನ್ನು ಕಲ್ಪಿಸಿಕೊಂಡಿರುವುದು ಕಂಡುಬರುತ್ತದೆ. ಅನೇಕ ಮಹಿಳೆಯರು ಮಾತನಾಡಲು ಹಿಂಜರಿಯುತ್ತಿದ್ದವರು ಈಗ ಬಹಳ ಸ್ವತಂತ್ರವಾಗಿ, ಇತರೆ ಕಛೇರಿಗಳಲ್ಲಿ, ಬ್ಯಾಂಕುಗಳಲ್ಲಿ ಚರ್ಚಿಸುವಂತೆ ಆಗಿದ್ದಾರೆ. ನಂತರ ಯಾರಾದರೂ ಅಧಿಕಾರಿಗಳ ಜೊತೆ ಮಾತನಾಡಲು ಬಹಳ ಸಂಕೋಚಪಡುತ್ತಿದ್ದವರು ಈಗ ಎಂತಹ ಅಧಿಕಾರಿಗಳು ಇರಲಿ ಅವರ ಜೊತೆ ಕೂಲಂಕುಷವಾಗಿ ಚರ್ಚಿಸಿ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವಲ್ಲಿ ಸಫಲರಾಗಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮಾಹಿತಿದಾರರಿಂದ ತಿಳಿದುಕೊಳ್ಳಲಾಗಿದೆ.

ಮಹಿಳೆಯರ ಸಶಕ್ತೀಕರಣ ಪ್ರಕ್ರಿಯೆ ಅನೇಕ ಅಂಶಗಳನ್ನು ನಿಭಾಯಿಸಬೇಕಾಗುತ್ತದೆ. ಮಹಿಳೆಯರ ಸಶಕ್ತೀಕರಣ ಯಾವುದೇ ಕ್ಷೇತ್ರದಲ್ಲಾಗಬಹುದು ಕಾನೂನು, ಸಾಮಾಜಿಕ, ಆರ್ಥಿಕ ಅಥವಾ ರಾಜಕೀಯ ಮಹಿಳೆಯರ ಆರ್ಥಿಕ ಸಶಕ್ತೀಕರಣವು ಒಟ್ಟಾರೆ ಸಶಕ್ತೀಕರಣ ಸಾಧಿಸುವ ಮಾರ್ಗವೆಂದು ಪರಿಗಣಿಸಲಾಗುತ್ತದೆ. ಮಹಿಳೆಯರ ಸ್ವತಂತ್ರ ಆದಾಯ ಮತ್ತು ಕುಟುಂಬದ ಸಂಪನ್ಮೂಲಗಳ ಮೇಲಿನ ನಿಯಂತ್ರಣ ಹಾಗೂ ಅವರ ಕುಟುಂಬದಲ್ಲಿನ ಸ್ಥಾನಗಳ ನಡುವೆ ಬಲವಾದ ಕೊಂಡಿ ಇದೆ. ಮಹಿಳೆಯರಿಗೆ ಆದಾಯ ಉತ್ಪನ್ನ ಚಟುವಟಿಕೆಗಳಾಗಿ ಸಾಲ ನೀಡಿದಲ್ಲಿ ಅವರ ಆದಾಯ ಹೆಚ್ಚುತ್ತದೆ. ಇದರಿಂದ ಇವರು ಹಣ ಸಂಪಾದನೆಯಲ್ಲಿ ತೊಡಗಿಕೊಂಡಿರುವುದರಿಂದ ಸ್ಥಾನ ಕೂಡಾ ಸುಧಾರಿಸಿದೆ ಎಂದು ಹೇಳಬಹುದು.

ಈ ಸ್ವ ಸಂಘಗಳು ಮಹಿಳೆಯರಿಗೆ ಸಾಲ ಮತ್ತು ಉಳಿತಾಯ ಸೌಕರ್ಯ ಕಲ್ಪಿಸಿಕೊಡುವುದರಿಂದ ಮಹಿಳೆಯರ ಆದಾಯದ ಮಟ್ಟ ಸುಧಾರಿಸಿ ಆದಾಯದ ಮೇಲಿನ ನಿಯಂತ್ರಣ ಹೆಚ್ಚಾಗಿ ಅವರು ಆರ್ಥಿಕವಾಗಿ ಸ್ವತಂತ್ರರಾಗಿರುವುದು ಕಂಡುಬರುತ್ತದೆ. ಆಧುನಿಕ ಸಮಾಜದಲ್ಲಿ ಮಹಿಳೆಯರಿಗೆ ಹೊರ ಜಗತ್ತಿನ ಅನುಭವ ಒದಗಿ ಇವರು ಹೊರ ಮಾರುಕಟ್ಟೆಗೆ ಅವಕಾಶ ಸಿಕ್ಕಿರುವುದು ಸಂತೋಷದ ಸಂಗತಿ. ಮನೆಯ ಆದಾಯಕ್ಕೆ ಮತ್ತು ಕುಟುಂಬ ಮತ್ತು ಕುಟುಂಬ ಕಲ್ಯಾಣಕ್ಕೆ ಮಹಿಳೆಯರ ಕೊಡುಗೆ ಹಾಗೂ ಮನೆಯಲ್ಲಿ ನಿರ್ಣಯಗಳಲ್ಲಿ ಭಾಗವಹಿಸುವುದರಿಂದ, ವಿಶೇಷವಾಗಿ ಹಣದ ಖರ್ಚಿನಲ್ಲಿ ಈ ಮಹಿಳೆಯರು ತೊಡಗಿಕೊಂಡು ನಿಭಾಯಿಸಿಕೊಂಡು ಹೋಗುವುದರಿಂದ ಇವರ ಸಾಮರ್ಥ್ಯ ಮೆಚ್ಚಿಕೊಳ್ಳುವಂತಹ ಕಾರ್ಯವಾಗಿದೆ.

ಮಹಿಳೆಯರ ಸಶಕ್ತೀಕರಣವೆನ್ನುವುದು ಸತತವಾದುದ್ದು ಆದರೆ ನಿಧಾನ ಪ್ರಕ್ರಿಯೆ. ಸಶಕ್ತೀಕರಣ ಪ್ರಕ್ರಿಯೆಯಲ್ಲಿ ತೊಡಗಿದ ಸರ್ಕಾರಿ ಅಧಿಕಾರಿಗಳು, ಸರ್ಕಾರಿ ಯೋಜನೆಗಳು ಹಾಗೂ ಸ್ವಯಂ ಸೇವಾ ಸಂಸ್ಥೆಗಳು ಅದಕ್ಕೆ ಅನುಗುಣವಾಗಿ ಪ್ರೋತ್ಸಾಹಿಸುತ್ತಿರುವುದು ಕಂಡು ಬರುತ್ತದೆ. ಅನೇಕ ಸಂಸ್ಥೆಗಳು ಮಹಿಳೆಯರಿಗಾಗಿಯೇ ಯೋಜನೆಗಳನ್ನು ಹೊಂದಿವೆ. ಈ ಯೋಜನೆಗಳು ಮಹಿಳೆಯರು ಉತ್ತಮ ಮಹಿಳಾ ಸ್ವ-ಸಹಾಯ ಸಂಘಗಳನ್ನು ರಚಿಸಲು ಪ್ರೇರಣೆ ನೀಡುತ್ತವೆ. ಕೆಲವೊಂದು ಕಡೆ ಮಹಿಳೆಯರು

ಸಶಕ್ತರಾಗಿರುವುದರಿಂದ ತಮ್ಮ ಸ್ವ-ಸಹಾಯ ಗುಂಪುಗಳನ್ನು ಯಾರ ಸಹಾಯವಿಲ್ಲದೆ ನಡೆಸುವಷ್ಟು ಸಾಮರ್ಥ್ಯವಾಗಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಇಂತಹ ಕೆಲವು ಸ್ವ-ಸಹಾಯ ಸಂಘಗಳು ಕಂಡು ಬಂದವು.

ಪ್ರಸಕ್ತ ಆಧುನಿಕ ಸಮಾಜದಲ್ಲಿ ಮಹಿಳೆಯರು ಅದರಲ್ಲಿ ಬುಡಕಟ್ಟು ಮತ್ತು ಇತರ ಹಿಂದುಳಿದ ಮಹಿಳೆಯರು ತಮ್ಮ ಬದುಕನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಒಳ್ಳೆಯ ಫಲಿತಾಂಶ ಸಾಧಿಸಲು ಪ್ರಯತ್ನ ಪಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಸ್ವ-ಶಕ್ತಿ ಯೋಜನೆಯು ಸಣ್ಣ ಸಣ್ಣ ಗುಂಪುಗಳನ್ನು ಗ್ರಾಮೀಣ ಪ್ರದೇಶದಲ್ಲಿ ಒಟ್ಟು ಗೂಡಿಸಿ ಮಹಿಳೆಯರಿಗೆ ಸಂಕುಚಿತ ಬಲವನ್ನು ನೀಡಿದೆ. ಈ ಹಿನ್ನೆಲೆಯಲ್ಲಿ ಸಶಕ್ತೀಕರಣದ ಮೂಲಕ ಮಹಿಳೆಯರು ಆಂತರಿಕ ಶಕ್ತಿಯ ಭಾವನೆ ಮತ್ತು ಬದುಕು ಎದುರಿಸುವ ಆತ್ಮ ವಿಶ್ವಾಸ ನಿರ್ಣಯ ಕೈಗೊಳ್ಳುವುದು. ಈ ಆತ್ಮ ವಿಶ್ವಾಸವು ಮಹಿಳೆಯರ ಮುಖದ ಮೇಲಿನ ನಗುವೇ ಸ್ವ-ಶಕ್ತಿಯ ಪರಮ ಮಾನದಂಡ.

ಸ್ವ ಸಹಾಯ ಸಂಘಗಳಲ್ಲಿ ಮಹಿಳೆಯರ ಸಹಭಾಗಿತ್ವದ ಮಹತ್ವ

ಗ್ರಾಮ ಅರಣ್ಯ ಸಮಿತಿಗಳಲ್ಲಾಗಲಿ, ಸ್ವ-ಸಹಾಯ ಸಂಘಗಳಲ್ಲಾಗಲಿ, ಜನ ಜಲಾಯನ ಸಮಿತಿಗಳಲ್ಲಾಗಲಿ, ಪಂಚಾಯಿತಿ ರಾಜ್ಯವ್ಯವಸ್ಥೆಯಲ್ಲಾಗಲಿ, ಸಮಾಜದ ಇತರೆ ಚರ್ಚೆ, ತರಬೇತಿಗಳಲ್ಲಾಗಲಿ, ಸಮಾವೇಶಗಳಲ್ಲಾಗಲಿ ಏಕೆ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಬೇಕು ಎಂಬುದರ ಬಗ್ಗೆ ವಿಶ್ಲೇಷಿಸಿ ನೋಡಿದಾಗ, ಸ್ವ-ಶಕ್ತಿ ಯೋಜನೆಯಲ್ಲಿ ಅತಿ ಬಡ ಮಹಿಳೆಯರನ್ನು, ಹಿಂದುಳಿದ ಬುಡಕಟ್ಟು ಅನಕ್ಷರಸ್ಥ ಮಹಿಳೆಯರನ್ನು ಸಬಲರನ್ನಾಗಿ ಮಾಡುವುದು, ಲಿಂಗತ್ವದ ಬಗ್ಗೆ ಅರಿವು ಮೂಡಿಸುವುದು, ಮಹಿಳೆಯರ ಮೇಲೆ ಆಗುವ ದೌರ್ಜನ್ಯ, ಅನ್ಯಾಯಗಳನ್ನು ಹತ್ತಿಕ್ಕುವುದು ಎಲ್ಲವೂ ಆಧ್ಯತೆ ಹೊಂದಿದೆ.

ಆದುದರಿಂದ ಇಂತಹ ಕಷ್ಟ ಕಾರ್ಪಣ್ಯಗಳಿಂದ ನರಳುವ ಮಹಿಳೆಯರಲ್ಲಿ ಅಡಗಿರುವ ಕೆಲವು ಶಕ್ತಿ ಸಾಮರ್ಥ್ಯಗಳನ್ನು ಗುರುತಿಸಿ, ಅವುಗಳನ್ನು ಬೆಳಕಿಗೆ ತರುವುದರೊಂದಿಗೆ ಸೂಕ್ತ ಪ್ರೋತ್ಸಾಹ, ಉತ್ತೇಜನ ನೀಡಲು ಪ್ರತಿ ಮಹಿಳಾ ಸ್ವ-ಸಹಾಯ ಸಂಘಗಳು ಪ್ರಮುಖ ಪಾತ್ರ ನಿರ್ವಹಿಸುತ್ತವೆ. ಈ ನಿಟ್ಟಿನಲ್ಲಿ "ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ" ಬೆಂಗಳೂರು, ಬಳ್ಳಾರಿ ಜಿಲ್ಲೆ ಇನ್ನು ಹಲವು ಜಿಲ್ಲೆಗಳಲ್ಲಿ ಸ್ವ-ಶಕ್ತಿ ಯೋಜನೆ ಇದ್ದು, ಅದರಲ್ಲಿ ಕೂಡ್ಲಿಗಿ ತಾಲೂಕಿನ ಸ್ವ-ಶಕ್ತಿ ಯೋಜನೆಯಡಿಯಲ್ಲಿ ಮಹಿಳೆಯರ ಸಬಲೀಕರಣಕ್ಕೆ ಪ್ರಾತಿನಿಧ್ಯ ನೀಡುತ್ತಾ ಲಿಂಗತ್ವ, ಆರ್ಥಿಕ ಅಭಿವೃದ್ಧಿ, ಸಮಾಜದಲ್ಲಿ ಸಮಾನತೆ, ಶಿಕ್ಷಣದಲ್ಲಿ ಏಳಿಗೆ, ಆರೋಗ್ಯದಲ್ಲಿ ಮುನ್ನಡೆ, ಸಾಂಸ್ಕೃತಿಕ ವಿಚಾರದಲ್ಲಿ ಪರಸ್ಪರ ವಿನಿಮಯ ಹಾಗೂ ಗೌರವಿಸುವಿಕೆ ಇವೆಲ್ಲವೂ ಪವಿತ್ರ ಅಭಿವೃದ್ಧಿಯ ಸಂಕೇತವೆಂದು ನಂಬಲಾಗಿದೆ. ಮಹಿಳೆಯರು ಎಲ್ಲಾ ಕಾರ್ಯಕ್ರಮಗಳಲ್ಲೂ ಸಾಮೂಹಿಕವಾಗಿ

ಭಾಗವಹಿಸಲು ಅಭ್ಯಾಸ ಮಾಡಿಕೊಂಡಿರುತ್ತಾರೆ. ಇವರು ಈ ಸ್ವ-ಸಂಘಗಳನ್ನು ಕಟ್ಟಿಕೊಂಡಿರುವುದರಿಂದ ಬೇರೆ ಊರುಗಳಿಗೆ ತರಬೇತಿ ಪಡೆಯಲು ಮತ್ತು ಹಲವು ಕಾರ್ಯಕ್ರಮಗಳಲ್ಲಿ ರಾಜಕೀಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಈ ಯೋಜನೆಯ ಕಾರ್ಯಕರ್ತರು ಹಾಗೂ ಸ್ವಯಂ ಸೇವಾ ಸಂಸ್ಥೆಯ ಸಂಯೋಜಕರು ಪ್ರೇರೇಪಿಸುತ್ತಾರೆ. ಹಾಗೆಯೇ ಇವರಿಗೆ ಯಾರೂ ಜೊತೆ ಇಲ್ಲದಿದ್ದರು ಒಬ್ಬರು ಅಥವಾ ಇಬ್ಬರು ಕೂಡಿ ಕಾರ್ಯಕ್ರಮಗಳಿಗೆ ಭಾಗವಹಿಸುತ್ತಾರೆ.

ಈ ವಿಚಾರಗಳನ್ನು ಕ್ಷೇತ್ರಕಾರ್ಯಕ್ಕೆ ಹೋಗಿರುವ ಸಂದರ್ಭದಲ್ಲಿ ಮಾಹಿತಿದಾರರಿಂದ ಬಂದ ವಿಷಯವಾಗಿದೆ.ಇವುಗಳನ್ನು ನಾವು ಸೂಕ್ಷ್ಮವಾಗಿ ನೋಡಿದರೆ ಈ ಗ್ರಾಮೀಣ ಪ್ರದೇಶದ ಹಿಂದುಳಿದ ಮಹಿಳೆಯರಲ್ಲಿ ಉಳಿತಾಯದ ಬಗ್ಗೆ, ಕಷ್ಟ ಕಾರ್ಪಣ್ಯಗಳನ್ನು ಎದುರಿಸುವ ಅನುಭವ ಮತ್ತು ನೈಪುಣ್ಯತೆ, ಮುಂದಾಲೋಚನೆ ಸ್ವಭಾವ, ಇತರರಿಗೆ ಮತ್ತು ಸಮಾಜಕ್ಕೆ ಕೈಲಾದಷ್ಟು ಸಹಕರಿಸುವ ಪ್ರವೃತ್ತಿ, ಶ್ರಮಪಡುವ ವಿಶೇಷತೆ, ವಿಶಾಲಗುಣ, ಸ್ವ-ಪ್ರಯತ್ನ ಮಾಡುವ ಛಲ, ದುಂದು ವೆಚ್ಚ ಮಾಡದೆ ಮುಂದಾಲೋಚನೆಯಿಂದ ಉಳಿತಾಯ ಮಾಡುವುದು. 'ಮಾತಿಗಿಂತ ಕೃತಿ ಲೇಸು' ಎಂಬ ಕಾರ್ಯ ಸಾಧನೆ ಪ್ರವೃತ್ತಿಗಳು, ಮಕ್ಕಳ ಭವಿಷ್ಯದ ಬಗ್ಗೆ ಮತ್ತು ಕುಟುಂಬ ಅಭಿವೃದ್ಧಿ ಹೊಂದಬೇಕೆಂಬ ಕಾಳಜಿ, ನೆಮ್ಮದಿಯ ಬದುಕಿನ ಕಡೆಗೆ ಒಲವು, ಕಾಯಕವೇ ಕೈಲಾಸ, ಎಂಬುದರ ಬಗ್ಗೆ ನಂಬಿಕೆ, ನಿಸ್ವಾರ್ತ ಸೇವೆಯಲ್ಲಿ ವಿಶ್ವಾಸ, ಆ ದಿನದ ಕಾರ್ಯ ಅಂದೇ ಮಾಡಿ ಮುಗಿಸುವ ತತ್ವ ಮತ್ತು ಕಾನೂನಿನ ಹಾಗೂ ಸ್ವ ನಿಯಂತ್ರಣಾ ಚತುರತೆ, ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಮಾಜದ ವಿರೋಧ ಹೋಗಲು ಹೆದರಿಕೆ ಹಾಗೂ ವಿವೇಕದ ಚಿಂತನೆಗಳು ಮಾಡುತ್ತಿರುವುದು ಕಂಡು ಬರುತ್ತದೆ.

ಪ್ರಸ್ತುತ ಸಮಾಜದಲ್ಲಿ ಒಳ್ಳೆಯ ಹೆಸರು ಗಳಿಸಿ ಬಾಳಬೇಕೆಂಬ ಉತ್ತಮ ಆಸೆ ಇತ್ಯಾದಿಗಳನ್ನು ಜಾಗೃತೆಯಿಂದ ನೆರವೇರಿಸಿಕೊಂಡು ಭೂಮಿಯಲ್ಲಿ ಜೀವಿಸುವ ದಿನನಿತ್ಯದಲ್ಲಿ ಅಧಿಕ ಸಮಯದಲ್ಲಿ ದುಡಿಯುವ ಜೀವಿಗಳಾಗಿ ಮಹಿಳೆಯರು ತಮ್ಮ ಜೀವನ ಸಾಗಿಸುತ್ತಿದ್ದಾರೆ. ಇಂತಹ ಕಾರ್ಯಗಳಲ್ಲಿ ತೊಡಗಿರುವ ಗ್ರಾಮೀಣ ಪ್ರದೇಶದ ಹಿಂದುಳಿದ ಮಹಿಳೆಯರ ಸಹಭಾಗಿತ್ವದಿಂದ ಕೆಲವು ಕುಟುಂಬಗಳಲ್ಲಿ ಕೆಲವು ಸಂಘಗಳು ಆರ್ಥಿಕ ಚಟುವಟಿಕೆಗಳಲ್ಲಿ ಎಷ್ಟು ಅನುಕೂಲಕರವಾಗಿದ್ದಾರೆ ಎಂದರೆ ಈ ಸ್ವ-ಸಹಾಯ ಸಂಘಗಳನ್ನು ನೋಡಿದ ಮೇಲೆ ನಿಜಾಂಶ ತಿಳಿಯುತ್ತದೆ. ಅಧ್ಯಯನದ ವ್ಯಾಪ್ತಿಯಲ್ಲಿರುವ ಇನ್ನು ಕೆಲವು ಸಂಘಗಳ ಸದಸ್ಯರು ಅಭಿವೃದ್ಧಿಯ ನಿಟ್ಟಿನಲ್ಲಿರುವುದು ಕಂಡು ಬರುತ್ತದೆ. "ಯಾವ ಕುಟುಂಬ ಅಥವಾ ಸಂಘಗಳಲ್ಲಿ ಎಲ್ಲಾ ಸದಸ್ಯರು ಪ್ರತಿ ವಿಚಾರಗಳಲ್ಲಿಯೂ ಚರ್ಚಿಸಿ, ತೀರ್ಮಾನಿಸಿ, ಕಾರ್ಯ ಪ್ರವೃತ್ತರಾಗುತ್ತಾರೋ ಅಂತಹ ಸದಸ್ಯರು ಕುಟುಂಬಗಳಲ್ಲಿ ಮತ್ತು ಸಂಘಗಳಲ್ಲಿ ಆಯಾ ಕ್ಷೇತ್ರಗಳಷ್ಟೇ ಅಲ್ಲ, ಎಲ್ಲಾ ಕ್ಷೇತ್ರಗಳಲ್ಲೂ ಯಶಸ್ಸು ಕಾಣಲು ಸಹಕಾರಿಯಾಗಿರುತ್ತಾರೆ. ನಂತರ ಮಹಿಳೆಯರ ಕುಟುಂಬಗಳಲ್ಲಿ ಸಂತೋಷ, ನಲಿವು, ಯಶಸ್ಸು, ಪ್ರೀತಿ, ವಿಶ್ವಾಸ ಮತ್ತು ನೆಮ್ಮದಿ

[illegible]

ತಾಂಡವಾಡುತ್ತಿರುತ್ತದೆ ಎಂದು ಹೇಳಿದರೆ ತಪ್ಪಾಗಲಾರದು. ಕೆಲವು ವಿಚಾರಗಳಲ್ಲಿ ಈ ಬುಡಕಟ್ಟು ಮಹಿಳೆಯರು ಮತ್ತು ಇತರೆ ಹಿಂದುಳಿದ ಮಹಿಳೆಯರು ಪುರುಷರಿಗಿಂತ ಚೆನ್ನಾಗಿ ಜವಾಬ್ದಾರಿಯುತ, ಕಾರ್ಯ ನಿರ್ವಹಿಸುವುದನ್ನು ನಮ್ಮ ಸುತ್ತಮುತ್ತಲ ಪ್ರದೇಶಗಳ ಸಂಘಗಳಲ್ಲಿರುವ ಮಹಿಳಾ ವರ್ಗವನ್ನು ನೋಡುತ್ತೇವೆ. ಈ ಮಹಿಳೆಯರು ಸಂಘದವತಿಯಿಂದ ಪಡೆದ ಸಾಲವನ್ನು ಅನಾವಶ್ಯಕವಾಗಿ ದುಂದು ವೆಚ್ಚ ಮಾಡದೆ ತಮ್ಮ ಜೀವನಾಭಿವೃದ್ಧಿಗೆ ಉಪಯೋಗಿಸುವುದು ಕಂಡುಬರುತ್ತದೆ. ಇವರು ಸಾಲವನ್ನು ಪಡೆದ ನಂತರ ಆ ಹಣಕ್ಕೆ ವ್ಯಾಪಾರ, ಕುರಿಸಾಕಾಣಿಕೆ, ಇನ್ನೂ ಮುಂತಾದವುಗಳನ್ನು ಖರೀದಿಸುತ್ತಾರೆ.

ಇವೆಲ್ಲಾ ಏಕೆ ಮಾಡುತ್ತಾರೆ ಅಂದರೆ ಕೊಟ್ಟ ಹಣಕ್ಕೆ ತಕ್ಕ ಪದಾರ್ಥಗಳನ್ನು ತರಬೇಕು, ಬೇಡವಾದ ಕೆಲಸಕ್ಕೆ ಬಾರದ ಪದಾರ್ಥಗಳನ್ನು ಖರೀದಿಸಬಾರದು. ಹಾಗೆಯೇ ಸಾಧ್ಯವಾದಷ್ಟು ಉಳಿತಾಯ ಮಾಡಿ ಇತರ ವರ್ಗದವರಿಗಿಂತ ಉತ್ತಮ ಬದುಕನ್ನು ಸಾಗಿಸಲು ಜವಾಬ್ದಾರಿಯುತ ಖರ್ಚನ್ನು ನಿಭಾಯಿಸಲು ಸಿದ್ಧತೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಿಕೊಳ್ಳುತ್ತಾರೆ. ಅಕಸ್ಮಾತ್ ಮನೆಯಲ್ಲಿ ಹಿರಿಯರು, ಗಂಡಂದಿರು ಇವರ ಬಗ್ಗೆ ತಪ್ಪು ಅಭಿಪ್ರಾಯಗಳನ್ನಿಟ್ಟುಕೊಂಡರೆ, ನಂತರ ಇವರನ್ನು ಸಂಘ ತ್ಯಜಿಸುವಂತೆ ಮಾಡುವ ಸನ್ನಿವೇಶಗಳು ಬಂದರೆ, ಅದನ್ನು ಉಪಾಯದಿಂದ ಮನೆಯವರನ್ನು ಸಮಾದಾನ ಪಡಿಸುವರು. ಯಾವುದೇ ಕಾರಣಕ್ಕೆ ಸಂಘವನ್ನು ತ್ಯಜಿಸುವುದಿಲ್ಲ ಹಾಗೂ ಹಣದ ಉಳಿತಾಯ ಮಾಡುವುದನ್ನು ತಪ್ಪಿಸುವುದಿಲ್ಲ. ಪ್ರತಿ ಮಹಿಳೆಯರು ಸಾಧ್ಯವಾದಷ್ಟು ಎಚ್ಚರದಿಂದ ಹಣದ ವಿನಿಯೋಗ ಮತ್ತು ನಿರ್ವಹಣೆಯನ್ನು ನೆರವೇರುಸುತ್ತಾರೆಂದು ಬಹಳ ಜನ ಮಹಿಳೆಯರು ಇಂತಹ ವಿಚಾರಗಳಲ್ಲಿ ಪುರುಷರಿಗಿಂತ ಉತ್ತಮ ತೀರ್ಮಾನ ಕೈಗೊಳ್ಳುತ್ತಾರೆಂಬುದನ್ನು ಒಪ್ಪಿಕೊಳ್ಳಬೇಕಾಗಿರುವ ನಿಜಾಂಶವಾಗಿದೆ. ಇಂಗ್ಲೀಷಿನಲ್ಲಿ ಒಂದು ಗಾದೆಯಂತೆ "ಹಣವನ್ನು ಸೇವಕರಾಗಿ ಮಾಡಿಕೊಂಡರೆ ಮಾತ್ರ ಉತ್ತಮ ಸೇವೆಯನ್ನು ಹಣವು ನೀಡುವುದು ಇಲ್ಲವಾದರೆ ನಾವು ಸಂಪಾದಿಸಿದ ಹಣವು ನಮ್ಮನ್ನೇ ಗುಲಾಮರಾಗಿ ಮಾಡಿಕೊಳ್ಳುತ್ತದೆ".

ಅಂದರೆ ಮಹಿಳೆಯರು ಹಣದ ನಿರ್ವಹಣೆಯನ್ನು ಹಿಡಿತದಲ್ಲಿ ಮತ್ತು ವಿವೇಕದಿಂದ ಮಾಡದಿದ್ದರೆ ಹಣದಿಂದ ಕೆಟ್ಟ ಚಟಗಳನ್ನು, ದುಷ್ಕರ್ಮಗಳನ್ನು ಮಾಡಿ ಆರೋಗ್ಯ, ಮನಸ್ಸು, ಕುಟುಂಬ, ವೃತ್ತಿ, ಕಳೆದುಕೊಳ್ಳಲು ಅನುವು ಮಾಡಿಬಿಡುತ್ತದೆ. ಈ ಗುಟ್ಟನ್ನು ಮಹಿಳೆಯರು ಸರಿಯಾಗಿ ಅರ್ಥ ಮಾಡಿಕೊಂಡಿರುವುದರಿಂದಲೋ ಅಥವಾ ಸ್ವಾಭಾವಿಕವಾಗಿ ಅವರಲ್ಲಿರುವ ಯೋಚನಾಶಕ್ತಿಯಿಂದಲೋ ಏನೋ ಈ ಮಹಿಳೆಯರು ಹಿಡಿತ ಮತ್ತು ವಿವೇಕದಿಂದ ಹಣ ನಿರ್ವಹಣೆ ನಡೆಸುತ್ತಾರೆ. ಅನೇಕ ಮಹಿಳೆಯರಿಗೆ ಅದರಲ್ಲೂ ಗ್ರಾಮೀಣ ಪ್ರದೇಶಗಳಲ್ಲಿ ಪರಿಶಿಷ್ಟ ಜನಾಂಗದವರಿಗಿಂತೂ ವಿದ್ಯಾಭ್ಯಾಸದ ಅವಕಾಶವಾಗಲಿ ಇತರೆ ಸರ್ಕಾರದ ತಿಳುವಳಿಕೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅವಕಾಶವಾಗಲಿ, ವಿವಿಧ ಮಾಧ್ಯಮಗಳ ಉಪಯೋಗವಾಗಲಿ, ಪಡೆದುಕೊಳ್ಳಲು ಅವಕಾಶವಿಲ್ಲದೆ ವಂಚಿತರಾಗಿದ್ದರು.

ಆದರೆ ಆಧುನಿಕ ಸಮಾಜದಲ್ಲಿ ಪರಿಶಿಷ್ಟ ಮಹಿಳೆಯರು ಆಯಾ ಕ್ಷೇತ್ರದ ಅನುಭವಗಳನ್ನು, ಅನಿಸಿಕೆಗಳನ್ನು ವ್ಯಕ್ತಪಡಿಸಿ ತಿಳಿಯದಿರುವ ವಿಚಾರ, ಜ್ಞಾನ, ಮಾಹಿತಿ ತಿಳಿದುಕೊಂಡು ಈ ಸ್ವ ಸಹಾಯ ಸಂಘಗಳ ಮುಖಾಂತರ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದು ಕಂಡುಬರುತ್ತದೆ. ಆದುದರಿಂದ ಮಹಿಳೆಯರ ಸಹಭಾಗಿತ್ವ ಅಗತ್ಯವಿರುವುದು. ಈ ಕಾರಣಕ್ಕಾಗಿ ಮಹಿಳಿಯರು ಗ್ರಾಮ ಅರಣ್ಯ ಸಮಿತಿಗಳಲ್ಲಿ ಗ್ರಾಮ ಸಭೆಗಳಲ್ಲಿ, ಸ್ವ ಸಹಾಯ ಸಂಘಗಳಲ್ಲಿ ಹೆಚ್ಚಾಗಿ ಚರ್ಚೆ, ಸಭೆ ಹಾಗೂ ತರಬೇತಿಗಳಲ್ಲಿ ಭಾಗವಹಿಸುವುದರ ಮೂಲಕ ಅನುಭವ, ಜ್ಞಾನ, ಮಾಹಿತಿ, ತಾಂತ್ರಿಕತೆಗಳನ್ನು ವ್ಯಕ್ತಪಡಿಸಿ, ವಿವಿಧ ಹೊಸ ಅನುಕೂಲಕರ ಮಾಹಿತಿಗಳನ್ನು ಪಡೆದುಕೊಂಡು ಅಭಿವೃದ್ಧಿ ಪೊಂದುವ ಸಾಧ್ಯತೆ ಇದೆ ಎದು ಹೇಳಬಹುದು.

ಪರಿಶಿಷ್ಟ ಮಹಿಳೆಯರು ಗ್ರಾಮ ಅರಣ್ಯ ಸಮಿತಿಯ, ಜಲಾನಯನ ಸಮಿತಿಯ, ಸಭೆ ಹಾಗೂ ಗ್ರಾಮ ಸಭೆಗಳ ಸದುಪಯೋಗವನ್ನು ಜವಾಬ್ದಾರಿಯುತವಾಗಿ ಪಡೆದುಕೊಂಡು, ಸಮಾಜದಲ್ಲಿ ಇತರ ವರ್ಗಗಳಂತೆ ಸರಿಸಮಾನರಾಗಿ ಯಾವುದೇ ಶೋಷಣೆಯಿಲ್ಲದೆ ಸ್ವ-ಸಹಾಯ ಸಂಘಗಳ ಮುಖಾಂತರ ಹಾಗೂ ಮಹಿಳೆಯರ ಸಹಭಾಗಿತ್ವದ ಮೂಲಕ ಅಭಿವೃದ್ಧಿ ಹೊಂದುವ ನಿಟ್ಟಿನಲ್ಲಿರುವುದು ಈ ಕ್ಷೇತ್ರರದಲ್ಲಿ ಕಂಡುಬರುತ್ತದೆ.

ಮಹಿಳೆಯರ ದುಡಿಮೆಯ ಸಹಭಾಗಿತ್ವ

"ಅತ್ಯಂತ ಸರಳವಾಗಿ ಹೇಳುವುದಾದರೆ, ಒಂದು ದೇಶ ಅಥವಾ ಪ್ರದೇಶದ ಒಟ್ಟು ಜನಸಂಖ್ಯೆಯಲ್ಲಿ ದುಡಿಮೆಗಾರರ ವರ್ಗದ ಪ್ರಮಾಣ ಎಷ್ಟಿದೆಯೋ ಅದನ್ನು ದುಡಿಮೆ ಸಹಭಾಗಿತ್ವವೆಂದು ಕರೆಯಲಾಗಿದೆ. ಒಟ್ಟು ಜನಸಂಖ್ಯೆ ಮತ್ತು ಒಟ್ಟು ದುಡಿಮೆಗಾರರ ಸಂಖ್ಯೆಗಳ ನಡುವಿನ ಅನುಪಾತವೇ ದುಡಿಮೆ ಸಹಭಾಗಿತ್ವವೆಂದು ಹೇಳಬಹುದು. ೧೯೯೧ರ ಜನಗಣತಿಯ ಪ್ರಕಾರ ಕರ್ನಾಟಕದ ಜನಸಂಖ್ಯೆ ೪೪೯.೭೭ ಲಕ್ಷ ಇವರಲ್ಲಿ ದುಡಿಮೆಗಾರರ ಸಂಖ್ಯೆ ೧೮೮.೮೭ ಲಕ್ಷ ಇವೆರೆಡರ ನಡುವಿನ ಅನುಪಾತ ಶೇ. ೪೨ ಕರ್ನಾಟಕದಲ್ಲಿ ಜನರ ದುಡಿಮೆ ಸಹಭಾಗಿತ್ವ ಪ್ರಮಾಣ ಶೇ ೪೨".

"ಒಂದು ದೇಶ ಅಥವಾ ಪ್ರದೇಶದ ಒಟ್ಟು ಮಹಿಳೆಯರ ಜನಸಂಖ್ಯೆ ಹಾಗೂ ಮಹಿಳಾ ದುಡಿಮೆಗಾರರ ನಡುವಿನ ಅನುಪಾತವೇ ಮಹಿಳೆಯರ ದುಡಿಮೆ ಸಹಭಾಗಿತ್ವ ಪ್ರಮಾಣವಾಗಿದೆ. ಕಳೆದ ಮೂರು ದಶಕಗಳಲ್ಲಿ ಭಾರತದಲ್ಲಿ ಮಹಿಳೆಯರ ಮತ್ತು ಪುರುಷರ ದುಡಿಮೆ ಸಹಭಾಗಿತ್ವವು ಬದಲಾಗುತ್ತಾ ಬಂದ ಪರಿಯನ್ನು ತೋರಿಸಿದೆ. ಕರ್ನಾಟಕದಲ್ಲಿ ಮಹಿಳೆಯರ ದುಡಿಮೆ ಸಹಭಾಗಿತ್ವ ಪ್ರಮಾಣ ಶೇ. ೨೯.೩೯, ಪುರುಷ ದುಡಿಮೆಗಾರರ ದುಡಿಮೆ ಸಹಭಾಗಿತ್ವ ಪ್ರಮಾಣ ಶೇ. ೫೪.೦೯ ಇದೆ. ಈ ಎಲ್ಲಾ ವಿವರಗಳಿಂದ ಸ್ಪಷ್ಟವಾಗುವ ಸಂಗತಿಯೆಂದರೆ ಮೊದಲನೆಯದಾಗಿ ಮಹಿಳೆಯರ

ದುಡಿಮೆ ಸಹಭಾಗಿತ್ವ ಪ್ರಮಾಣವು ಪುರುಷರ ದುಡಿಮೆ ಸಹಭಾಗಿತ್ವಕ್ಕಿಂತ ಕಡಿಮೆ ಇದೆ. ಎರಡನೆಯದಾಗಿ ಮಹಿಳೆಯರ ದುಡಿಮೆ ಸಹಭಾಗಿತ್ವ ಪ್ರಮಾಣವು ತೀವ್ರವಾಗಿ ಕಡಿಮೆಯಾಗುತ್ತಾ ನಡೆದಿದೆ".[೩] (ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ ಟಿ.ಆರ್. ಚಂದ್ರಶೇಖರ್ ಪು-೩೨,೩೩).

ಭಾರತದಲ್ಲಿ ದುಡಿಮೆ ಸಹಭಾಗಿತ್ವ

ಕೋಷ್ಟಕ ಶೇಕಡ

ವರ್ಷಗಳು	ಮಹಿಳೆಯರು	ಪುರುಷರು
೧೯೭೨-೭೩	३೧.೮	೫೪.೫
೧೯೭೭-೭೮	३३.೧	೫೫.೨
೧೯೮೩	३४.೦	೫೪.೭
೧೯೮೭-೮೮	३२.३	೫೩.೯
೧೯೮೯-೯೦	३೧.೯	೫೪.೮
೧೯೯೨	३೧.३	೫೫.೩
೧೯೯೩-೯೪	३೨.೮	೫೫.೬
೧೯೯೪-೯೫	३೧.೭	೫೬
೧೯೯೫-೯೬	೨೯.೫	೫೫.೧
೧೯೯೭	೨೯.೧	೫೫
೧೯೯೮	೨೬.೩	೫೩.೯

(ಮೂಲ ಸಿ.ಪಿ.ಚಂದ್ರಶೇಖರ್ ಮತ್ತು ಜಯತಿ ಘೋಷ್., ೨೦೦೦ ರೂರಲ್ ಎಂಪ್ಲಾಯಮೆಂಟ್-೧೯೯೦, ಪಿಕ್ಚರ್. ದಿ ಹಿಂದೂ ಬಿಜಿನೆಸ್ ಲೈನ್, ಫೆಬ್ರವರಿ ಮಂಗಳವಾರ ೨೦೦೦, ಪು-೧೫)

ಸ್ವ ಸಹಾಯ ಗುಂಪಿನ ಸಂಘಟನೆ

ಭಾರತದ ಮಹಿಳೆಯರಲ್ಲಿ ಅದರಲ್ಲಿಯೂ ಹಿಂದುಳಿದ ಸಮುದಾಯದ ಮಹಿಳೆಯರಲ್ಲಿ ಹಲವಾರು ಬಗೆ, ಕೆಲವರು ತಮ್ಮ ಭವಿಷ್ಯವನ್ನು ತಾವೆ ರೂಪಿಸಿಕೊಂಡರೆ ಇನ್ನೂ ಹಲವರು ತಮ್ಮ ಭವಿಷ್ಯಕ್ಕೆ ಗಂಡ, ತಂದೆ, ಅಣ್ಣ, ಅತ್ತೆ, ಮಾವ, ತಮ್ಮಂದಿರನ್ನು ಅವಲಂಭಿಸಿರುತ್ತಾರೆ. ಉಳಿದವರು ಚಿಂತನ ಸ್ವಾತಂತ್ರ್ಯದಿಂದಲೂ ಸಹ ವಂಚಿತರಾಗಿರುತ್ತಾರೆ. ಈ ಸರಣಿಯ ಮಧ್ಯೆ ಅನೇಕ ಮಹಿಳೆಯರು ತಮ್ಮ ಸಂಸಾರವನ್ನು ಸ್ವಸಾಮರ್ಥ್ಯದಿಂದ ನಡೆಸುವುದನ್ನು ಕಾಣಬಹುದು. ಇದು ಅವರ ವಿಧಿಯಾಗಿದ್ದರಿಂದಲೋ ಅಥವಾ ವಿಶಿಷ್ಟಾದಿನದಿಂದಲೋ ಅಲ್ಲ ಬದಲು ಅವರ ಗಂಡಂದಿರು

[illegible]

[illegible]	[illegible]	[illegible]
[illegible]	[illegible]	[illegible]

[illegible]

ಆ ಸ್ಥಿತಿಗೆ ಅವರನ್ನು ತಂದಿರುತ್ತಾರೆ. ಈ ರೀತಿಯ ಸನ್ನಿವೇಶಗಳನ್ನು ಯಥೇಚ್ಛವಾಗಿ ಬಡತನ ರೇಖೆಯ ಕುಟುಂಬಗಳು ಈ ಕ್ಷೇತ್ರದಲ್ಲಿ ನೋಡಬಹುದು.

ಈ ಕಾರಣದಿಂದ ಕರ್ನಾಟಕ ರಾಜ್ಯದ ಬಳ್ಳಾರಿಯ ಜಿಲ್ಲೆಯ, ಕೂಡ್ಲಿಗಿ ತಾಲೂಕಿನಲ್ಲಿ ಈ ಸ್ವ-ಶಕ್ತಿ ಯೋಜನೆಯನ್ನು ಪ್ರಾರಂಭಿಸಲು ಮಹಿಳಾ ಅಭಿವೃದ್ಧಿ ಇಲಾಖೆಯು ನಿರ್ಧರಿಸಿತು. ಈ ಯೋಜನೆಗಳ ಮೂಲಕ ಸುಭದ್ರ, ಸ್ವತಂತ್ರ ಮತ್ತು ಕೌಶಲ್ಯತೆ ತುಂಬಿದ ಮಹಿಳೆಯರ ಗುಂಪುಗಳನ್ನು ದೇಶದ ಮೂಲೆ ಮೂಲೆಯಲ್ಲೂ ಪ್ರಾರಂಭಿಸಿತು. ಈ ಯೋಜನೆಯನ್ನು ಅಂತರರಾಷ್ಟ್ರೀಯ ಅಭಿವೃದ್ಧಿ ಇಲಾಖೆಗಳು ಜಂಟಿಯಾದ ಕಾರ್ಯಕ್ರಮದ ಮೂಲಕ ಬ್ರಿಟೀಷ್ ಸಂಸ್ಥಾನ ಮತ್ತು ಭಾರತ ಸರ್ಕಾರ ಈ ಯೋಜನೆಯನ್ನು ನಿರ್ವಹಿಸುತ್ತದೆ.

ಈ ಹಿನ್ನಲೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ಕ್ಷೇತ್ರ ಕಾರ್ಯಕರ್ತರು ಸ್ಥಳೀಯವಾಗಿರುವ ಬಡತನ ರೇಖೆಯ ಕೆಳಗಿರುವ ಬುಡಕಟ್ಟು ಮತ್ತು ಇತರೆ ಹಿಂದುಳಿದ ಮಹಿಳೆಯರನ್ನು ಆಸಕ್ತಿಯಿರುವ ಹೆಚ್ಚು ಚುರುಕಾಗಿರುಪವರನ್ನು ಒಗ್ಗೂಡಿಸಿ ಸ್ವ-ಸಹಾಯ ಗುಂಪುಗಳನ್ನು ಸ್ವ-ಶಕ್ತಿ ಯೋಜನೆಯು ರಚಿತಗೊಳಿಸಿದೆ. ಈ ಯೋಜನೆಯ ಮುಖ್ಯ ಕೆಲಸವೆಂದರೆ ಮಹಿಳೆಯರನ್ನು ಅಭಿವೃಧ್ಧಿ ಪಡಿಸುವುದೇ ಆಗಿದೆ. ಇದರಲ್ಲಿ ಮೊದಲ ಹಂತವಾದ ಉಳಿತಾಯ ಮತ್ತು ಮಿತವ್ಯಯವನ್ನು ಪ್ರೋತ್ಸಾಹಿಸುವದು, ಇದಲ್ಲದೆ ಅರಿವಿನ ಮಟ್ಟವನ್ನು ಹೆಚ್ಚಿಸುವುದು, ಆತ್ಮ ಸ್ಥೈರ್ಯ ಬೆಳೆಸುವುದು.

ಕರ್ನಾಟಕದ ಅತಿ ಹಿಂದುಳಿದಿರುವ ಬಳ್ಳಾರಿ ಜಿಲ್ಲೆಯಲ್ಲಿನ ಸ್ವ ಸಹಾಯ ಗುಂಪುಗಳ ಅಂಕಿ ಅಂಶಗಳ ಕಾರ್ಯಚಟುವಟಿಕೆಯತ್ತ ಗಮನ ಹರಿಸಿದರೆ ಈ ಯೋಜನೆಯ ಯಶಸ್ಸಿನ ಅರ್ಥವಾದೀತು. ಜಿಲ್ಲೆಯಲ್ಲಿ ಇದುವರೆಗೆ ೪೭೭೫ ಗುಂಪುಗಳು ಚಟುವಟಿಕೆ ಪ್ರಾರಂಭಿಸಿವೆ. ಒಟ್ಟಾರೆ ಉಳಿತಾಯದ ಮೊತ್ತ ರೂ ೪.೬ ಕೋಟಿ ಆದರೆ ಗುಂಪುಗಳು ಪಡೆದ ಸಾಲದ ಮೊತ್ತ ರೂ ೪.೯ ಕೋಟಿ ಸಾಲ ನೀಡುವಾಗಲೂ ಸಹ ಅತಿ ಸರಳ ವಿಧಾನ, ಸುಲಭದ ಬಡ್ಡಿದರ, ನಿಗಧಿ ಪಡಿಸಿ ಉಳಿತಾಯದ ೧:೧, ೧:೨, ೧:೪ರ ಅನುಪಾತವನ್ನು ಸೂಕ್ಷ್ಮ ಪರಿಶೀಲನೆಯ ನಂತರ ಆರ್ಥಿಕ ಸಂಸ್ಥೆಗಳು ಹಣ ಒದಗಿಸುವವು. ಬಡತನ ರೇಖೆಯ ಕೆಳಗಿನವರಿಗೆ ಈ ರೀತಿ ಸಬ್ಸಿಡಿ ದೊರೆಯುವ ಸಾಧ್ಯತೆ ಇದೆ. ಜಿಲ್ಲೆಯಲ್ಲಿ 'ಸ್ತ್ರೀ-ಶಕ್ತಿ' ಯೋಜನೆಯಡಿ ೨೬೮೮, ನಂತರ ಸ್ವ-ಶಕ್ತಿ ಯೋಜನೆಯಡಿಯಲ್ಲಿ ೩೯೯ ಮತ್ತು ಇತರ ಸ್ವಯಂ ಸೇವಾ ಸಂಸ್ಥೆ ಹಾಗೂ ಬ್ಯಾಂಕ್ ಸೇರಿ ೧೭೭೮ ಸ್ವ ಸಹಾಯ ಗುಂಪುಗಳು ಕಾರ್ಯನಿರ್ವಹಿಸುತ್ತವೆ. ಇವುಗಳಲ್ಲಿ ಪುರುಷರ ಗುಂಪುಗಳ ಅತಿ ಕಡಿಮೆ. ಬಳ್ಳಾರಿ ಜಿಲ್ಲೆಯಲ್ಲಿ ಹಣಕಾಸು ಸಂಸ್ಥೆಗಳಲ್ಲಿ ತುಂಗಭದ್ರಾ ಗ್ರಾಮೀಣ ಬ್ಯಾಂಕ್ ಸ್ವ-ಸಹಾಯ ಗುಂಪುಗಳ ಹೆಚ್ಚು ಖಾತೆಗಳನ್ನು ಹೊಂದಿದ ಕೀರ್ತಿ ಪಡೆದಿದೆ. ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಹಿಳೆಯ ಮುಖ್ಯ ಅಥವಾ ಸ್ವ-ಶಕ್ತಿ ಯೋಜನೆಯನ್ನು I.D.P.M.S, D.P.G, B.Y.F.E, MYRADA, OUT

[illegible]

[illegible]

[illegible]

[illegible]

REACH ಮುಂತಾದ ಸ್ವಯಂ ಸೇವಾ ಸಂಸ್ಥೆಗಳು ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸುತ್ತವೆ. (ಸಂಯುಕ್ತ ಕರ್ನಾಟಕದ ದಿನಪತ್ರಿಕೆ, ಸಾಪ್ತಾಯಿಕ ಸೌರಭ ದಿ ೧೬-೩-೨೦೦೩-ಪದ್ಮಾವಿಠಲ).

ಮಾರ್ಗದರ್ಶನ, ತರಬೇತಿ, ಮೌಲ್ಯಮಾಪನ, ಸಾಲದ ಹಣ ಒದಗಿಸುವಿಕೆ. ಎಲ್ಲದರ ಮೂಲಕ ಗುಂಪುಗಳ ಸಾಮರ್ಥ್ಯ ಹಾಗೂ ದುಡಿಮೆ ಹೆಚ್ಚಿಸುವಲ್ಲಿ ಗಣನೀಯ ಕಾರ್ಯನಿರ್ವಹಿಸುತ್ತಿವೆ. ಸಾಲ ನೀಡುವ ಬ್ಯಾಂಕುಗಳ ಜವಾಬ್ದಾರಿ ಹೆಚ್ಚಿನದಾಗಿದ್ದು ಹಣದ ಸದುಪಯೋಗ ದುಡಿಮೆ ಹಾಗೂ ಮರುಪಾವತಿಗಳ ಬಗ್ಗೆಯೂ ಗಮನಹರಿಸುತ್ತಿವೆ. ಈ ಸ್ವ ಸಹಾಯ ಗುಂಪುಗಳಲ್ಲಿ ಮೊದ ಮೊದಲು ಅವಿದ್ಯಾಂತರ ಸಂಖ್ಯೆ ಹೆಚ್ಚಿದ್ದಿತ್ತಾದರೂ ಸಹಭಾಗಿತ್ವ ಹೆಚ್ಚಿದಂತೆ ಅನೇಕರು ಅವಶ್ಯಕ ಕಲಿಕ ಹಾಗೂ ಜ್ಞಾನವನ್ನು ಅರಿತುಕೊಂಡಿರುವುದು ಕಂಡು ಬರುತ್ತದೆ. ಅದರಂತೆ ಸ್ವ-ಶಕ್ತಿ ಯೋಜನೆಯಡಿಯಲ್ಲಿ ಕೂಡ್ಲಿಗಿ ತಾಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ೧೦೧ ಸ್ವ-ಸಹಾಯ ಸಂಘಗಳು ರಚನೆಗೊಂಡಿರುವುದು ಕಂಡುಬರುತ್ತದೆ. ಈ ಯೋಜನೆಯು ಗ್ರಾಮೀಣ ಮಹಿಳೆಯರ ಅಭಿವೃದ್ಧಿ ಹಾಗೂ ಸಶಕ್ತತೆಯನ್ನು ಮೂಢಿಸುವುದೆ ಆಗಿದೆ. ಆದುದರಿಂದ ಈ ಕ್ಷೇತ್ರದಲ್ಲಿ ಆರ್ಥಿಕವಾಗಿ ಹಿಂದುಳಿದವರು ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಆಧ್ಯತೆ ನೀಡಲಾಗಿದೆ. ನಂತರ ಇತರೆ ಸ್ವ-ಸಹಾಯ ಸಂಘಗಳನ್ನು ಸಹ ಸೇರಿಸಿಕೊಳ್ಳಲಾಗಿದೆ. ನನ್ನ ಅಧ್ಯಯನಕ್ಕೆ ೩೭ ಮಹಿಳಾ ಸ್ವ-ಸಹಾಯ ಸಂಘಗಳನ್ನು ಅಳವಡಿಸಿಕೊಳ್ಳಲಾಗಿದೆ.

ಯೋಜನೆಯ ಮೂಲಕ ಸ್ವ ಸಹಾಯ ಸಂಘದ ರಚನೆ

ಹಸಿದವನಿಗೆ ಊಟದ ಅವಶ್ಯಕತೆ

ಬಡವರಿಗೆ ಅದರಲ್ಲೂ ಬುಡಕಟ್ಟು ಮಹಿಳೆಯರಿಗೆ ಹಾಗೂ ಇತರೆ ಹಿಂದೂಳಿದ ಮಹಿಳೆಯರಿಗೆ ಸ್ವ-ಸಹಾಯ ಸಂಘಗಳ ಅವಶ್ಯಕತೆ ಇದೆ. ಸಾಮಾನ್ಯವಾಗಿ ಲೇವಾದೇವಿದಾರರಿಂದ ಶೋಷಣೆಗೆ ಒಳಗಾಗಿರುವವರೆಲ್ಲ ಬಡವರೇ ಆಗಿರುವುದರಿಂದ ಬಡ ಮಹಿಳೆಯರಿಗೆ ಮಾತ್ರ ಸ್ವ-ಸಹಾಯ ಸಂಘಗಳ ಅವಶ್ಯಕತೆ ಇದೆ. ಸಾಮಾಜಿಕ ಮತ್ತು ಆರ್ಥಿಕವಾಗಿ ಸಂಘದ ಮೂಲಕ ಸಬಲರಾಗಿ ಸಮಗ್ರ ಅಭಿವೃದ್ಧಿ ಹೊಂದಲೆಂದು ಮಹಿಳಾ ಅಭಿವೃದ್ಧಿ ನಿಗಮವು ಸ್ವ-ಶಕ್ತಿ ಯೋಜನೆಯಡಿಯಲ್ಲಿ ಸ್ವ-ಸಹಾಯ ಸಂಘಗಳನ್ನು ರಚಿಸಿದೆ. ಇನ್ನು ಹಲವು ಯೋಜನೆಯ ಮೂಲಕ ಸ್ವ-ಸಹಾಯ ಸಂಘಗಳು ರಚಿತವಾಗಿವೆ.

ಸ್ವ-ಸಹಾಯ ಸಂಘಗಳ ಬಗ್ಗೆ ಬಡವರಿಗೆ ಹೆಚ್ಚಿನ ಕಲ್ಪನೆ ತಿಳುವಳಿಕೆ ಇಲ್ಲದಿರುವುದರಿಂದ ೧೫ ರಿಂದ ೨೦ ಜನ ಮಹಿಳೆಯರನ್ನು ಅದರಲ್ಲಿಯೂ ಬುಡಕಟ್ಟು ಮಹಿಳೆಯರನ್ನು ಹಾಗೂ ಇತರೆ ಅರ್ಥಿಕವಾಗಿ ಹಿಂದುಳಿದ ಮಹಿಳೆಯರನ್ನು ಸ್ವಯಂ ಸೇವಾ ಸಂಸ್ಥೆಗಳ ಅಥವಾ ಇನ್ನಿತರಾ ಸಂಸ್ಥೆಗಳ ಮಾರ್ಗದರ್ಶನದಲ್ಲಿ ರಚಿಸಲಾಗಿದೆ. ಸ್ವ-ಸಂಘಗಳನ್ನು ರಚಿಸುವಾಗ ಸ್ವಲ್ಪ ಘರ್ಷಣೆಯಾಗಬಹುದು.

ಕಾರಣ ಸದಸ್ಯರಲ್ಲಿ ಜ್ಞಾನ ತಿಳುವಳಿಕೆ ಇಲ್ಲದಿರುವುದು ಆಗ ಕ್ಷೇತ್ರ ಕಾರ್ಯಕರ್ತರು ಸಂಘದ ಬಗ್ಗೆ ತಿಳುವಳಿಕೆ ನೀಡಿ ಮಹಿಳೆಯರು ಸಂಘಗಳನ್ನು ರಚಿಸುವಂತೆ ಮತ್ತು ಮಹಿಳೆಯರನ್ನು ಒಂದುಗೂಡಿಸಿ ಅವರಿಂದಲೇ ಸಂಘ ರಚನೆಯಾಗುತ್ತದೆ. ಸ್ವ-ಸಹಾಯ ಸಂಘವನ್ನು ರಚನೆ ಮಾಡಿ, ಸಾಮಾನ್ಯ ಗುರಿ ಸಾಧನೆಗಾಗಿ ಒಗ್ಗೂಡಿ ಶ್ರಮಿಸಲು ಅರ್ಹ ಬಡತನ ರೇಖೆಯ ಕೆಳಗಿನ ಮಹಿಳೆಯರು ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಠ ಪಂಗಡದ ಮಹಿಳೆಯರನ್ನು ಪ್ರೇರೇಪಿಸಿ, ಈ ಸ್ವ-ಸಹಾಯ ಸಂಘವನ್ನು ರಚಿಸುವಂತೆ ಕ್ಷೇತ್ರಕಾರ್ಯಕರ್ತರಿಗೆ ಸ್ವ-ಶಕ್ತಿ ಯೋಜನೆಯನ್ನು ನೋಡಿಕೊಳ್ಳುತ್ತಿರುವ ಸ್ವಯಂ ಸೇವಾ ಸಂಸ್ಥೆಯು ತಿಳಿಯಪಡಿಸುತ್ತದೆ. ಅದರ ಆಜ್ಞೆಯಂತೆ ಈ ಕಾರ್ಯಕರ್ತರು ಮೇಲೆ ಹೇಳಿರುವವರನ್ನು ಸಂಘಕ್ಕೆ ಸೇರಿಸಿ ರಚಿಸುವುದು ಇವರ ಕಾರ್ಯವಿಧಾನವಾಗಿದೆ. ಈ ಕ್ಷೇತ್ರ ಕಾರ್ಯಕರ್ತರು ತಾವು ರಚಿಸಿದ ಗುಂಪಿನಲ್ಲಿ ಇಬ್ಬರು ಸಮರ್ಥ ಮುಖಂಡರನ್ನು ಸದಸ್ಯರ ಅಪೇಕ್ಷೆಯ ಮೇರೆಗೆ ಆಯ್ಕೆ ಮಾಡುತ್ತಾರೆ.

ಸುಭದ್ರ ಗುಂಪುಗಳ ರಚನೆ

ಜನಗಳ ಒಂದು ಗುಂಪು ಅವರ ಅಭಿರುಚಿಯ ವಿಷಯಗಳನ್ನು ಚರ್ಚಿಸಲು ಆಗಾಗ್ಗೆ ಸೇರುವುದು ಮತ್ತು ಪದೇ ಪದೇ ಎದುರಾಗುವ ತೊಂದರೆ ತೊಡಕುಗಳಿಗೆ ಪರಿಹಾರ ಹುಡುಕಿಕೊಳ್ಳುವುದು. ಈ ರೀತಿಯ ಗುಂಪಿಗೆ ಸ್ವಸಹಾಯ ಗುಂಪು ಎಂದು ಹೇಳಲಾಗುತ್ತದೆ. ಈ ಗುಂಪುಗಳು ಯಾವುದೇ ಸರ್ಕಾರ ಅಥವಾ ಸ್ವಯಂ ಸೇವಾ ಸಂಸ್ಥೆಗಳ ಕಾರ್ಯಕ್ರಮದಡಿಯಲ್ಲಿರುವುದು ಕಂಡುಬರುತ್ತದೆ. ಸ್ವಶಕ್ತಿ ಯೋಜನೆಯಡಿಯಲ್ಲಿ ಗುಂಪಿನ ರಚನೆಗೆ ಹೆಚ್ಚು ಪ್ರಾಮುಖ್ಯತೆ ನೀಡಲಾಗಿದೆ. ಯಾವುದೇ ಮಹಿಳೆ ಗುಂಪು ಸೇರುವುದರಿಂದು ಈ ಕ್ಷೇತ್ರದಲ್ಲಿರುವ ಸಂಘವಾಗಿರಬಹುದು ಅಥವಾ ಇನ್ನು ಎಲ್ಲಿಯಾದರು ಇರುವ ಸಂಘಗಳು ಮಹಿಳೆಯರ ಸಾಮರ್ಥ್ಯದ ಬಗ್ಗೆ ಸ್ವತಂತ್ರವಾಗಿ ಯೋಚಿಸುವಂತೆ ಮಾಡುತ್ತದೆಂದು ನಂಬಲಾಗಿದೆ.

ಬುಡಕಟ್ಟು ಮಹಿಳೆಯರು ಹಾಗೂ ಇತರೆ ಸಮುದಾಯದ ಮಹಿಳೆಯರು ಬದುಕು. ಅವರ ಸಂಸಾರ ಮತ್ತು ಅವರಿರುವ ಸಮುದಾಯಗಳ ಸುಧಾರಣೆಯ ಹಲವಾರು ಗುರಿ ಮತ್ತು ಧ್ಯೇಯಗಳನ್ನು ಸಾಧಿಸಲು ಗುಂಪುಗಳನ್ನು, ಅದರಲ್ಲೂ ವಿಶೇಷವಾಗಿ ಬುಡಕಟ್ಟು ಮಹಿಳೆಯರ ಗುಂಪುಗಳನ್ನು ರಚಿಸಲಾಗಿದೆ. ಮಹಿಳೆಯರ ಸಾಧನೆ ಸಾಮರ್ಥ್ಯ ಮೀರಿದ ಕೆಲಸಗಳ ಸಾಹಸಗಳ ಮೂಲಕ ಮಹಿಳೆಯರಿಗೆ ಸಾಮಾಜಿಕ ಮುಂದಾಳತ್ವವನ್ನು ಗುಂಪು ನೀಡುವುದು. ಒಟ್ಟಿನಲ್ಲಿ ಮಹಿಳೆಯರುಗಳ ಹೊಸ ಯೋಜನೆ ಯೋಜಿಸಲು ಕಲ್ಪನೆ ಸಾಕಾರಗೊಳಿಸಲು ಮತ್ತು ತಮ್ಮ ಜೀವನದಲ್ಲಿ ಬದಲಾವಣೆ ತರಲು ಒಬ್ಬರಿಗೊಬ್ಬರು ಸಹಾಯ ಮಾಡುವುದರ ಮೂಲಕ ಹಿಂದೂಳಿದ ಮಹಿಳೆಯರು ತಮ್ಮ ಬದುಕಿಗೂ ಒಂದು ಬೆಲೆಯಿದೆ ಮತ್ತು ತಮ್ಮ ಬೇಡಿಕೆಗಳನ್ನು ಪರಿಗಣಿಸಲಾಗಿದೆ ಎಂದು ತಿಳಿಯಲು

ಗುಂಪು ಸಹಾಯ ಮಾಡುತ್ತದೆ. ಈ ಯೋಜನೆಗಳ ಮೂಲಕ ಪ್ರಾರಂಭಿಸಿದ ಗುಂಪು ಮಹಿಳೆಯರ ಮತ್ತು ಅವರ ಕುಟುಂಬಗಳ ಆರ್ಥಿಕ ಭದ್ರತೆ ಸಾಧಿಸಲು ಉಪಯೋಗವಾಗುತ್ತದೆ. ಹಾಗೆಯೇ ಮಿತವ್ಯಯ ಸಾಲ ಮತ್ತು ಹಣ ಗಳಿಕೆಯ ಯೋಜನೆಗಳು ಅಥವಾ ಆರೋಗ್ಯ ತಿಳವಳಿಕೆಯನ್ನು ನಂತರ ಸಾಮಾಜಿಕ ಪಿಡುಗುಗಳ ನಿರ್ಮೂಲನೆಯ ತಿಳುವಳಿಕೆ ಹಾಗೆಯೇ ಮಕ್ಕಳ ವಿದ್ಯಾಭ್ಯಾಸದ ಬಗೆ ಈ ಯೋಜನೆಯ ಸಲಹೆ ನೀಡುತ್ತದೆ. ಗರ್ಭಿಣಿ ಸ್ತ್ರೀಯರ ಆರೋಗ್ಯ ಕಾಪಾಡುವಂತೆ ಯೋಜನೆಯ ಮೂಲಕ ತಿಳಿಯಪಡಿಸಿದೆ.

ಈ ಮಹಿಳಾ ಸ್ವಶಕ್ತಿಯ ಸ್ವಸಹಾಯ ಸಂಘಗಳ ಉಸ್ತುವಾರಿಯನ್ನು ಕೂಡ್ಲಿಗಿ ತಾಲೂಕಿನ ಡಿ.ಪಿ.ಜಿ ಸಂಸ್ಥೆಯು ನೋಡಿಕೊಳ್ಳುತ್ತದೆ. ನಂತರ ಈ ಯೋಜನೆಯಲ್ಲಿ ಕ್ಷೇತ್ರದಲ್ಲಿ ರಚನೆಗೊಂಡ ಸ್ವಸಹಾಯ ಗುಂಪುಗಳನ್ನು ಕೋಷ್ಟಕದಲ್ಲಿ ತಿಳಿಸಲಾಗಿದೆ.

ಕ್ಷೇತ್ರಾಧ್ಯಾಯ ಕೈಗೊಂಡ ಸ್ವಶಕ್ತಿ ಯೋಜನೆಯ ಸ್ವಸಹಾಯ ಗುಂಪುಗಳ ಯಾದಿ

ಕ್ರ. ಸಂ.	ಗುಂಪಿನ ಹೆಸರು	ಸಂದರ್ಶನ ದಿನಾಂಕ	ಸದಸ್ಯರ ಸಂಖ್ಯೆ	ಉಳಿತಾಯ ಪುಸ್ತಕ	ವಾರದ ಸಭೆ	ಷರಾ
೧.	ಪ್ರಿಯಾಂಕ ಮ.ಸ್ವ.ಸ.ಸಂಘ	೧೪.೧.೦೩	೨೦	ಇದೆ	ಮಂಗಳವಾರ	ಆಂತರಿಕ ಸಾಲ ಇದೆ
೨.	ಶ್ರೀ ಗಾದ್ರಿಪಾಲಯ್ಯ ಮ.ಸ್ವ.ಸ.ಸಂಘ	೧೪.೧.೦೩	೨೦	ಇದೆ	ಮಂಗಳವಾರ	ಆಂತರಿಕ ಸಾಲ ಇದೆ
೩.	ಶ್ರೀ ದುರ್ಗಾದೇವಿ ಮ.ಸ್ವ.ಸ.ಸಂಘ	೧೫.೧.೦೩	೧೭	ಇದೆ	ಗುರುವಾರ	ಆಂತರಿಕ ಸಾಲ ಇದೆ
೪.	ಜಗದಾಂಬಿಕಾ ಮ.ಸ್ವ.ಸ.ಸಂಘ	೧೬.೧.೦೩	೧೯	ಇದೆ	ಗುರುವಾರ	ಬ್ಯಾಂಕ್ ಸಾಲ ಸಿಕ್ಕಿದೆ
೫.	ಶ್ರೀ ಮಲಿಯಮ್ಮ ಮ.ಸ್ವ.ಸ.ಸಂಘ	೨೦.೧.೦೩	೧೭	ಇದೆ	ಗುರುವಾರ	ಬ್ಯಾಂಕ್ ಸಾಲ ಸಿಕ್ಕಿದೆ
೬.	ಶ್ರೀ ಸಾರಿದುರುಗಮ್ಮ ಮ.ಸ್ವ.ಸ.ಸಂಘ	೨೧.೧.೦೩	೧೫	ಇದೆ	ಬುಧುವಾರ	ಬ್ಯಾಂಕ್ ಸಾಲ ಸಿಕ್ಕಿದೆ
೭.	ಶ್ರೀ ದುರ್ಗಾದೇವಿ ಮ.ಸ್ವ.ಸ.ಸಂಘ	೨೨.೧.೦೩	೧೬	ಇದೆ	ಬುಧುವಾರ	ಆಂತರಿಕ ಸಾಲ ಸಿಕ್ಕಿದೆ
೮.	ಶ್ರೀ ಉಮಾದೇವಿ ಮ.ಸ್ವ.ಸ.ಸಂಘ	೨೩.೧.೦೩	೧೮	ಇದೆ	ಬುಧುವಾರ	ಆಂತರಿಕ ಸಾಲ ಸಿಕ್ಕಿದೆ
೯.	ಉಡಸಲಮ್ಮ ಮ.ಸ್ವ.ಸ.ಸಂಘ	೨೨.೧.೦೩	೧೮	ಇದೆ	ಬುಧುವಾರ	ಬ್ಯಾಂಕಿನಿಂದ ಸಾಲ ಸಿಕ್ಕಿದೆ

[illegible]

[illegible]

[illegible]

೧೦.	ಕಿತ್ತೂರ ರಾಣಿ ಚೆನ್ನಮ್ಮ ಮ.ಸ್ವ.ಸ.ಸಂಘ		೧೩	ಇದೆ	ಮಂಗಳವಾರ	ಆಂತರಿಕ ಸಾಲ ಸಿಕ್ಕಿದೆ
೧೧.	ಶ್ರೀ ಹುಲಿಗಮ್ಮ ಮ.ಸ್ವ.ಸ.ಸಂಘ	೨೯.೧.೦೩	೧೭	ಇದೆ	ಮಂಗಳವಾರ	ಆಂತರಿಕ ಸಾಲ ಸಿಕ್ಕಿದೆ
೧೨.	ಶ್ರೀ ದುರ್ಗಾಂಬಿಕ ಮ.ಸ್ವ.ಸ.ಸಂಘ	೨೦.೧.೦೩	೨೦	ಇದೆ	ಮಂಗಳವಾರ	ಬ್ಯಾಂಕಿನಿಂದ ಸಾಲ ಸಿಕ್ಕಿದೆ
೧೩.	ಶ್ರೀ ಮದಗಾಂಬಿಕಾ ಮ.ಸ್ವ.ಸ.ಸಂಘ	೩೦.೧.೦೩	೨೦	ಇದೆ	ಮಂಗಳವಾರ	ಬ್ಯಾಂಕಿನಿಂದ ಸಾಲ ಸಿಕ್ಕಿದೆ
೧೪.	ಶ್ರೀ ಇಂದಿರಾ ಗಾಂಧಿ ಮ.ಸ್ವ.ಸ.ಸಂಘ	೩೧.೧.೦೩	೧೬	ಇದೆ	ಬುಧವಾರ	ಆಂತರಿಕ ಸಾಲ ಸಿಕ್ಕಿದೆ
೧೫.	ಶ್ರೀ ಹೊನ್ನಮ್ಮ ಮ.ಸ್ವ.ಸ.ಸಂಘ	೩೧.೧.೦೩	೧೮	ಇದೆ	ಶುಕ್ರವಾರ	ಆಂತರಿಕ ಸಾಲ ಸಿಕ್ಕಿದೆ

ನಂತರ ಇತರೆ ಮಹಿಳಾ ಸ್ವಸಹಾಯ ಸಂಘಗಳನ್ನು ಸಂದರ್ಶಿಸಿ ಮಾಹಿತಿ ಸಂಗ್ರಹಿಸಲಾಗಿದೆ. ಇವು ಸ್ವರ್ಣಜಯಂತಿ ಶಹರಿ ಯೋಜನೆಯಡಿಯಲ್ಲಿ ರಚನೆಗೊಂಡ ಮಹಿಳಾ ಗುಂಪುಗಳು

ಕ್ರಮ ಸಂ	ಗುಂಪಿನ ಹೆಸರು	ಸಂದರ್ಶನ ದಿನಾಂಕ	ಸಂಘದ ಸದಸ್ಯರ ಸಂಖ್ಯೆ	ಉಳಿತಾಯ ಪುಸ್ತಕ	ವಾರದ ಸಭೆ	ಷರಾ
೧.	ಶ್ರೀ ಕಿತ್ತೂರು ರಾಣಿ ಚೆನ್ನಮ್ಮ ಮ.ಸ್ವ.ಸ.ಸಂಘ ೬ನೇ ವಾರ್ಡ್ ಕೂಡ್ಲಿಗಿ	೨೬.೧.೦೩	೧೩	ಇದೆ	ಭಾನುವಾರ	ಬ್ಯಾಂಕಿನಿಂದ ಸಾಲ ಸಿಕ್ಕಿದೆ
೨.	ಶ್ರೀ ಪ್ರಿಯದರ್ಶಿನಿ ಮ.ಸ್ವ.ಸ.ಸಂಘ ೪ನೇ ವಾರ್ಡ್ ಕೂಡ್ಲಿಗಿ	೩೧.೧.೦೩	೧೦	ಇದೆ	ಶುಕ್ರವಾರ	ಬ್ಯಾಂಕಿನಿಂದ ಸಾಲ ಸಿಕ್ಕಿದೆ
೩.	ಶ್ರೀ ತಾಯಮ್ಮ ಮ.ಸ್ವ.ಸ.ಸಂಘ ೩ನೇ ವಾರ್ಡ್ ಕೂಡ್ಲಿಗಿ	೩.೨.೦೩	೧೦	ಇದೆ	ಭಾನುವಾರ	ಬ್ಯಾಂಕಿನಿಂದ ಸಾಲ ಸಿಕ್ಕಿದೆ

ಈ ರೀತಿ ಮಹಿಳಾ ಸ್ವಸಹಾಯ ಸಂಘಗಳು ಮಿತಿವಾಗಿದ್ದು ಇನ್ನುಳಿದ ಸ್ವಸಹಾಯ ಸಂಘಗಳನ್ನು ಅನುಬಂಧದಲ್ಲಿ ತಿಳಿಸಲಾಗಿದೆ.

ಸ್ವಸಹಾಯ ಗುಂಪಿನ ರಚನೆಯಿಂದ ಮಹಿಳೆಯರ ಮೇಲಾಗುವ ಪರಿಣಾಮಗಳು

ಮಹಿಳೆಯರಿಗೆ ಬಹಳಷ್ಟು ಸ್ವಾಭಿಮಾನ ಬೆಳೆಯಲು ಇದೊಂದು ಸದಾವಕಾಶ. ಈ ಮುಂಚೆ

ಸರ್ಕಾರಿ ಅಧಿಕಾರಿಗಳಾಗಲಿ ಅಥವಾ ಬ್ಯಾಂಕ್ ವ್ಯವಸ್ಥಾಪಕರಾಗಲಿ ಕುಟುಂಬದ ಯಜಮಾನರ ಗೈರುಹಾಜರಿಯಲ್ಲಿ ಮಹಿಳೆಯರೊಂದಿಗೆ ಚರ್ಚಿಸಿದಾಗ 'ನನಗೇನು ಗೊತ್ತಿಲ್ಲ', ಯಜಮಾನರು ಬರಲಿ, ಅವರಿಗೊತ್ತು' ಈ ರೀತಿ ಉತ್ತರ ದೊರೆಯುತ್ತಿತ್ತು. ಆದರೆ ಈಗ ಗುಂಪು ರಚನೆಯ ನಂತರ ಮಹಿಳೆಯರು ಬ್ಯಾಂಕುಗಳನ್ನು ಸಂಪರ್ಕಿಸಿ ಅವರ ಹಕ್ಕು ಬಾಧ್ಯತೆಗಳನ್ನು ಈಡೇರಿಸುವಂತೆ ಬೇಡಿಕೆ ಸಲ್ಲಿಸುವಷ್ಟು ಪ್ರಭುದ್ಧರಾಗಿದ್ದಾರೆ. ಅಲ್ಲದೇ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸಂಪರ್ಕಿಸಿ ಕುಡಿಯುವ ನೀರಿನ ಪೂರೈಕೆ ಬೀದಿ ದೀಪದ ವ್ಯವಸ್ಥೆ ಶಾಲೆ ತೆರೆಯಲು ಇತ್ಯಾದಿ ಬೇಡಿಕೆಗಳನ್ನು ಸೇರಿ ಮಂಡಿಸುತ್ತಿದ್ದಾರೆ.

ಮಹಿಳೆಯರು ಗುಂಪಿನಿಂದ ಸಾಲ ಪಡೆಯುವುದಲ್ಲದೇ ನಾವೆಲ್ಲರೂ ಒಂದೇ ಎಂಬ ಭಾವನೆ ಮೂಡಲು ಸ್ವಸಹಾಯ ಗುಂಪುಗಳು ಕಾರಣವಾಗಿದೆ. ಈ ರೀತಿಯ ಸಾಲದ ವ್ಯವಸ್ಥೆಯಿಂದ ಖರೀದಿಸಿದ ಸ್ವತ್ತುಗಳ ನಿರ್ವಹಣೆಯಿಂದ ಕುಟುಂಬದ ಆರ್ಥಿಕ ಪರಿಸ್ಥಿತಿ ಉತ್ತಮಗೊಳಿಸಿದ್ದಾರೆ. ಬ್ಯಾಂಕುಗಳಲ್ಲಿ ಪಡೆದ ಸಾಲವನ್ನು ತಮ್ಮ ಆರ್ಥಿಕ ಜೀವನಕ್ಕೆ ಪಡೆದುಕೊಂಡು ಅದಕ್ಕೆ ತಕ್ಕಂತೆ ಅದನ್ನು ವಿನಿಯೋಗಿಸಿ ಕೊಂಡು ಈ ಸಾಲವನ್ನು ಪ್ರಾಮಾಣಿಕ ಮರುಪಾವತಿಯಿಂದ ಈ ಕ್ಷೇತ್ರದಲ್ಲಿ ಕಂಡುಬರುವ ಅನೇಕ ಸ್ವಸಹಾಯ ಸಂಘಗಳಿಗೆ ಸಹಕಾರ ನೀಡಬೇಕೆಂದು ಸಹ ಬ್ಯಾಂಕ್ ವ್ಯವಸ್ಥಾಪಕರಲ್ಲಿ ಮೂಡಲು ಕಾರಣವಾಗಿದೆ. ಇದಲ್ಲದೆ ಮಹಿಳೆಯರ ಮೇಲೆ ನಡೆಯುವ ದೌರ್ಬಲ್ಯಗಳನ್ನು ನಿಯಂತ್ರಿಸಲು ಸಹ ಈ ಸಂಘಗಳು ಐಕ್ಯಮತದಿಂದ ಹೋರಾಟ ನಡೆಸುತ್ತಿರುವುದನ್ನು ಅನೇಕ ಕಡೆ ಈಗಲೂ ಕಾಣಬಹುದು. (ಕರ್ನಾಟಕ ವಿಕಾಸ ಏ.೨೦೦೧, ಎಂ.ಸಿ.ಶೈಲಜಾ) ಈ ಸ್ವಸಹಾಯ ಸಂಘಗಳ ಮತ್ತೊಂದು ವಿಶೇಷ ಎಂದರೆ ಸಂಘದ ಕಾರ್ಯಚಟುವಟಿಕೆಗಳನ್ನು ಅಚ್ಚುಕಟ್ಟಾಗಿ ಪುಸ್ತಕಗಳಲ್ಲಿ ದಾಖಲು ಮಾಡುತ್ತಾ ಬಂದಿದ್ದಾರೆ. ಮಹಿಳೆಯರನ್ನು ಸ್ವಾವಲಂಬಿಗಳನ್ನಾಗಿ ಮಾಡುವುದರ ಜೊತೆಗೆ ಅನಕ್ಷರಸ್ಥ ಮಹಿಳೆಯರಿಗೆ ಅಕ್ಷರ ಜ್ಞಾನವನ್ನು ತುಂಬುವುದು ಹಾಗೂ ಸಹಿ ಮಾಡುವುದನ್ನು ಕಲಿಸುವುದು ಈ ಸಂಘಗಳು ಇವರಿಗೆ ಮಾದರಿಯಾಗಿವೆ.

ಸ್ವಸಹಾಯ ಸಂಘಗಳಲ್ಲಿರುವ ಮಹಿಳೆಯರ ಉಳಿತಾಯ

ಇತರ ಸಂಘಗಳಿಗೂ ಸ್ವಸಹಾಯ ಸಂಘಗಳಿಗೂ ಇರುವ ಪ್ರಮುಖ ವ್ಯತ್ಯಾಸವೆಂದರೆ ಸ್ವಸಹಾಯ ಸಂಘದ ಸದಸ್ಯರ ನಿಯತಕಾಲಿಕವಾದ ಉಳಿತಾಯ ಈ ಉಳಿತಾಯವೆ ಸ್ವಸಹಾಯ ಸಂಘದ ಬೆನ್ನೆಲುಬು. ಉಳಿತಾಯವನ್ನು ಪ್ರತಿವಾರ ನಡೆಯುವ ಗ್ರಾಮ ಸಭೆಯಲ್ಲಿ ಸಂಘದ (ಸದಸ್ಯರಲ್ಲದ) ನಾಯಕರು ಸಂಗ್ರಹಿಸುತ್ತಾರೆ. ಸಂಘದ ಸದಸ್ಯರಲ್ಲಿ ಸಮಾನತೆಯ ದೃಷ್ಟಿಯಿಂದ ಉಳಿತಾಯ ಸಮಾನವಾಗಿದ್ದರೆ ಒಳ್ಳೆಯದು. ಆದರೆ ಎಲ್ಲಾ ಐದು ಬೆರಳು ಸಮಾನವಾಗಿರುವುದಿಲ್ಲ, ಈ ಕಾರಣಕ್ಕಾಗಿ ಕೆಲವೊಂದು ಸಂಘಗಳಲ್ಲಿ ಮಹಿಳೆಯರು ಕಡು ಬಡವರಿರುವುದು ಹಾಗೂ ಭಿಕ್ಷೆ ಬೇಡವವರು ಈ ಸ್ವಶಕ್ತಿ ಯೋಜನೆಯಲ್ಲಿರುವ, ಸ್ವ-ಸಹಾಯ ಸಂಘಗಳನ್ನು ಕಟ್ಟಿಕೊಂಡಿರುವುದರಿಂದ

ಉಳಿತಾಯ ಸ್ವಲ್ಪ ಕುಂಠಿತವಾಗಿ, ಎಲ್ಲಾ ಸದಸ್ಯರು ಹಾಗೂ ಎಲ್ಲಾ ಸಂಘಗಳು ಸಮಾನವಾಗಿ ಉಳಿತಾಯ ಮಾಡಿಲ್ಲದಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬರುತ್ತವೆ.

ತದನಂತರ ಸಂಘದ ಸಭೆಯಲ್ಲಿ ಸಂಗ್ರಹಿಸಿದ ಉಳಿತಾಯವನ್ನು ಸಂಘದ ಪ್ರತಿನಿಧಿಗಳು ಪ್ರತಿ ಸದಸ್ಯರ ಉಳಿತಾಯ ಎಷ್ಟಾಗಿದೆ ಎಂದು ತಿಳಿಸಿ ಅವರವರ ಉಳಿತಾಯ ಹಾಗೂ ಸಾಲದ ವಿವರವನ್ನು ಪಾಸ್ ಪುಸ್ತಕಕ್ಕೆ ಬರೆದು ಕೊಡುವುದು ಹಾಗೂ ಉಳಿತಾಯದ ಹಣವನ್ನು ಆ ದಿನ ಸಭೆ ಸೇರಿ ಯಾರಾದರೂ ಕಷ್ಟ ಬಂದರೆ ಅವರಿಗೆ ಕೊಡುವುದು ಪ್ರತಿ ಸಂಘದ ಕರ್ತವ್ಯವಾಗಿದೆ. ಹಾಗೆಯೇ ಸಾಲ ತೆಗೆದುಕೊಂಡ ಸದಸ್ಯರು ಈ ಹಣವನ್ನು ಹೇಗೆ ವಿನಿಯೋಗಿಸಬೇಕೆಂದು ಮೊದಲು ತೀರ್ಮಾನ ಮಾಡಿಕೊಂಡು ಸದಸ್ಯರು ಸಾಲವನ್ನು ಪಡೆದುಕೊಳ್ಳಲು ಇಚ್ಛೆಪಡೆಯುತ್ತಾರೆ. ತಮ್ಮ ಗ್ರಾಮಕ್ಕೆ ಸಂಬಂಧಿಸಿದ ಸೇವಾ ಕ್ಷೇತ್ರದಲ್ಲಿ ಅಥವಾ ಹಳ್ಳಿಯ ಹತ್ತಿರವಿರುವ ಪಟ್ಟಣ ಕ್ಷೇತ್ರದಲ್ಲಿ ಬ್ಯಾಂಕುಗಳಲ್ಲಿ ಪ್ರತಿ ಸಂಘಗಳು ತಮ್ಮ ಉಳಿತಾಯದ ಖಾತೆಯನ್ನು ಗುಂಪಿನ ಹೆಸರಿನಲ್ಲಿ ತೆರೆದು ಹಣವನ್ನು ಜಮಾ ಮಾಡುವುದು ನಂತರ ಅವಶ್ಯವಿದ್ದಾಗ ಬಿಡಿಸುವುದು. ಸಂಘದ ಪ್ರತಿನಿಧಿಗಳಿಗೆ ಸೇರಿರುತ್ತದೆ. ಅದರ ವ್ಯವಹಾರವನ್ನು ನೋಡಿಕೊಳ್ಳಲು ಗುಂಪಿನ ಪ್ರತಿನಿಧಿಗಳಿ ಸೇರಿರುತ್ತದೆ. ಸಂಘದ ಎಲ್ಲಾ ಸದಸ್ಯರು ಸಭೆಯಲ್ಲಿ ಖಾತೆ ತೆರೆಯುವ ಬಗ್ಗೆ ತೀರ್ಮಾನ ಮಾಡಿ, ಈ ತೀರ್ಮಾನದಲ್ಲಿ ಬ್ಯಾಂಕಿನ ಖಾತೆಯನ್ನು ಜಂಟಿಯಾಗಿ ನೋಡಿಕೊಳ್ಳಲು ಸಂಘದ ಪ್ರತಿನಿಧಿಗಳೆ ಆಗಿರುತ್ತಾರೆ.

ಈ ಠರಾವಿನ ಒಂದು ಪ್ರತಿಗೆ ಎಲ್ಲಾ ಸದಸ್ಯರು ಸಹಿ ಮಾಡಿ ಬ್ಯಾಂಕಿನ ಖಾತೆ ತೆರೆಯುವ ಅರ್ಜಿ ನಮೂನೆಯನನ್ನು ತುಂಬಿ ಬ್ಯಾಂಕಿನ ಖಾತೆ ತೆರೆಯುವುದರ ಬಗ್ಗೆ ಮಾಹಿತಿದಾರರಿಂದ ಸಂಗ್ರಹಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಮಹಿಳೆಯರು ಎಲ್ಲಾ ಕೆಲಸಗಳನ್ನು ಸ್ವತಃ ಮಾಡಿ ಆದಷ್ಟು ಹಣವನ್ನು ವಿನಿಯೋಗ ಮಾಡದಂತೆ ಪ್ರತಿವಾರ ಉಳಿತಾಯ ಮಾಡಿ ಸಂಘವನ್ನು ಬೆಂಬಲಿಸ ತೊಡಗುವುದು ಮತ್ತು ತ್ಯಾಗ ಮನೋಭಾವನೆಯಿಂದ ಕೊರತೆ ಬಾರದಂತೆ ನೋಡಿಕೊಳ್ಳುತ್ತಾರೆ. ಆದರೆ ಎಷ್ಟೋ ಭಾರಿ ಮಹಿಳೆಯರು ಒಳ್ಳೆಯ ಹಾಗೂ ಅವಶ್ಯವಿರುವ ಜೀವನಕ್ಕೆ ಬೇಕಾಗುವ ಸಂಪನ್ಮೂಲಗಳನ್ನು, ವಿಶ್ರಾಂತಿ ಇತ್ಯಾದಿಗಳನ್ನು ತಮಗೆ ದೂರ ಮಾಡಿಕೊಂಡು ತನ್ಮೂಲಕ ಉಳಿಸುವುದುಂಟು.

ಸಮಾಜದಲ್ಲಿ ಅನೇಕ ಅಭಿವೃದ್ಧಿ ಹೊಂದುತ್ತಿರುವ ಮಹಿಳೆಯರು ಕುಟುಂಬದ ಖರ್ಚು ಕಡಿಮೆಗೊಳಿಸಿ ಸಂಪಾದನೆಯನ್ನು ಹೆಚ್ಚಿಸುತ್ತಾರೆ. ಕೆಲವೊಂದು ಸಲ ಸ್ವಸಹಾಯ ಸಂಘಗಳ ಸದಸ್ಯರ ಕುಟುಂಬದಲ್ಲಿ ಸಮಸ್ಯೆಗಳು ಉಂಟಾದರೆ ಅವುಗಳನ್ನು ಗಿರಿವಿಯಿಟ್ಟು ಹಣವನ್ನು ಸಾಲದ ರೂಪವಾಗಿ ಪಡೆಯುತ್ತಿರುವುದು ಕಂಡುಬರುತ್ತದೆ. ಅಥವಾ ಸದಸ್ಯರು ಕೋಳಿ, ದನ, ಕುರಿ, ಆಡು ಇತ್ಯಾದಿ ಸಾಕು ಪ್ರಾಣಿಗಳನ್ನು ಸಾಕಿ ಅವುಗಳನ್ನು ಬೆಳೆಸಿ ಸಂಖ್ಯೆ ಹೆಚ್ಚಿಸಿ ಅವಶ್ಯವಿದ್ದಾಗ ಮಾರಿ ಸಮಸ್ಯೆ ಬಗೆಹರಿಸಿಕೊಂಡು ಕುಟುಂಬಗಳ ನಿರ್ವಹಣೆಗೆ ಸಹಕಾರಿಯಾಗುತ್ತಾರೆ. ಹೀಗೆ ವಿವಿಧ ರೀತಿಯ

ಉಳಿತಾಯ ಮಾಡಿ ಸಂಕಷ್ಟಕ್ಕೆ ಉಪಯೋಗಿಸಿಕೊಳ್ಳಲು ಶೇಖರಿಸಿ ಕುಟುಂಬಗಳಿಗೆ ನೆರವಾಗುತ್ತಾರೆ.

ಇತ್ತೀಚಿನ ದಿನಗಳಲ್ಲಿ ಸ್ವಸಹಾಯ ಸಂಘಗಳನ್ನು ರಚಿಸಿ ಮಹಿಳೆಯರು ವಾರಕ್ಕೊಮ್ಮೆ ಉಳಿತಾಯ ಮಾಡಿ ವಿವಿಧ ಕ್ಷೇತ್ರಗಳಲ್ಲಿ ವಿಷಯಗಳ ಜ್ಞಾನ ಪಡೆದು ಅವಶ್ಯವಿರುವಾಗ ಸಾಲ ಪಡೆದು ಸುಲಭ ಕಂತಿನಲ್ಲಿ ಮರುಪಾವತಿ ಮಾಡಿ ತಮ್ಮ ಹಾಗೂ ಕುಟುಂಬದ ಏಳಿಗೆಗ ಜವಾಬ್ದಾರಿಯುತರಾಗಿ ಜೀವನ ಸಾಗಿಸುತ್ತಿರುತ್ತಾರೆ. ಇನ್ನು ಕೆಲವರು ಕೆಲವೊಂದು ಸಂಘಗಳಲ್ಲಿ ಸದಸ್ಯರ ಗಂಡಂದಿರು ಕುಡಿತಕ್ಕೊಳಗಾಗಿರುವುದು ಕಂಡುಬರುತ್ತದೆ. ಇವರು ತಮ್ಮ ಉಳಿತಾಯದ ಹಣವನ್ನು ಈ ರೀತಿ ದುಂದುವೆಚ್ಚ ಮಾಡುತ್ತಿರುವುದು ಕೆಲವೊಂದು ಸಂಘಗಳಲ್ಲಿ ಕಂಡುಬರುತ್ತದೆ. ಆದರೂ ಈ ಮಹಿಳೆಯರು ಗಂಡಂದಿರಿಗೆ ಕಾಣದೆ ಉಳಿತಾಯ ಮಾಡಿಕೊಂಡು ಬಂದಿರುವುದು ಕಾಣುತ್ತದೆ.

ಗುಂಪಿನ ಉಳಿತಾಯ ಮತ್ತು ಸಾಲ ಯೋಜನೆ

ಸ್ವ-ಶಕ್ತಿ ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸುವ ಸ್ವ-ಸಹಾಯ ಗುಂಪುಗಳ ಮುಖ್ಯವಾದ ಕೆಲಸವೆಂದರೆ, ಉಳಿತಾಯ ಯೋಜನೆಯನ್ನು ಮತ್ತು ಸಾಲ ಯೋಜನೆಯನ್ನು ಮಾಡಿ ಮಹಿಳೆಯರ ಜೀವನಕ್ಕೆ ಬೇಕಾಗುವ ಮಾರ್ಗವನ್ನು ರೂಪಿಸಲು ಈ ಯೋಜನೆ ಪ್ರಾರಂಭವಾಗಿದೆ. ಹಾಗೆಯೇ ತಮ್ಮ ಜೀವನ ಮತ್ತು ಕೆಲಸದ ಮೇಲೆ ನಿಯಂತ್ರಣ ಹೊಂದಲು ಹಾಗೂ ಬಡತನ ಮೀರಲು ಬೇಕಾದ ಬೆಂಬಲದ ಹಾದಿಯೆಂದರೆ ಈ ಬುಡಕಟ್ಟು ಮಹಿಳೆಯರ ಮತ್ತು ಇತರೆ ಹಿಂದುಳಿದ ಮಹಿಳೆಯರ ಉಳಿತಾಯ ಹಾಗೂ ಸಾಲ ಸೌಲಭ್ಯವನ್ನು ಪಡೆದುಕೊಳ್ಳುವುದು. ಈ ಉಳಿತಾಯ ಮತ್ತು ಸಾಲ ಸೌಲಭ್ಯದ ಯೋಜನೆಯನ್ನು ಈ ಸ್ವ-ಶಕ್ತಿ ಯೋಜನೆಯಲ್ಲಿ ಮಾತ್ರವಲ್ಲ ಪ್ರಪಂಚದಾದ್ಯಂತ ಎಲ್ಲಾ ಮಹಿಳಾ ಯೋಜನೆಯ ಸ್ವ-ಸಹಾಯ ಸಂಘಗಳಲ್ಲಿಯೂ ಕಂಡುಬರುತ್ತದೆ. ಈ ಮಹಿಳೆಯರ ಗುಂಪುಗಳು ಸದಸ್ಯರನ್ನು ಒಬ್ಬರನ್ನೊಬ್ಬರು ಚೆನ್ನಾಗಿ ಅರಿತುಕೊಳ್ಳಲು ಅವಕಾಶ ನೀಡತ್ತದೆ. ಹಾಗೆಯೇ ಒಬ್ಬರಿಗೊಬ್ಬರು ಬೆಂಬಲ ನೀಡಲು ಸಹಾಯ ಮಾಡುತ್ತದೆ. ಆದಾಯ ಉತ್ಪನ್ನ ಯೋಜನೆ ಪ್ರಾರಂಭಿಸುವ ಒಂದು ಸುಗಮ ಹಾದಿಯಾಗುತ್ತದೆ. ಉಳಿತಾಯ ಮತ್ತು ಸಾಲಸೌಲಭ್ಯದ ಮೂಲವಾಗಿರುವ ಗುಂಪು ಆ ಕೆಲಸದಲ್ಲಿ ಶಿಸ್ತು ಮತ್ತು ಕೌಶಲ್ಯತೆಯನ್ನು ಮೈಗೂಡಿಸಿಕೊಂಡಿರುತ್ತದೆ.

ಗುಂಪಿನ ಉಳಿತಾಯದಿಂದ ಮಹಿಳೆಯರನ್ನು ಮಾತ್ರವಲ್ಲ, ಜನರು ತಮ್ಮ ಭವಿಷ್ಯದ ಯೋಜನೆಗಳನ್ನು, ಬೇಡಿಕೆಗಳನ್ನು ತಯಾರಿಸುವಲ್ಲಿ ಮತ್ತು ಚಿಂತಿಸುವಲ್ಲಿ ದೂರದೃಷ್ಟಿ ಹರಿಸಲು ಸಹಾಯ ಮಾಡುತ್ತದೆ. ಯಾವ ಮನುಷ್ಯರಲ್ಲಿ ಉಳಿತಾಯ ಮಾಡಬೇಕೆನ್ನುವ ಗುಣವಿರುತ್ತದೆಯೋ ಅವರು ತಮ್ಮ ಆರ್ಥಿಕ ಸ್ಥಿತಿ ನಿರ್ವಹಣೆಯಲ್ಲಿ ಬಹಳ ಎಚ್ಚರದಿಂದಿರುತ್ತಾರೆ ಮತ್ತು ಸಾಲ ಪಡೆಯಬೇಕಾದರೆ ಹತ್ತಾರು ಸಾರಿ ನಮಗೆ ಸಾಲ ಏಕೆ ಬೇಕಾಗಿದೆ ಮತ್ತು ಅದನ್ನು ಹೇಗೆ ಮರುಪಾವತಿ ಮಾಡಬಹುದು, ಎಂಬುದನ್ನು ವಿಮರ್ಶಿಸುವ ಗುಣ ಹೊಂದಿರುತ್ತಾರೆ. ಉಳಿತಾಯವೆಂಬುದು

ಮಹಿಳೆಯರಿಗೆ ಸ್ವಲ್ಪ ಮಟ್ಟಿನ ರಕ್ಷಣೆಯನ್ನು ನೀಡುತ್ತದೆ. ಮತ್ತು ಕಷ್ಟಕಾಲಕ್ಕೆ ತಮ್ಮ ಹತ್ತಿರವು ಹಣವಿದೆ ಎಂದು ಗೊತ್ತಾಗುತ್ತದೆ. ಯಾವುದೇ ಯೋಜನೆಗಳ ಗುಂಪು ಸಫಲವಾಗಬೇಕಾದರೆ ಅದರ ಹಣಕಾಸಿನ ನಿರ್ವಹಣೆಯನ್ನು ಸರಿಯಾಗಿ ನಡೆಸುವ ಕೆಲಸದಲ್ಲಿ ಗುಂಪಿನ ಸದಸ್ಯರು ಸೇರಿಕೊಳ್ಳಬೇಕು.

ಕೂಡ್ಲಿಗಿ ತಾಲೂಕಿನಲ್ಲಿ ಸ್ವ-ಶಕ್ತಿ ಯೋಜನೆಯಡಿಯಲ್ಲಿ ರಚನೆಗೊಂಡ ಸ್ವಸಹಾಯ ಸಂಘಗಳು ಬ್ಯಾಂಕಿನಲ್ಲಿ ಉಳಿತಾಯದ ಮೊತ್ತ, ಸದಸ್ಯರ ಸಂಖ್ಯೆ, ವಾರ ಉಳಿತಾಯ, ಒಟ್ಟು ಸದಸ್ಯರ ಉಳಿತಾಯ ಹಾಗೂ ಸಾಲ ಸಂಪರ್ಕ ಬ್ಯಾಂಕಿನಿಂದ ಪಡೆದಿದ್ದಾರೆಯೇ ಅಥವಾ ಇಲ್ಲವೋ ಎಂಬುದುನ್ನು ಕೋಷ್ಟಕದ ಮೂಲಕ ನೋಡೋಣ

ಕ್ರ.ಸಂ.	ಗುಂಪಿನ ಹೆಸರು	ಸದಸ್ಯರ ಸಂಖ್ಯೆ	ವಾರ ಪ್ರತಿಯೊಬ್ಬರ ಉಳಿತಾಯ ರೂಪಾಯಿ	ಒಟ್ಟು ವಾರದ ಉಳಿತಾಯ ರೂಪಾಯಿ	ಒಟ್ಟು ಸಂಘದ ಉಳಿತಾಯ ಸಾವಿರ ರೂ.	ಬ್ಯಾಂಕಿನ ಸಾಲ ಸಂಪರ್ಕ
೧.	ಶ್ರೀ ವಾಲ್ಮೀಕಿ ಮ.ಸ್ವ.ಸ.ಸಂಘ ಹ್ಯಾಳ್ಯಾ	೧೭	೧೦	೧೭೦	೧೩,೦೦೦	ಇಲ್ಲ
೨.	ಶ್ರೀ ಜಗದಾಂಬಿಕ ಮ.ಸ್ವ.ಸ.ಸಂಘ ಹ್ಯಾಳ್ಯಾ	೧೯	೧೦	೧೯೦	೨೦,೦೦೦	ಆಗಿದೆ
೩.	ಶ್ರೀ ಮಲಿಯಮ್ಮ ಮ.ಸ್ವ.ಸ.ಸಂಘ ಬಣವಿಕಲ್ಲು	೧೯	೧೦	೧೯೦	೧೮,೦೦೦	ಆಗಿದೆ ೧೦,೦೦೦
೪.	ಶ್ರೀ ದುರುಗಮ್ಮ ಮ.ಸ್ವ.ಸ.ಸಂಘ ಬಣವಿಕಲ್ಲು	೧೯	೧೦	೧೯೦	೧೯,೦೦೦	ಆಗಿದೆ
೫.	ಶ್ರೀ ಸಾರಿದುರುಗಮ್ಮ ಮ.ಸ್ವ.ಸ.ಸಂಘ ಬಡೆಲಡುಕು	೧೭	೧೦	೧೭೦	೧೫,೩೦೦	ಆಗಿದೆ ೩೦೦೦೦
೬.	ದುರ್ಗಾದೇವಿ ಮ.ಸ್ವ.ಸ.ಸಂಘ ಶಿವಪುರ	೧೫	೧೦	೧೫೦	೧೫,೪೦೦	ಆಗಿದೆ ೧೫೦೦೦
೭.	ಶ್ರೀ ಉಡಸಲಮ್ಮ ಮ.ಸ್ವ.ಸ.ಸಂಘ	೧೮	೨೦	೩೬೦	೪೯೦೦೦	ಆಗಿದೆ ೭೭೦೦೦

	ಈಚಲಬೊಮ್ಮಗಹಳ್ಳಿ					
೮.	ಶ್ರೀ ಉಮಾದೇವಿ ಮ.ಸ್ವ.ಸ.ಸಂಘ ಮರಬ	೧೬	೧೦	೧೬೦	೧೪೦೦೦	ಇಲ್ಲ
೯.	ಶ್ರೀಹುಚ್ಚಂಗಿಯಲಮ್ಮ ಮ.ಸ್ವ.ಸ.ಸಂಘ ಮರಬ	೧೮	೧೦	೧೮೦	೧೫೦೦೦	ಆಗಿದೆ ೬೦೦೦೦
೧೦.	ಶ್ರೀ ದುರ್ಗಾಬಿಂಕ ಮ.ಸ್ವ.ಸ.ಸಂಘ ಉಲ್ಲಾನಹಳ್ಳಿ	೨೦	೧೦	೨೦೦	೪೪೦೦೦	ಆಗಿದೆ ೫೦೦೦೦
೧೧.	ಇಂದಿರಾಗಾಂಧಿ ಮ.ಸ್ವ.ಸ.ಸಂಘ ತಿಮ್ಮಲಾಪುರ ತಾಂಡ	೧೬	೧೦	೧೬೦	೧೨೦೦೦	ಇಲ್ಲ
೧೨.	ಶ್ರೀದೇವಿ ಮ. ಮ.ಸ್ವ.ಸ.ಸಂಘ ತಿಮ್ಮಲಾಪುರ	೧೯	೧೦	೧೯೦	೨೦೦೦೦	ಆಗಿದೆ
೧೩.	ಶ್ರೀ ದುರ್ಗಾದೇವಿ ಮ.ಸ್ವ.ಸ.ಸಂಘ ಗಂಗಮ್ಮನಹಳ್ಳಿ	೧೭	೧೦	೧೭೦	೨೦೦೦೦	ಇಲ್ಲ
೧೪.	ಶ್ರೀ ಗಾದ್ರಿಪಾಲಯ್ಯ ಮ.ಸ್ವ.ಸ.ಸಂಘ ಕಾಮಯ್ಯನ ಹಟ್ಟಿ	೨೦	೧೦	೨೦೦	೧೮೦೦೦	ಇಲ್ಲ
೧೫.	ಕಿತ್ತೂರುರಾಣಿ ಚೆನ್ನಮ್ಮ ಮ.ಸ್ವ.ಸ.ಸಂಘ ಸೂಲದಹಳ್ಳಿ	೧೩	೧೦	೧೩೦	೯೧೦೦	ಇಲ್ಲ
೧೬.	ಶ್ರೀ ವೇಣುಗೋಪಾಲಸ್ವಾಮಿ ಮ.ಸ್ವ.ಸ.ಸಂಘ ಗುಣಸಾಗರ	೨೦	೧೦	೨೦೦	೨೧೧೦೬	ಆಗಿದೆ ೧೭೦೦೦
೧೭.	ಶ್ರೀ ಬನಶಂಕರಿ ಮ.ಸ್ವ.ಸ.ಸಂಘ ಕುಪ್ಪನಕೇರಿ	೧೯	೧೦	೧೯೦	೧೫೩೯೦	ಇಲ್ಲ

ಇನ್ನು ಬೇರೆ ಸ್ವ-ಸಹಾಯ ಸಂಘಗಳಾದ ಸ್ವರ್ಣಜಯಂತಿ ಶಹರಿ ಯೋಜನೆಯಡಿಯಲ್ಲಿ ಈ ಸ್ವ-

ಸಹಾಯ ಸಂಘಗಳ ಉಳಿತಾಯ ಹೇಗಿದೆ ಎಂಬುದುನ್ನು ನೋಡಿದಾಗ

ಕ್ರ.ಸಂ.	ಗುಂಪಿನ ಹೆಸರು	ಸದಸ್ಯರ ಸಂಖ್ಯೆ	ವಾರ ಪ್ರತಿಯೊಬ್ಬರ ಉಳಿತಾಯ ರೂಪಾಯಿ	ಒಟ್ಟು ವಾರದ ಉಳಿತಾಯ ರೂಪಾಯಿ	ಒಟ್ಟು ಸಂಘದ ಉಳಿತಾಯ ಸಾವಿರ ರೂ.	ಬ್ಯಾಂಕಿನ ಸಾಲ ಸಂಪರ್ಕ
೧.	ಕಿತ್ತೂರುರಾಣಿ ಚೆನ್ನಮ್ಮ ಮ.ಸ್ವ.ಸ.ಸಂಘ ೭ನೇ ವಾರ್ಡ್ ಕೂಡ್ಲಿಗಿ ತಾ.	೧೩	೧೦	೧೩೦	೯೧೦೦	ಇಲ್ಲ
೨.	ಪ್ರಿಯದರ್ಶಿನಿ ಮ.ಸ್ವ.ಸ.ಸಂಘ ೪ನೇ ವಾರ್ಡ್ ಕೂಡ್ಲಿಗಿ	೧೦	೨೦	೨೦೦	೩೨೦೦೦	ಆಗಿದೆ ೨೪೦೦೦
೩.	ಶ್ರೀ ತಾಯಮ್ಮ ಮ.ಸ್ವ.ಸ.ಸಂಘ ೩ನೇ ವಾರ್ಡ್ ಕೂಡ್ಲಿಗಿ	೧೦	೧೦	೧೦೦	೧೭೦೦	ಆಗಿದೆ

ಈ ರೀತಿ ಮಹಿಳಾ ಸ್ವ-ಸಹಾಯ ಸಂಘಗಳಿಂದ ಉಳಿತಾಯ ಮತ್ತು ಬ್ಯಾಂಕಿನ ಸಾಲ ಸೌಲಭ್ಯ ಮಹಿಳಾ ಸ್ವ-ಸಹಾಯ ಸಂಘಗಳ ಸದಸ್ಯರ ಮೂಲಕ ತಿಳಿದುಕೊಳ್ಳಲಾಗಿದೆ. ಅದರಂತೆ ಸ್ವ-ಶಕ್ತಿ ಯೋಜನೆಡಿಯಲ್ಲಿ ರಚನೆಗೊಂಡ ೧೦೧ ಸ್ವ-ಸಹಾಯ ಸಂಘಗಳಲ್ಲಿ ೩೭ ಮ.ಸ್ವ.ಸಹಾಯ ಸಂಘಗಳನ್ನು ಮತ್ತು ಸ್ವರ್ಣ ಜಯಂತಿ ಶಹರಿ ಯೋಜನೆಯಡಿಯಲಲಿ ೩ ಮ.ಸ್ವ.ಸಹಾಯ ಸ್ವ-ಸಹಾಯ ಸಂಘಗಳನ್ನು ಮಾತ್ರ ಅಧ್ಯಯನಕ್ಕೆ ಅಳವಡಿಸಿಲಾಗಿದೆ.

ನಮ್ಮ ಕರ್ನಾಟಕದಲ್ಲಿ ಈ ಮಹಿಳಾ ಸ್ವ-ಸಹಾಯ ಸಂಘಗಳು ಬಹಳ ಗುರುತರವಾದ ಪಾತ್ರವಹಿಸುತ್ತವೆ. ಈ ಸಂಘಗಳು ಮಹಿಳೆಯರ ಬದುಕಿನಲ್ಲಿ ಹೊಸ ಚೈತನ್ಯ ತುಂಬಿ ಉಳಿತಾಯದ ಮನೋಭಾವ ಬೆಳಸಿವೆ ಎಂದು ಹೇಳಬಹುದು. "ಇವು ಕರ್ನಾಟಕದಲ್ಲಿ ೯ ಜಿಲ್ಲೆಗಳಲ್ಲಿ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತವೆ. ಇವುಗಳಿಂದ ೯ ಕೋಟಿ ಉಳಿತಾಯ ಆಗಿದೆ. ಹಾಗೆಯೇ ಈ ಯೋಜನೆಗಾಗಿ ಸರಕಾರ ೫೦ ಕೋಟಿ ರೂಪಾಯಿ ಬಜೆಟ್ ಉಳಿಸಿದೆ. ಇಂತಹ ವಿಶೇಷ ಯೋಜನೆಗಳಿಂದ ಮಹಿಳೆಯರ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ". (ವಿಜಯ ಕರ್ನಾಟಕ ದಿನಪತ್ರಿಕೆ ಏ.೭).

ಸ್ವ-ಶಕ್ತಿ ಯೋಜನೆಯಲ್ಲಿರುವ ಕೂಡ್ಲಿಗಿ ತಾಲೂಕಿನ ಮಹಿಳಾ ಸ್ವಸಹಾಯ ಸಂಘಗಳು ಯಾವ

ಸಂಘ ಯಾವ ಬ್ಯಾಕಿನಿಂದ ಸಾಲ ಸಂಪರ್ಕ ಪಡೆದುಕೊಂಡಿದೆ. ಹಾಗೆಯೇ ಎಷ್ಟು ಪಡೆದುಕೊಂಡಿದೆ ಎಂಬುದನ್ನು ಕೆಳಗಿನ ಕೋಷ್ಟಕದಲ್ಲಿ ನೋಡಬಹುದು.

ಕ್ರ. ಸಂ.	ಸಂಘದ ಹೆಸರು	ಊರು	ಪಡೆದ ಸಾಲದ ಮೊತ್ತ	ಬ್ಯಾಂಕನ ಹೆಸರು ಮತ್ತು ಊರು
೧.	ಶ್ರೀ ಉಮಾದೇವಿ ಮ. ಸ್ವ. ಸ. ಸಂಘ	ಮರಬ	೮೦.೦೦೦	ವ್ಯವಸಾಯ ಸೇವಾ ಸಹಕಾರ ಸಂಘ ನಿ, ಮರಬ
೨.	ಹುಚ್ಚಂಗಿಯಲ್ಲಮ್ಮ ಮ. ಸ್ವ ಸ. ಸಂಘ	ಮರಬ	೭೬,೦೦೦	ವ್ಯವಸಾಯ ಸೇವಾ ಸಹಕಾರ ಸಂಘ ನಿ, ಮರಬ
೩.	ಕೊಂಡದ ಜಾಲಮ್ಮ ಮ. ಸ್ವಸ. ಸಂಘ	ಮರಬ	೫೦,೦೦೦	ವ್ಯವಸಾಯ ಸೇವಾ ಸಹಕಾರ ಸಂಘ ನಿ, ಮರಬ
೪.	ಶ್ರೀ ಗಾದ್ರಿಪಾಲಯ್ಯ ಮ. ಸ್ವ ಸ.ಸಂಘ	ಕಾಮಯ್ಯನಹಟ್ಟಿ	೪೦,೦೦೦	ಸ್ಟೇಟ್ ಬ್ಯಾಂಕ್ ಆಫ್ ಮೈಸೂರು. ಕೂಡ್ಲಿಗಿ.
೫.	ಶ್ರೀ ಮಲಿಯಮ್ಮ ಮ. ಸ್ವ ಸ. ಸಂಘ	ಬಣವಿಕಲ್ಲು	೧೨,೦೦೦	ತುಂಗಭದ್ರಾ ಗ್ರಾಮೀಣ ಬ್ಯಾಂಕ್, ಬಣವಿಕಲ್ಲು
೬.	ದುರುಗಮ್ಮ ಮ. ಸ್ವ ಸ. ಸಂಘ	ಬಣವಿಕಲ್ಲು	೧೦,೦೦೦	ತುಂಗಭದ್ರಾ ಗ್ರಾಮೀಣ ಬ್ಯಾಂಕ್, ಬಣವಿಕಲ್ಲು
೭.	ಶ್ರೀ ದುರ್ಗಾಂಬಿಕ ಮ. ಸ್ವ ಸ. ಸಂಘ	ಉಲ್ಲಾನಹಳ್ಳಿ	೫೦,೦೦೦	ತುಂಗಭದ್ರಾ ಗ್ರಾಮೀಣ ಬ್ಯಾಂಕ್, ಬಣವಿಕಲ್ಲು
೮.	ಶ್ರೀ ಮದಗಾಂಬಿಕ ಮ. ಸ್ವ ಸ. ಸಂಘ	ಗುಣಸಾಗರ	೪೦,೦೦೦	ತುಂಗಭದ್ರಾ ಗ್ರಾಮೀಣ ಬ್ಯಾಂಕ್, ಬಣವಿಕಲ್ಲು
೯.	ಶ್ರೀ ದುರುಗಮ್ಮ ಮ. ಸ್ವ ಸ. ಸಂಘ	ಗುಣಸಾಗರ	೪೦,೦೦೦	ತುಂಗಭದ್ರಾ ಗ್ರಾಮೀಣ ಬ್ಯಾಂಕ್, ಬಣವಿಕಲ್ಲು
೧೦.	ಶ್ರೀ ವೇಣುಗೋಪಾಲ ಸ್ವಾಮಿ ಮ. ಸ್ವ ಸ. ಸಂಘ	ಗುಣಸಾಗರ	೪೦,೦೦೦	ತುಂಗಭದ್ರಾ ಗ್ರಾಮೀಣ ಬ್ಯಾಂಕ್, ಬಣವಿಕಲ್ಲು

ಬಳ್ಳಾರಿ ಜಿಲ್ಲೆಯಲ್ಲಿ ಸ್ವ-ಸಹಾಯ ಗುಂಪುಗಳಿಗೆ ಆರ್ಥಿಕ ನೆರವು ಹಾಗೂ ಸಾಲ ಸಂಪರ್ಕವನ್ನು ಬ್ಯಾಂಕುಗಳು ಯಾವ ಪ್ರಮಾಣದಲ್ಲಿ ನೀಡುತ್ತವೆ ಎಂಬುದನ್ನು ಕೋಷ್ಟಕದ ಮೂಲಕ ನೋಡೋಣ.

ಕ್ರ.ಸಂ.	ಬ್ಯಾಂಕುಗಳು	ಗುಂಪುಗಳು	ಸಾಲ ಸಂಪರ್ಕದ ಮೊತ್ತ ರೂ.
೧.	ವಾಣಿಜ್ಯ ಬ್ಯಾಂಕುಗಳು	೬೮	೦-೭೫ ಕೋಟಿ
೨.	ತುಂಗಭದ್ರಾ ಗ್ರಾಮೀಣ ಬ್ಯಾಂಕು	೪೬೮	೩-೩೦ ಕೋಟಿ
	ಒಟ್ಟು	೫೩೬	೪-೦೫ ಕೋಟಿ

ಮುಂದಿನ ವರ್ಷಕ್ಕೆ ೨೦೦೧-೦೨ ರಾಜ್ಯದಲ್ಲಿ ಸಾಲ ಸಂಪರ್ಕದ ಗುರಿ ೧೨,೦೦೦ ಗುಂಪುಗಳಿದ್ದು ರೂ ೮೦,೦೦೦ ಕೋಟಿಯ ಪುನರ್‌ಧನ ಸೇರಿದೆ. ಇದರಲ್ಲಿ ೯೪% ಮಹಿಳಾ ಗುಂಪುಗಳಿರುತ್ತವೆ. ಮಹಿಳಾ ಗುಂಪುಗಳಲ್ಲಿ ೯೭% ಗ್ರಾಮೀಣ ಮಹಿಳಾ ಗುಂಪುಗಳು, ಉಳಿದ ೫% ಮಹಿಳಾ ಗುಂಪುಗಳು ಪಟ್ಟಣ ಮತ್ತು ಅರೆ ಪಟ್ಟಣ ಪ್ರದೇಶಕ್ಕೆ ಸಂಬಂಧ ಪಟ್ಟಿರುತ್ತವೆ. ಅಂದರೆ ಇಲ್ಲಿ ಸ್ವ ಸಹಾಯ ಗುಂಪುಗಳೆಂದರೆ ಸಮಷ್ಠಿಯಲ್ಲಿ ಗ್ರಾಮೀಣ ಮಹಿಳಾ ಗುಂಪುಗಳೆಂದರೆ ಗ್ರಹಿಸಲಾಗಿದೆ. (ಪು. ೨೭ ವೆಂಕಟಯ್ಯ ಅಪ್ಪಗೆರೆ, ೨೦೦೨).

ಗ್ರಾಮೀಣ ಮಹಿಳೆಯರು ಮತ್ತು ಸ್ವ ಸಹಾಯ ಸಂಘಗಳು

ಅಭಿವೃದ್ಧಿ ಮುಖ್ಯ ವಾಹಿನಿಯಲ್ಲಿ ಮಹಿಳೆಯರನ್ನು ಅದರಲ್ಲೂ ಬುಡಕಟ್ಟು ಮಹಿಳೆಯರು ಹಾಗೂ ಇತರೆ ಗ್ರಾಮೀಣ ಪ್ರದೇಶದಲ್ಲಿನ ಆರ್ಥಿಕವಾಗಿ ಹಿಂದುಳಿದ ಮಹಿಳೆಯರನ್ನು ಸಮಗ್ರಗೊಳಿಸುವುದು ಮಾನವ ಹಕ್ಕುಗಳ ಮತ್ತು ಸಾಮಾಜಿಕ ನ್ಯಾಯದ ಪ್ರತಿಪಾದನೆಯಾಗುತ್ತದೆ. ಮಹಿಳೆಯರ ಸರ್ವತೋಮುಖ ಅಭಿವೃದ್ಧಿ ಸಾಧನೆಗೆ ಸಮಾನತೆ, ಸಶಕ್ತತೆ, ಹಕ್ಕೊತ್ತಾಯ ಮತ್ತು ಸೌಲಭ್ಯಗಳ ಪೂರ್ಣ ಉಪಯೋಗದಂತಹ ಪ್ರಗತಿಪರ ಧೋರಣೆಗಳು, ಯೋಜನೆಗಳು ಬಹುಮುಖ್ಯ. ಅವುಗಳ ಸಾಫಲ್ಯತೆಯ ಬಗ್ಗೆ ನಿರಂತರ ನಿಗಾವಣೆ ಅತ್ಯಾವಶ್ಯಕ. ಇವುಗಳ ಅನುಷ್ಠಾನ ಮತ್ತು ಫಲಕಾರಿಯಾಗುವುದಕ್ಕೆ ಮಹಿಳೆಯರನ್ನು ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸುವುದು ಕಾರ್ಯಸಾಧನೆಯ ಪ್ರಮುಖ ರಂಗ. ಮಹಿಳೆ-ಪುರುಷ ವರ್ಗದಲ್ಲಿ ಮೂಲಭೂತವಾಗಿ ಜೈವಿಕ ಭಿನ್ನತೆಗಳಿವೆ ವಿನಾ ಅಸಮಾನತೆ ಅಂತರಗಳಲ್ಲ. ಮಹಿಳಾಭಿವೃದ್ಧಿಯನ್ನು ಪ್ರತಿಪಾದಿಸಿದಾಗ ಪುರುಷ ಶಾಹಿಯನ್ನು ಪ್ರತಿಭಟಿಸುವುದೇ ವಿನಾ ಪುರುಷ ವರ್ಗವನ್ನಲ್ಲ ಎಂಬುದನ್ನು ಇಲ್ಲಿ ಸ್ಪಷ್ಟಗೊಳಿಸಲಾಗಿದೆ.

"ಮಹಿಳೆಯರನ್ನು ಜನಸಂಖ್ಯಾಸೂಚಿ ಘಟಕವೆಂದು ಅಥವಾ ಸಾಮಾಜಿಕ ಘಟಕವೆಂದು ಪರಿಭಾವಿಸಬೇಕು. ಆಕೆ ಪುರುಷನೊಡನೆ ಸರಿ ಸಮಾನ ಜೈವಿಕ ಸಂಗಾತಿ, ಸಹಬಾಳ್ವೆಯಲ್ಲಿರುವ ಸಹಭಾಗಿನಿ. ಆರ್ಥಿಕ ಚಟುವಟಿಕೆಯಲ್ಲಿ ಪಾಲುದಾರಳು, ಅಷ್ಟೇ ಕ್ರಿಯಾಶೀಲಳು.

ಈ ಸಂಬಂಧದಲ್ಲಿ ಪ್ರಸಿದ್ಧ ಅರ್ಥಶಾಸ್ತ್ರಜ್ಞ ಅಮರ್ತ್ಯಸೇನರ ವಿಚಾರಗಳು ಹೀಗಿವೆ

"ಅಮರ್ತ್ಯಸೇನ್ ರವರು ತಮ್ಮ ಒಂದು ಅಧ್ಯಾಯದಲ್ಲಿ ಲಿಂಗ ಸಂಬಂಧಗಳಲ್ಲಿ ಅಸಮಾನತೆ ಮತ್ತು ಮಹಿಳೆಯರ ದುಃಖಸ್ಥಿತಿಯನ್ನು ಭಾರತದ ಬಹು ಗಂಭೀರ ಸಾಮಾಜಿಕ ವೈಫಲ್ಯತೆಗಳು ಎಂದು ಕರೆದಿದ್ದಾರೆ. ಮಹಿಳೆಯರು ತಮ್ಮನ್ನು ತಾವು ದಮನಿತರು, ಅಧೀನರು ತಾವು ದುಡಿಮೆಗಾರರಲ್ಲ, ತಾವು ಗಳಿಕೆದಾರರಲ್ಲ, ತಾವು ಅವಲಂಬಿತರು, ತನ್ನ ಕಾಣಿಕೆ ಕುಟುಂಬಕ್ಕೆ ಅಥವಾ ಆರ್ಥಿಕತೆಗೆ ಏನೇನೂ ಇಲ್ಲ ಎಂಬ ಪೂರ್ವಗ್ರಹ ನಂಬಿಕೆಯಿಂದ ನರಳುತ್ತಿದ್ದಾರೆ. ಹೀಗೆ ಮಹಿಳೆಯರು ತಮ್ಮನ್ನು ತಾವೇ ಏಕೆ ಹೀಗೆ ಭಾವಿಸಿಕೊಳ್ಳುತ್ತಾರೆ? ಇದಕ್ಕೆ ಅಮರ್ತ್ಯಸೇನ್ ಉತ್ತರ ನೀಡಿದ್ದಾರೆ.

* ತಮ್ಮ ಹಿತಾಸಕ್ತಿಗಳ ಬಗೆಗಿನ ಅರಿವು.

* ಆರ್ಥಿಕತೆಗೆ ಕುಟುಂಬಕ್ಕೆ ತಮ್ಮ ಕಾಣಿಕೆ ಕೊಡುಗೆ ಬಗ್ಗೆ ಅರಿವು.

ನಮ್ಮ ಸಮಾಜದ ಸಂದರ್ಭದಲ್ಲಿ ಮಹಿಳೆಯರಿಗೆ ಸ್ವ-ಹಿತಾಸಕ್ತಿಯೆಂಬುದು ಇಲ್ಲವೆ ಇಲ್ಲ ಎನ್ನುವ ಭಾವನೆ ಮನಸ್ಸಿನಲ್ಲಿ ಮಡುಗಟ್ಟಿಕೊಂಡಿದೆ". (ಪು. ೩೨ ಮ ಆರ್ಥಿಕತೆ ಮತ್ತು ಆರ್ಥಿಕ ಅಭಿವೃದ್ಧಿ, ಟಿ.ಆರ್.ಚಂದ್ರಶೇಖರ).

ಸ್ವ-ಹಿತಾಸಕ್ತಿಯ ಅರಿವು ಮಹಿಳೇಯರಲ್ಲಿ ಇಲ್ಲಟರುವುದು ಮತ್ತು ಸಮಾಜಕ್ಕೆ ತಮ್ಮ ಕಾಣಿಕೆ ಏನೇನೂ ಇಲ್ಲ ಎಂದು ಭಾವಿಸಿರುವುದೇ ಮಹಿಳೆಯರ ಅಧೀನ ಸ್ಥಿತಿಗೆ, ಕೀಳು ಸ್ಥಾನಮಾನಕ್ಕೆ, ಅನಾದರಣೆಗೆ ಕಾರಣವಾಗಿದೆ. ನಮ್ಮ ಸಮಾಜದ ಸಂದರ್ಭದಲ್ಲಿ ಮಹಿಳೆಯರು ಸ್ವ-ಹಿತಾಸಕ್ತಿಗಿಂತ ಪರರ ಹಿತಾಸಕ್ತಿಗಾಗಿ ಬದುಕುವುದು ಸಾಮಾನ್ಯ. ಹೀಗೆ ಬದುಕುವುದು ಆದರ್ಶ ಹೆಣ್ಣಿನ, ತಾಯಿಯರ ಲಕ್ಷಣ ಎನ್ನಲಾಗಿದೆ. ಮಹಿಳೆಯರಿಗೆ ಸಂಬಂಧಿಸಿದಂತೆ 'ನಾವು' ಎಂಬ ಗುಣವಿದೆಯೇ ವಿನಾ 'ನಾನು' ಎಂಬ ಗುಣ ಅಲ್ಲಿಲ್ಲ ಎಂದು ಹೇಳಿದ್ದಾರೆ (ಪು ೩೨ ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ-ಟಿ.ಆರ್.ಚಂದ್ರಶೇಖರ) ಮಹಿಳೆಯರು ತಮ್ಮ ಬಗ್ಗೆ ಒಂದು ಬಗೆಯ ಅನಾಸಕ್ತಿ ಧೋರಣೆ ತಳೆಯುವುದಕ್ಕೆ ಅನೇಕ ಕಾರಣಗಳಿವೆ. ಮಹಿಳೆಯರು ಹಾಗೆ ಯೋಚಿಸುವಂತೆ ಮಾಡುವ ಸಾಮಾಜೀಕರಣ ಪ್ರಕ್ರಿಯೆಯು ಕುಟುಂಬದಲ್ಲಿ ಜಾಗೃತವಾಗಿರುತ್ತದೆ. ಹೆಣ್ಣು ಮಗುವೊಂದು ತಾಯಿಯಾಗಿ ರೂಪಗೊಳ್ಳಲು ಅಗತ್ಯವಾದ ಸಾಮಾಜೀಕರಣ ಪ್ರಕ್ರಿಯೆಯನ್ನು ಸಮಾಜವು ರೂಪಿಸಿ ಬಿಟ್ಟಿರುತ್ತದೆ. ಈ ಬಗೆಯ ಭಾವನೆಯಿಂದಾಗಿ ಕುಟುಂಬದಲ್ಲಿ ಹಾಗೂ ಸಂಘರ್ಷದ ದಾರಿಯನ್ನು ಅವರು ಆಯ್ಕೆ ಮಾಡಿಕೊಳ್ಳುವುದಿಲ್ಲ. ಇದನ್ನು ಅಮರ್ತ್ಯಸೇನ್ ಸಹಕಾರವಾದಿ ಸಂಘರ್ಷವೆಂದು ಕರೆದಿದ್ದಾರೆ".(ಅದೆ ಪುಟ ೩೨ ಮ. ಆರ್ಥಿಕ ಮತ್ತು ಅಭಿವೃದ್ಧಿ, ಟಿ.ಆರ್.ಚಂದ್ರಶೇಖರ)

ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರ ಸ್ವ-ಸಹಾಯ ಸಂಘಗಳು ಒಂದು ಸ್ಥಳೀಯ ಮಟ್ಟದಲ್ಲಿ ಮಿನಿ ಬ್ಯಾಂಕಿನಂತೆ ಕೆಲಸ ಮಾಡುತ್ತವೆ. ಸದಸ್ಯರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯನ್ನು ರೂಪುಗೊಳಿಸಲು ಕಾರಣೀಭೂತವಾಗಿವೆ. ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರು ಉಳಿತಾಯ ಮಾಡುವುದರಿಂದ ಬಡಜನರ ಬಡತನ ಸ್ವಲ್ಪ ಮಟ್ಟಿಗಾದರೂ ನಿವಾರಣೆಯಾಗಿದೆ ಎಂದು ಹೇಳಬಹುದು. ಸಾಲ ಚಟುವಟಿಕೆಗಳಿಗೆ ಹಾಗೂ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಬೆಳವಣಿಗೆಗೆ ಈ ಸ್ವ-ಸಹಾಯ ಸಂಘಗಳು ಕಾರಣವಾಗಿರುವುದು ಕಂಡು ಬರುತ್ತದೆ. ತಮ್ಮ ಅನುಕೂಲಕ್ಕಾಗಿ ಗ್ರಾಮೀಣ ಪ್ರದೇಶದ ಬಡ ಕುಟುಂಬಗಳ ಮಹಿಳೆಯರು ಒಟ್ಟಾಗಿ ಸೇರಿ ಸ್ವ-ಸಹಾಯ ಸಂಘಗಳನ್ನು ಕಟ್ಟಿ ಪ್ರತಿವಾರ ಉಳಿತಾಯ ಮಾಡುವುದರ ಮೂಲಕ ತಮ್ಮದೇ ಆದ ಬಂಡವಾಳವನ್ನು ಸಂಘದಲ್ಲಿ ಹೂಡಿ, ಈ ಬದಲಿ ಸಾಲ ವ್ಯವಸ್ಥೆಯಿಂದ ತಮ್ಮ ಕುಟುಂಬದ ರಕ್ಷಣೆಯನ್ನು ತಾವೇ ಮಾಡಿಕೊಳ್ಳುವು

ದಲ್ಲದೇ, ತಮಗೆ ಬೇಕಾದ ಅವಶ್ಯಕ ಸಾಲ ಸೌಲಭ್ಯಗಳನ್ನು ಹೆಚ್ಚು ತೊಂದರೆಗಳಿಲ್ಲದೆಯೇ ಸಕಾಲದಲ್ಲಿ ಪಡೆದು, ತೊಂದರೆ ತಾಪತ್ರಯಗಳನ್ನು ನೀಗಿಸಿಕೊಳ್ಳುವುದರಲ್ಲಿ ಸಂಶಯವೇ ಇಲ್ಲ.

ಅಭಿವೃದ್ಧಿಯಲ್ಲಿ ಮಹಿಳೆ - ಡಾ. ಅಮರ್ತ್ಯಾಸೇನ್‌ರವರ ಒಂದು ವಿಚಾರಧಾರಣೆ

ಅಭಿವೃದ್ಧಿಯು ಪ್ರಾಥಮಿಕವಾಗಿ, ಸಮಾಜದಲ್ಲಿನ ಮಾನವ ಜೀವಿಯ ಹಿತದೃಷ್ಟಿಯಿಂದ ಆ ಸಮಾಜದ ಏಳಿಗೆಯನ್ನು ಅನುಸರಿಸಿ ನಡೆಯಬೇಕಾದ ಹಾಗೂ ಆ ಸಮಾಜದ ಒಟ್ಟಾರೆ ಬದಲಾವಣೆಯನ್ನು ತರುವಂತಹ ಪ್ರಕ್ರಿಯೆಯಾಗಿ ಕಂಡುಬರುತ್ತದೆ. ಈ ಅಭಿವೃದ್ಧಿ ಪ್ರಕ್ರಿಯೆಗೆ ಹಲವಾರು ಅಂಶಗಳು ಅಥವಾ ವಿಚಾರಗಳು ಮುಖ್ಯವಾಗುತ್ತವೆ. ಅಲ್ಲದೆ ಆ ಮುಖ್ಯ ಅಂಶಗಳು ಆಯಾ ಸಮಾಜದ ಅಭಿವೃದ್ಧಿಯನ್ನು ಅಳೆಯುವಲ್ಲಿ ಸೂಚ್ಯಾಂಕಗಳಾಗಿ ಕಂಡುಬರುತ್ತವೆ. ಅವುಗಳೆಂದರೆ:

* ವಿದ್ಯಾಭ್ಯಾಸದ ಮಟ್ಟ, ಶಿಕ್ಷಣ ಅಥವಾ ಸಾಕ್ಷರತೆ ಮುಂತಾಗಿ.
* ಸಾಮಾಜಿಕ ವಿಚಾರಗಳು
* ಆರ್ಥಿಕ ವಿಚಾರಗಳು
* ರಾಜಕೀಯ ವಿಚಾರಗಳು
* ತಾಂತ್ರಿಕ ವಿಚಾರಗಳು

ಈ ಎಲ್ಲಾ ದಿಕ್ಕುಗಳಲ್ಲಿ ಆಗುವಂತಹ ಅಭಿವೃದ್ಧಿ ಒಂದು ಬದಲಾವಣೆಯ ಪ್ರಕ್ರಿಯೆಯಾಗಿದೆ, ಈ ಎಲ್ಲಾ ವಿಷಯಗಳು ಜೀವನದ ಮಟ್ಟವನ್ನು ನಿರ್ಧರಿಸುವ ಹಾಗೂ "Level of living and level of welfare"ನ್ನು ಗುರುತಿಸುವಂತಹುಗಳಾಗಿವೆ. ಇವೆಲ್ಲವುಗಳನ್ನು ಈ ಚಿತ್ರಣ ಒಳಗೊಂಡಿರುತ್ತದೆ. ಈ ಮೇಲೆ ಹೇಳಿದ ಸೂಚ್ಯಾಂಕಗಳಲ್ಲಿ ಮುಖ್ಯವಾಗಿ ಸ್ವಾಭಾವಿಕವಾಗಿ ಮೂಲಧಾತು ಅಥವಾ ವಸ್ತುವಾದವೆಂದರೆ.

* ಜನಸಂಖ್ಯೆ ವಿವರಣೆಗಳು

ಉದಾ : ಲಿಂಗ ಪ್ರಮಾಣ, ಮರಣ ಪ್ರಮಾಣ; ಜನನ ಪ್ರಮಾಣ, ಜೀವನಾವದಿ ಮುಂತಾದವುಗಳನ್ನು ಒಳಗೊಂಡಿರುತ್ತದೆ.

* ಸಾಮಾಜಿಕ ಮತ್ತು ಆರ್ಥಿಕ ರಚನೆ
* ಆಸ್ತಿಯ ಹಂಚಿಕೆ ಅಥವಾ ಅಧಿಕಾರದ ಹಂಚಿಕೆ
* ಕೌಟುಂಬಿಕ ಸಂಘಟನೆ

* ಗುಂಪು ಗುಂಪಿನ ನಡುವಿನ ಸಂಬಂಧಗಳು

* ಆರ್ಥಿಕ ಹಾಗೂ ಔದ್ಯೋಗಿಕ ರಚನೆ

* ವಿಶಾಲವಾದ ಸಾಮಾಜಿಕ ಚಲನೆ

ಸುಲಭವಾಗಿ ಬದಲಾವಣೆ ಹೊಂದುವಂತಹ ಯಾವುದೇ ಪಾತ್ರಗಳು ಯೂನಿಯನ್, ಸ್ವಯಂ ಸೇವಾ ಸಂಸ್ಥೆಗಳು ನಿರ್ವಹಿಸುವ ಸೇವಾ ಸೌಲಭ್ಯಗಳು ನೇರವಾಗಿ ಸಾಮಾಜಿಕ ಸಂಸ್ಥೆಗಳನ್ನು ತಲುಪುವಂತೆ ಇರಬೇಕು. ಹಾಗೂ ಸಾಂಪ್ರದಾಯಿಕ ನಂಬಿಕೆಗಳು ಹಾಗೂ ಮೌಲ್ಯಗಳು, ಆಡಳಿತ ಮತ್ತು ರಾಜಕೀಯ ಪದ್ಧತಿಗಳು ಇವೆಲ್ಲವೂ ಒಂದು ರೀತಿಯಲ್ಲಿ ಸಮಾಜದಲ್ಲಿ ಪರಿಗಣನೆಗೆ ಕಾಣಸಿಗುವಂತವೇ ಆಗಿವೆ. ಇನ್ನು ಕೆಲವು ಕಣ್ಣಿಗೆ ಕಂಡರೂ ಅವುಗಳನ್ನು ಮೌಲೀಕರಿಸುವುದಾಗಲೀ, ಒಟ್ಟುಗೂಡಿಸಿ ಗಾತ್ರದಲ್ಲಿ ನೋಡಲು ಸಾಧ್ಯವಾಗುವುದಿಲ್ಲ. ಉದಾ ಸಾಮಾಜಿಕ ನಿಷೇಧಗಳು, ಅಗೋಚರ ದುಡಿಮೆ, ಸೇವೆಗಳು ಶೋಷಣೆಗಳು, ದೈಹಿಕ ಹಾಗೂ ಮಾನಸಿಕ ಹಿಂಸೆ ಇಂತಹ ಹಲವು ರೀತಿಯ ವಿಚಾರಗಳು ಸರಿಯಾಗಿ Quantity ಮಾಡುವುದಕ್ಕೆ ಸಿಗುವುದಿಲ್ಲ, ಕಣ್ಣಿಗೆ ಕಂಡರು ಅವುಗಳನ್ನು Quantity ಮಾಡಲಿಕ್ಕೆ ಆಗುವುದಿಲ್ಲ. ಹೀಗೆ ಅಭಿವೃದ್ಧಿಯ ಸೂಚ್ಯಾಂಕಗಳು ಒಂದು ಸಮಾಜದ ಒಂದು ಕುಟುಂಬದ ಬಗ್ಗೆ ಇರುವ ಎಲ್ಲಾ ರೀತಿಯ ಏರು ಪೇರುಗಳನ್ನು ತಿಳಿಸುವಂತಹ ಅಂಶಗಳಾಗಿ ಕಂಡುಬರುತ್ತವೆ.

ಮತ್ತೊಂದು ಮುಖ್ಯ ವಿಚಾರವೆಂದರೆ ಅಭಿವೃದ್ಧಿಯನ್ನು ಅಳೆಯುವಲ್ಲಿ ಮತ್ತೊಂದು ಮುಖ್ಯ ಅಂಶ ಪ್ರಾದೇಶಿಕ ಅಸಮಾನತೆ ಎಂಬುದಾಗಿ ಡಾ. ಅಮರ್ತ್ಯಾಸೇನ್ ರವರ ಅಭಿಪ್ರಾಯವಾಗಿರುತ್ತದೆ. ಭಾರತರತ್ನ ಹಾಗೂ ನೋಬೆಲ್ ಪ್ರಶಸ್ತಿ ವಿಜೇತ ಖ್ಯಾತ ಅರ್ಥಶಾಸ್ತ್ರಜ್ಞ ಮೀಮಾಂಸಕರಾದ ಡಾ. ಅಮರ್ತ್ಯಾಸೇನ್‌ರವರು ಇದಕ್ಕೆ ಹೆಚ್ಚಿನ ಒತ್ತುಕೊಟ್ಟು ಹೇಳುವುದೇನೆಂದರೆ ವರಮಾನಮುಖಿ ಅಭಿವೃದ್ಧಿ ಸೂಚ್ಯಾಂಕಗಳಾದ ದೇಶದ ಆಂತರಿಕ ಉತ್ಪನ್ನ ಪ್ರತಿ ತಲಾ ಉತ್ಪನ್ನ, ಕೈಗಾರಿಕಾ ಬಂಡವಾಳ, ಭೂ ಇಳುವರಿ, ಮುಂತಾದವು ಹಾಗೂ ಮಾನವ ಅಭಿವೃದ್ಧಿ ಸೂಚ್ಯಾಂಕಗಳಾದ ಸಾಕ್ಷರತೆ, ಆರೋಗ್ಯ, ಶಿಶುಮರಣ ಪ್ರಮಾಣ, ತಾಯಿಂದಿರ ಮರಣ ಪ್ರಮಾಣ, ಕುಡಿಯುವ ನೀರಿನ ಸೌಲಭ್ಯ ಹಾಗೂ ದುಡಿಯುವ ವರ್ಗ ಮುಂತಾದವುಗಳು. ಈ ಯಾವುದೇ ಸೂಚ್ಯಾಂಕ ಬಳಸಿಯೂ ದೇಶದಲ್ಲಿ ಅಬಿವೃದ್ಧಿಗೆ ಸಂಬಂಧಿಸಿದಂತೆ ಈ ವಿಚಾರಗಳನ್ನು ಮೂಲಭೂತವಾಗಿ ತೆಗೆದುಕೊಳ್ಳಲಾಗಿದೆ, ಎಂದಿದ್ದಾರೆ. ಡಾ. ಅಮರ್ತ್ಯಾಸೇನ್‌ರವರ ಪ್ರಕಾರ ಅಭಿವೃದ್ಧಿ ಎಂದರೆ ಅಕ್ಷರ, ಆರೋಗ್ಯ, ಆಹಾರ ಮುಂತಾದವುಗಳು ಜನರಿಗೆ ದೊರೆಯುವಂತೆ ಮಾಡುವುದೇ ಅಭಿವೃದ್ಧಿ ಎನ್ನುತ್ತಾರೆ. ಇಂತಹ ನೆಲೆಗಳು ಸಹಜವಾಗಿ ಸಮಾಜದ ಉನ್ನತ ವರ್ಗದ ಹಿತಾಸಕ್ತಿಗಳನ್ನು ಈಡೇರಿಸುವಲ್ಲಿ ಕ್ರಿಯಾಶೀಲವಾಗಿರುತ್ತವೆ. ಆದರೆ ಪ್ರದೇಶಿಕ ಅಸಮಾನತೆಗಳು ಮಾನವಮುಖಿ ಅಭಿವೃದ್ಧಿಯನ್ನು ಬಯಸುತ್ತವೆ. ಮಾನವಮುಖಿ

ಅಭಿವೃದ್ಧಿ ಕ್ರಮಗಳು ಜನಮುಖಿಯೂ ಲಿಂಗ ವಿಶಿಷ್ಟವೂ, ವ್ಯಕ್ತಿವಾದಿಯೂ ಆಗಿರುತ್ತದೆ. ಇಲ್ಲಿ ಸರ್ಕಾರದ ಪಾತ್ರ ನಿರ್ಣಾಯಕವಾದುದಾಗಿದೆ. ಅಕ್ಷರ, ಆರೋಗ್ಯ, ಆಹಾರ ಮುಂತಾದವು ಜನರಿಗೆ ಕೆಳವರ್ಗಗಳಿಗೆ ಮಹಿಳೆಯರಿಗೆ ದೊರೆಯುವಂತೆ ಮಾಡುವ ಕ್ರಮಗಳು ಆಯಾ ಪ್ರದೇಶಗಳಲ್ಲಿರುವ ಜನರ ಬದುಕನ್ನು ಉತ್ತಮಪಡಿಸುವಲ್ಲಿ ಯಶಸ್ವಿಯಾಗಬಲ್ಲವು ಎಂಬುದಾಗಿ ಅಭಿಪ್ರಾಯ ಪಡುತ್ತಾರೆ. ಅರ್ಥಶಾಸ್ತ್ರಕ್ಕೆ ತಮ್ಮದೇ ಆದ ಕೊಡುಗೆ ನೀಡುವ ಮೂಲಕ ಸೇನ್‌ರವರು ಬಡವರ ಪರವಾಗಿ ಅನೇಕ ಆರ್ಥಿಕ ನೀತಿಗಳನ್ನು ರೂಪಿಸಿದ್ದಾರೆ. ಹೀಗೆ ಅಭಿವೃದ್ಧಿಯ ಸೂಚ್ಯಾಂಕಗಳು ಒಂದು ದೇಶದ, ಒಂದು ಸಮಾಜದ ವೇಗದ ಗತಿಯನ್ನು ತಿಳಿಸುವ ವಾಸ್ತವ ಸಂಗತಿಗಳನ್ನು ಹೇಳುವ ಈ ಸೂಚ್ಯಾಂಕಗಳು ಅಭಿವೃದ್ಧಿಯ ಮಾಪನದಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತವೆ. (ಮಾನಸ ತಿಂಗಳ ಪತ್ರಿಕೆ: ಮಾರ್ಚ್-೧೯೯೯ ಎಸ್.ಎಮ್. ಮಂಗಳಾ., ಮೈಸೂರು-೬) ಈ ರೀತಿಯಾಗಿ ಡಾ. ಅಮರ್ತ್ಯಾಸೇನ್‌ರ ಪ್ರಕಾರ ಮಹಿಳೆಯರು ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ತೊಡಗಿಕೊಂಡಿರುವುದರಿಂದ ಭಾರತದಂತಹ ಅಭಿವದ್ಧಿಶೀಲ ರಾಷ್ಟ್ರಗಳಿಗೆ ಬಹಳ ಉಪಯೋಗವಾಗುತ್ತದೆಯಲ್ಲದೆ ಆ ರಾಷ್ಟ್ರವು ಅಭಿವೃದ್ಧಿ ಹೊಂದುತ್ತದೆ ಎಂದು ಹೇಳಬಹುದು.

ಅಡಿಟಿಪ್ಪಣಿಗಳು

೧. ಟಿ.ಆರ್.ಚಂದ್ರಶೇಖರ., (ಸಂ) ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ, ಪು-೧೬೩

೨. ಟಿ.ಆರ್.ಚಂದ್ರಶೇಖರ., (ಸಂ) ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ, ಪು-೧೪೦

೩. ಟಿ.ಆರ್.ಚಂದ್ರಶೇಖರ., (ಸಂ) ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ, ಪು-೧೫೧

೪. ಟಿ.ಆರ್.ಚಂದ್ರಶೇಖರ., (ಸಂ) ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ, ಪು-೧೩೮

೫. ಟಿ.ಆರ್.ಚಂದ್ರಶೇಖರ., (ಸಂ) ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ, ಪು-೮೫

೬. ಟಿ.ಆರ್.ಚಂದ್ರಶೇಖರ., (ಸಂ) ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ, ಪು-೧೯೨

೭. ಟಿ.ಆರ್.ಚಂದ್ರಶೇಖರ., (ಸಂ) ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ, ಪು-೧೯೮

೮. ಟಿ.ಆರ್.ಚಂದ್ರಶೇಖರ., (ಸಂ) ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ, ಪು-೧೯೮

೯. ಸಂಯುಕ್ತ ಕರ್ನಾಟಕ ದಿನಪತ್ರಿಕೆ ಭಾನುವಾರದ ಸಾಪ್ತಾಹಿಕ ಸೌರಭ ದಿ. ೧೬.೩.೨೦೦೩, ಪದ್ಮವಿಠಲ

೧೦. ಸಂಯುಕ್ತ ಕರ್ನಾಟಕ ದಿನಪತ್ರಿಕೆ ಭಾನುವಾರದ ಸಾಪ್ತಾಹಿಕ ಸೌರಭ ದಿ. ೧೬.೩.೨೦೦೩, ಪದ್ಮವಿಠಲ

೧೧. ಸಂಯುಕ್ತ ಕರ್ನಾಟಕ ದಿನಪತ್ರಿಕೆ ಭಾನುವಾರದ ಸಾಪ್ತಾಹಿಕ ಸೌರಭ ದಿ. ೧೬.೩.೨೦೦೩, ಪದ್ಮವಿಠಲ

೧೨. ಟಿ.ಆರ್.ಚಂದ್ರಶೇಖರ., (ಸಂ) ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ, ಪು-೩೨

೧೩. ಟಿ.ಆರ್.ಚಂದ್ರಶೇಖರ., (ಸಂ) ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ, ಪು-೩೨

ಮೂಲ ಆಕಾರಗಳು

೧. ಸ್ವ-ಶಕ್ತಿ ಯೋಜನೆ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಬೆಂಗಳೂರು

೨. ಕರ್ನಾಟಕ ವಿಕಾಸ ಮಾಸ ಪತ್ರಿಕೆ ಕೆಲವು ಸಂಚಿಕೆಗಳು

ಸಮಾರೋಪ

ಸಮಾರೋಪ

ಭಾರತವು ಹಳ್ಳಿಗಳ ದೇಶ, ನಮ್ಮ ದೇಶದಲ್ಲಿ ಸುಮಾರು ಆರು ಲಕ್ಷ ಹಳ್ಳಿಗಳಿವೆ. ಎಲ್ಲಾ ಹಳ್ಳಿಗಳ ಪರಿಸ್ಥಿತಿ ಒಂದೇ, ಗ್ರಾಮೀಣ ಪ್ರದೇಶದ ಅಭಿವೃದ್ಧಿಯಾಗದೇ ರಾಷ್ಟ್ರದ ಅಭಿವೃದ್ಧಿಯಾಗಲು ಸಾಧ್ಯವಿಲ್ಲ. 'ಹಳ್ಳಿಯಿಂದ ದಿಲ್ಲಿಗೆ ಬೆಳಕು' ಎಂದು ಗಾಂಧೀಜಿ ಹೇಳಿದರು. ಭಾರತದ ಜೀವ ಹಳ್ಳಿಯಲ್ಲಿದೆ ಎಂದರು. 'ಗಾಡ್ ಮೇಡ್ ದಿ ಕಂಟ್ರೀ, ಮ್ಯಾನ್ ಮೇಡ್ ದಿ ಟೌನ್' ದೇವರು ಹಳ್ಳಿಯನ್ನು ನಿರ್ಮಿಸಿದ, ಮಾನವ ಪಟ್ಟಣ ಕಟ್ಟಿದ ಎಂಬುದು ಹಳ್ಳಿಯ ಹಿರಿಮೆಯನ್ನು ಹೇಳುತ್ತದೆ. ದೇಶವು ಸ್ವಾತಂತ್ರ್ಯಗಳಿಸುವುದಕ್ಕೆ ಮುಂಚೆಯೂ ಸಹ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನಾಯಕರಾದಿಯಾಗಿ ಬ್ರಿಟೀಷರ ಕಾಲದಲ್ಲಿ ಕೂಡ ಭಾರತದ ಗ್ರಾಮೀಣ ಪ್ರದೇಶಗಳನ್ನು ಕಡೆಗಣಿಸಸದರೆಂಬುದೇ ಸ್ವಾತಂತ್ರ್ಯ ಸಂಗ್ರಾಮಕ್ಕೆ ಒಂದು ಪ್ರಮುಖ ಕಾರಣವಾಯಿತೆಂಬುದು ವಾಸ್ತವಾಂಶ. ಈ ನಿಟ್ಟಿನಲ್ಲಿ ಗ್ರಾಮ ಸ್ವಾಯತ್ತತೆ, ಗ್ರಾಮ ಸ್ವರಾಜ್ ಮೊದಲಾದವುಗಳನ್ನು ಗಾಂಧೀಜಿ ತಮ್ಮ ಆರ್ಥಿಕಾಭಿವೃದ್ಧಿಯ ದೃಷ್ಟಿಯ ಕೇಂದ್ರ ಬಿಂದುವನ್ನಾಗಿ ಮಾಡಿಕೊಂಡಿದ್ದರು.

ಈ ದಿಶೆಯಲ್ಲಿ ಒಂದು ರಾಷ್ಟ್ರದ ಸರ್ವಾಂಗೀಣ ಅಭಿವೃದ್ಧಿ ಆ ರಾಷ್ಟ್ರದ ಗ್ರಾಮಗಳ ಅಭಿವೃದ್ಧಿಗಳ ಮೇಲೆ ಅವಲಂಬಿತವಾಗಿರುತ್ತದೆ. ಗ್ರಾಮೀಣ ಪ್ರದೇಶದ ಬುಡಕಟ್ಟು ಮಹಿಳೆಯರು ಮತ್ತು ಆರ್ಥಿಕವಾಗಿ ಬಹಳ ದುರ್ಬಲವಿರುವ ಮಹಿಳೆಯರ ಸಶಕ್ತತೆ ಹಾಗೂ ಸ್ವಾವಲಂಬನೆಗೆ ಆದ್ಯತೆ ನೀಡಿ ಇವರ ಸರ್ವತೋಮುಖ ಅಭಿವೃದ್ಧಿಗಾಗಿ ರೂಪಗೊಂಡ ಯೋಜನೆಯೇ **ಸ್ವ-ಶಕ್ತಿ ಯೋಜನೆ** ಎಂದು ಹೇಳಬಹುದು. ಹಸಿದವನಿಗೆ ಊಟದ ಅವಶ್ಯಕತೆ ಇರುವಂತೆ ಬಡವರಿಗೆ ಸ್ವ ಸಹಾಯ ಸಂಘಗಳ ಅವಶ್ಯಕತೆಯಿದೆ ಎಂದು ತಿಳಿದು ಗ್ರಾಮೀಣ ಪ್ರದೇಶದ ಬುಡಕಟ್ಟು ಮಹಿಳೆಯರು ಸ್ವಾವಲಂಬಿಗಳಾಗಿ ತಮ್ಮ ಬದುಕನ್ನು ರೂಪಿಸಬೇಕೆಂಬ ಸಲುವಾಗಿ ಸರ್ಕಾರ ಮಹಿಳಾ ಅಭಿವೃದ್ಧಿ ಯೋಜನೆಯ ಮುಖಾಂತರ 'ಸ್ವ-ಶಕ್ತಿ' ಯೋಜನೆಯನ್ನು ಸ್ಥಾಪಿಸಿದೆ.

ಭಾರತ ದೇಶದಲ್ಲಿ ಗ್ರಾಮೀಣ ಪ್ರದೇಶದ ಬುಡಕಟ್ಟು ಸಮುದಾಯ ಮತ್ತು ಇತರ ಹಿಂದುಳಿದ ಬಡವರು ತಮ್ಮ ಮೂಲಭೂತ ಅವಶ್ಯಕತಗಳಿಗಾಗಿ ಅಂದರೆ ಅನ್ನ, ಬಟ್ಟೆ, ವಸತಿ, ಆರೋಗ್ಯ

[illegible]

[illegible]

[illegible]

[illegible]

[illegible]

[illegible]

ಹಾಗೂ ಮಕ್ಕಳ ವಿದ್ಯಾಭ್ಯಾಸ, ಮನೆಯ ವ್ಯವಸಾಯ, ಜೀವನ ಸಾಗಿಸುವ ಸಲುವಾಗಿ ವ್ಯಾಪಾರ ಮಾಡಲು, ಮದುವೆ, ಹಬ್ಬ ಹರಿದಿನಗಳನ್ನು ಆಚರಿಸಲು ಸಾಲ ಮಾಡುತ್ತಾರೆ. ಇಂತಹ ಅವಶ್ಯಕ ಸಾಲಗಳನ್ನು ಮಾಡಿ ತೀರಿಸಲಾಗದೆ ಸಾಲದಲ್ಲಿಯೇ ಬಡವರಾಗುತ್ತಿದ್ದಾರೆ. ಹಾಗೂ ಈ ಸಾಲಗಳನ್ನು ಮಾರ್ವಾಡಿಗಳಿಂದ, ಶ್ರೀಮಂತರಿಂದ ಮತ್ತು ಬಡ್ಡಿ ಸಾಲ ಕೊಡುವವರಿಂದ ಪಡೆದು ಅಸಲಿಗಿಂತ ಬಡ್ಡಿಯೆ ಜಾಸ್ತಿಯಾಗಿ ಸಾಲದ ಹೊರೆಯು ದಿನ ದಿನಕ್ಕೆ ದೊಡ್ಡ ಬಂಡೆಯಾಕಾರವಾಗಿ ಬೆಳೆದು ಹಾಗೂ ಬೆಳೆಯುತ್ತಾ ಸಾಲ ತೀರಿಸಲಾಗದೆ ಶೋಷಿತರಾಗಿ ಸಾಲದಲ್ಲಿಯೇ ಹುಟ್ಟಿ ಸಾಲದಲ್ಲಿಯೇ ಸಾಯುತ್ತಾರೆ. ಇಂತಹ ಸಂದರ್ಭಗಳಲ್ಲಿ ತಮ್ಮ ಜಮೀನು, ಮನೆ ಇವುಗಳನ್ನು ಅವರ ಭೋಗ್ಯಕ್ಕೆ ಹಾಕುವುದು ಅಥವಾ ಅವರಿಗೆ ಮಾರಾಟ ಮಾಡುವುದು. ಇದಲ್ಲದೆ ತನ್ನ ಮಕ್ಕಳನ್ನು ಜೀತಕ್ಕಿಡುವುದು ಮುಂತಾದ ಹೀನಸ್ಥಿತಿಗೆ ಬಲಿಯಾಗುವುದನ್ನು ಕಾಣಬಹುದು.

ಇನ್ನೂ ಸಹಕಾರ ಸಂಘಗಳು, ಬ್ಯಾಕಿನಿಂದ ಕಡಿಮೆ ಬಡ್ಡಿಯ ಹಾಗೂ ಸಹಾಯ ಧನದ ಸಾಲ ಸೌಲಭ್ಯಗಳೇನಾದರೂ ಸಾಮಾನ್ಯ ಬಡವರಾಗಿದ್ದರೂ, ಜಾಮೀನು, ಆಧಾರ ದಾಖಲೆಗಳು ಎಂದು ಸಾಲವೇ ಸಿಗುವುದಿಲ್ಲ. ಈ ಎಲ್ಲಾ ಉದ್ದೇಶಗಳಿಗೂ ಮತ್ತು ಅವರವರ ಕಷ್ಟ ಕಾರ್ಪಣ್ಯಗಳಿಗೂ ಸಕಾಲಕ್ಕೆ ಸರಿಯಾಗಿ ಸಾಲ ದೊರಕದೇ ಅನೇಕ ತೊಂದರೆಗಳಿಗೀಡಾಗುತ್ತಾರೆ. ಸಾಮಾನ್ಯವಾಗಿ ಬಡ ಮಹಿಳೆಯರಿಗೆ ಅವರ ಅಭಿವೃದ್ಧಿಗಾಗಿ ಗ್ರಾಮೀಣ ಪ್ರದೇಶದ ಬಡಜನರ ಅವಶ್ಯಕತೆಗಳನ್ನು ಪೂರೈಸಲು, ಒಂದು ಸುಸೂತ್ರವಾದ ಹಣಕಾಸಿನ ವ್ಯವಸ್ಥೆ ಇದ್ದರೆ ಇವರ ಅಭಿವೃದ್ಧಿ ಸಾಧ್ಯ ಎಂಬ ದೃಷ್ಠಿಯಿಂದ, ಸರ್ಕಾರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಯೋಜನೆಗಳ ಮೂಲಕ ಮಹಿಳೆಯರಲ್ಲಿ ಅಭಿವೃದ್ಧಿ ಹಾಗೂ ಸಶಕ್ತತೆಯನ್ನು ಬೆಳೆಸಿ ಸ್ವ ಸಹಾಯ ಸಂಘಗಳನ್ನು ಸ್ಥಾಪಿಸಲಾಯಿತು. ಇವು ಇವರ ಅಭಿವೃದ್ಧಿಗಾಗಿ ತುಂಬಾ ಕಡಿಮೆ ಬಡ್ಡಿಯ, ಜಾಮೀನು, ಆಧಾರ ಮತ್ತು ದಾಖಲೆಗಳಿಲ್ಲದೇ ತಮ್ಮ ಎಲ್ಲಾ ಉದ್ದೇಶಗಳಿಗೂ ನ್ಯಾಯ ಸಮ್ಮತವಾಗಿ ಸುಲಭ ರೀತಿಯಿಂದ ಸಕಾಲಕ್ಕೆ ಎಷ್ಟು ಬೇಕೋ ಅಷ್ಟು ಲಭ್ಯವಾಗುವ ಸಾಲದ ವ್ಯವಸ್ಥೆ ಈ ಸ್ವ-ಸಹಾಯ ಸಂಘಗಳಿಂದ ಸಾಧ್ಯ.

ಸಾಮಾನ್ಯವಾಗಿ ಮಹಿಳೆಯರೆಂದರೆ ಶ್ರಮಜೀವಿಗಳು, ಶ್ರದ್ಧಾಮೂರ್ತಿಗಳು ಕುಟುಂಬದಲ್ಲಿ ಜವಾಬ್ದಾರಿಯುಳ್ಳವರು ಹಾಗೂ ಇದ್ದ ಸ್ವಲ್ಪ ಹಣವನ್ನು ಉಳಿತಾಯ ಮಾಡುವವರು ಮತ್ತು ಆರ್ಥಿಕ ಅಭಿವೃದ್ಧಿಗಳಲ್ಲಿ ಪಾಲ್ಗೊಳ್ಳುವವರು ಎಂದು ಹೇಳಬಹುದು. ಇಂದಿನ ಸಮಾಜದಲ್ಲಿ ವಿದ್ಯೆಯಲ್ಲಾಗಲಿ, ವಿವಿಧ ವೃತ್ತಿಯಲ್ಲಾಗಲಿ ಮಹಿಳೆಯರು ಹಾಗೂ ಬುಡಕಟ್ಟು ಮಹಿಳೆಯರು ಮುಂಚೂಣೆಯಲ್ಲಿರುವುದು ಇತ್ತೀಚಿನ ದಿನಗಳಲ್ಲಿ ಕಂಡು ಬರುತ್ತದೆ. ಸ್ವ-ಸಹಾಯ ಸಂಘಗಳಲ್ಲಿ, ಗ್ರಾಮ ಸಭೆಗಳಲ್ಲಿ ಎಲ್ಲಾ ಮಹಿಳೆಯರ ಸಹಭಾಗಿತ್ವವು ಅತ್ಯಂತ ಮಹತ್ವವಾಗಿದೆ. ಮಹಿಳೆಯರ ಸಹಭಾಗಿತ್ವವನ್ನು ಸಂಘಟನೆಗಳಲ್ಲಿ ಹೆಚ್ಚಿಸಲು ಪ್ರಮುಖವಾಗಿ ಪ್ರತಿ ಹಂತದಲ್ಲೂ ಮಹಿಳೆಯರು ವಿವಿಧ ಸಭೆ, ಚರ್ಚೆಗಳಲ್ಲಿ ಭಾಗವಹಿಸಿ ತೀರ್ಮಾನಗಳಲ್ಲಿ ಭಾಗಿಗಳಾಗುವುದರಿಂದ ಉಂಟಾಗುವ ಅನುಕೂಲದ ಬಗ್ಗೆ ಮಹಿಳೆಯರಿಗೆ ಮಾತ್ರವಲ್ಲ

ಇತರೆ ಪುರುಷರಿಗೂ ಆಯಾ ಕುಟುಂಬದ ಹಿರಿಯ ಮತ್ತು ಯುವ ಸದಸ್ಯರಿಗೂ ಮನವರಿಕೆಯಾಗಿ, ಅನೇಕ ಸಂಘ ಸಂಸ್ಥೆಗಳಲ್ಲಿ ಮಹಿಳಾ ಸದಸ್ಯರು ಸಂಘಗಳ ವತಿಯಿಂದ ಚರ್ಚೆ ಸಭೆ ಸಮಾರಂಭ ತರಬೇತಿಗಳಿಗೆ ಹಾಜರಾಗಿ ಇವರು ಜ್ಞಾನ, ತಿಳುವಳಿಕೆಯನ್ನು ಪಡೆದುಕೊಂಡಿರುವುದು ಕಂಡುಬರುತ್ತದೆ. ಬುಡಕಟ್ಟು ಮಹಿಳೆಯರು ಮತ್ತು ಇತರೆ ಹಿಂದುಳಿದ ಮಹಿಳೆಯರು ಸ್ವ-ಸಹಾಯ ಸಂಘಗಳನ್ನು ಕಟ್ಟಿಕೊಂಡಿರುವುದರಿಂದ ಮುಕ್ತ ಚರ್ಚೆಗೆ ಅವಕಾಶ ಕಲ್ಪಿಸಿಕೊಂಡಿದ್ದಾರೆ. ಇದೇ ರೀತಿ ಎಲ್ಲಾ ಮಹಿಳೆಯರ ಸಹಭಾಗಿತ್ವ, ಭಾಗವಹಿಸುವಿಕೆ ನಿರಂತರವಾಗಬೇಕಾದರೆ ಚರ್ಚೆಗಳು, ಅರಣ್ಯಸಮಿತಿಗಳಲ್ಲಿ ತಮ್ಮ ಮಕ್ಕಳ ಶೈಕ್ಷಣಿಕ ಸ್ಥಾನಮಾನ, ಸಂಘಟನೆಗೆ ಆರ್ಥಿಕ, ಆರೋಗ್ಯ ಇತ್ಯಾದಿಗಳಿಗೆ ಅನುಕೂಲವಾಗುವ ಮಾಹಿತಿ ಒದಗಿಸುವಂತಿರಬೇಕು. ಅಂತೆಯೇ ಇವರು ವಿವಿಧ ಇಲಾಖೆಗಳಲ್ಲಿ ಭಾಗವಹಿಸುವಿಕೆ ಇಂತಹ ಚರ್ಚೆ, ಸಭೆಗಳಲ್ಲಿ ಒಬ್ಬೊಬ್ಬರಂತೆ ಪ್ರತಿ ಮಾಸದಲ್ಲಿ ಆಹ್ವಾನಿಸಿ ಚರ್ಚಿಸುತ್ತಿದ್ದರೆ ಮಹಿಳೆಯರಿಗೆ ಉಪಯುಕ್ತ ಮಾಹಿತಿ ಸಿಗುತ್ತದೆ. ತಮ್ಮ ಜೀವನಕ್ಕೆ ಅನುಕೂಲವಿರುವ ಜ್ಞಾನ, ತಿಳುವಳಿಕೆ, ಸೌಲಭ್ಯ, ಪ್ರೋತ್ಸಾಹ, ಉತ್ಸಾಹ, ಸ್ಥಾನಮಾನ ಕಾರ್ಯಕ್ರಮದೊಂದಿಗೆ ತೀರ್ಮಾನ ಕೈಗೊಳ್ಳಲು ಅವಕಾಶವಿರುವುದರಿಂದ ಮಹಿಳೆಯರು ಅದರಲ್ಲೂ ಬುಡಕಟ್ಟು ಮಹಿಳೆಯರ ಸಹಭಾಗಿತ್ವವು ನಿರಂತರವಾಗಲು ಸಹಕಾರಿಯಾಗುವುದು.

'ಆಧುನಿಕ ಸಮಾಜವು ಆರ್ಥಿಕ ಸ್ವಾವಲಂಬನೆಗೆ ಅಥವಾ ಆರ್ಥಿಕ ಕ್ಷೇತ್ರಗಳಿಗೆ ಎಲ್ಲಾ ಮಹಿಳೆಯರ ಸಂಪೂರ್ಣ ಶ್ರಮವನ್ನು ತೊಡಗಿಸಿಕೊಳ್ಳುವಷ್ಟು ವಿಶಾಲವಾಗಿದೆ. ಇಂದು ಬುಡಕಟ್ಟು ಮಹಿಳೆಯರು ಮತ್ತು ಇತರೆ ಹಿಂದುಳಿದ ಮಹಿಳೆಯರು ತಮ್ಮ ಸ್ವಾವಲಂಬನೆಯ ಬದುಕಿನತ್ತ, ಸಂಪಾದನೆಯತ್ತ ಹಾಗೂ ಎಂತಹ ಅವಿದ್ಯಾವಂತ ಗ್ರಾಮೀಣ ಪ್ರದೇಶದ ಮಹಿಳೆಯರೂ ಕೂಡ ಆರ್ಥಿಕ ಅಭಿವೃದ್ಧಿಯ ಬಗ್ಗೆ ಯೋಚಿಸುವಂತಾಗಿದ್ದಾರೆ. ಇವರು ತಮ್ಮ ಉಳಿತಾಯದಿಂದ ಆರ್ಥಿಕ ಸ್ವಾವಲಂಬನೆಯ ಮೂಲಕ ತನ್ನ ಬದುಕಿನಲ್ಲಿ ಸಂತೋಷವನ್ನು ಕಂಡುಕೊಂಡು ಬದುಕನ್ನು ರೂಪಿಸಿಕೊಂಡ ಹಲವಾರು ಮಹಿಳೆಯರು ಇದ್ದಾರೆ. ಇವರು ಹಿಂದೆ ಹಲವು ರೀತಿಯ ಕಷ್ಟಗಳನ್ನನುಭವಿಸಿ ಅದರಿಂದ ಪಾಠ ಕಲಿತು ಸ್ವಾವಲಂಬನೆಯು, ಬದುಕಿನಲ್ಲಿ ಎಷ್ಟು ಅವಶ್ಯಕ ಎಂಬುದನ್ನು ಸ್ವ-ಸಹಾಯ ಸಂಘಗಳ ಮೂಲಕ ತಿಳಿದುಕೊಂಡು ಇದ್ದಂತಹ ಸ್ವಲ್ಪ ಹಣದಲ್ಲಿಯೇ ಸಂಘಕ್ಕೆ ಉಳಿತಾಯ ಮಾಡುತ್ತಿದ್ದಾರೆ.

ಹೀಗೆ ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕ, ಸ್ವಾವಲಂಬನೆ, ಸ್ವಾತಂತ್ರ್ಯ ಇವುಗಳು ಯಾವುದೇ ವ್ಯಕ್ತಿಗಳಲ್ಲಿ ಅವರ ಜೀವನದ ಬದುಕಿನಲ್ಲಿ ಆತ್ಮಾಭಿಮಾನವನ್ನು, ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಅವಕಾಶವನ್ನು ನೀಡುತ್ತವೆ. ಇಂತಹವುಗಳನ್ನು ನಾವು ನೋಡಿದಾಗ ಮಹಿಳೆಯರು ಅದರಲ್ಲಿಯೂ ಬುಡಕಟ್ಟು ಮಹಿಳೆಯರು ವಿದ್ಯಾವಂತ ಅವಿದ್ಯಾವಂತರೆನ್ನದೆ ಸಮಾಜದ, ಕುಟುಂಬದ

ದೌರ್ಜನ್ಯಗಳಿಗೆ ಮತ್ತು ಸಮಾಜದ ತುಳಿತಕ್ಕೆ ಒಳಗಾಗಿರುವ ಬುಡಕಟ್ಟು ಮಹಿಳೆಯರಿಗೆ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ಆರ್ಥಿಕ ಸ್ವಾವಲಂಬನೆಗೆ ಸ್ವ-ಸಹಾಯ ಸಂಘಗಳು ಅತ್ಯಂತ ಮುಖ್ಯವಾದವು ಎಂದು ಹೇಳಿದರೆ ತಪ್ಪಾಗಲಾರದು. ಈ ಗ್ರಾಮೀಣ ಬುಡಕಟ್ಟು ಮಹಿಳೆಯರಿಗೆ ಸಂಘಗಳ ಸಣ್ಣ ಉಳಿತಾಯದ ಮೂಲಕ ಬ್ಯಾಂಕುಗಳು ಇವರಿಗೆ ರಿಯಾಯಿತಿಯ ಮುಖಾಂತರ ಹಣವನ್ನು ನೀಡುತ್ತವೆ. ನಂತರ ಇವರು ಈ ಹಣವನ್ನು ಪಡೆದುಕೊಂಡು ಸ್ವಯಂ ಉದ್ಯೋಗ ಪ್ರಾರಂಭಿಸಿಕೊಂಡು ಜೀವನ ನಡೆಸುತ್ತಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ನಾವು ನೋಡುವ ಹಾಗೆ ಮಹಿಳೆಯರು ತಮ್ಮ ಬದುಕಿನಲ್ಲಿ ಹಲವು ರೀತಿಯ ವ್ಯವಹಾರಗಳನ್ನು ನಿರ್ವಹಿಸುತ್ತಿರುವುದು, ಧೈರ್ಯವಾಗಿ ಮಾತನಾಡುವುದು, ತಮ್ಮ ಹಕ್ಕುಗಳ ಬಗ್ಗೆ ಕಾಳಜಿವುಳ್ಳವರಾಗಿರುವುದು ಹೀಗೆ ಹಲವಾರು ವಿಧಗಳಲ್ಲಿ ಸ್ವಾವಲಂಬನೆಯನ್ನು ಸಾಧಿಸಿದಂತಹ ಮಹಿಳೆಯರನ್ನು ನಾವಿಂದು ಕಾಳಜಿಯಿಂದ ಕಾಣುತ್ತೇವೆ. ಗ್ರಾಮೀಣ, ನಗರ ಪ್ರದೇಶಗಳೆಂಬ ವ್ಯತ್ಯಾಸವಿಲ್ಲದ ಮಹಿಳೆಯರಲ್ಲಿ ಈ ಬದಲಾವಣೆ ಸಾಗಿದೆ, ಸಾಗುತ್ತಾ ಬಂದಿದೆ. ಒಂದು ಕಾಲದಲ್ಲಿ ಖಾಕಿ ಬಟ್ಟೆಯ ಪೋಲಿಸರನ್ನು ನೋಡಿ, ಅವರಿಗೆ ಹೆದರಿ ಮನೆಯ ಒಳಗಡೆ ಅವಿತುಕೊಳ್ಳುವಂತಹ ಎಷ್ಟೋ ಮಹಿಳೆಯರನ್ನು ನಾವು ಕಂಡಿದ್ದೇವೆ. ಆದರೆ ಈಗ ಆ ವ್ಯಕ್ತಿಗಳ ಮುಂದೆ ಧೈರ್ಯವಾಗಿ ತಮ್ಮ ಸವಾಲನ್ನು ನೀಡುವ ಹಾಗೂ ನೀಡುತ್ತಿರುವ ಮಹಿಳೆಯರೂ ಕೂಡ ಇಂದು ಹೆಚ್ಚಾಗುತ್ತಿದ್ದಾರೆ. ಇದಕ್ಕೆ ಅನೇಕ ಅಂಶಗಳು ಕಾರಣವಾಗಿದ್ದು ಮಹಿಳೆಯರನ್ನು ಆಧುನಿಕ ಜಗತ್ತಿನತ್ತ ಕೊಂಡೊಯ್ಯುತ್ತಿವೆ. ಮಹಿಳಾ ಚಳುವಳಿಗಳು, ಸಭೆ ಸಮಾರಂಭಗಳು, ಮಹಿಳಾ ಮೀಸಲಾತಿ. ರಾಜಕೀಯ ಅಧಿಕಾರಿಗಳು, ಇಂದು ಮಹಿಳೆಯರ ಇರುವಿಕೆಯ ಬಗ್ಗೆ ಅವರ ಸ್ಥಾನಮಾನದ ಬಗ್ಗೆ ಅವರ ಹಕ್ಕಿಗಾಗಿ ಹೋರಾಟ ಮಾಡುವ ಬಗ್ಗೆ ಚಿಂತಿಸುವಂತೆ ಮಾಡಿವೆ. ತಮ್ಮ ಮಕ್ಕಳ ಬಗ್ಗೆ ತಾವೇ ಸ್ವತಃ ಕುಟುಂಬಗಳಲ್ಲಿ ನಿರ್ಣಯಗಳನ್ನು ತೆಗೆದುಕೊಳ್ಳುವ ಶಕ್ತಿಯನ್ನು ಪಡೆಯುತ್ತಿದ್ದಾರೆ. ಕುಟುಂಬದಲ್ಲಿ ಕುಡಿದು ಬಂದು ಗಲಾಟೆ ಮಾಡಿ ಇವರ ಕೈಯಿಂದ ಹಣ ಕಿತ್ತುಕೊಂಡು, ತನ್ನ ಸಂಸಾರವನ್ನು ಬೀದಿ ಪಾಲು ಮಾಡುತ್ತಿದಂತಹ ತಮ್ಮ ಗಂಡಂದಿರಿಗೆ ಬುದ್ಧಿ ಹೇಳಿ ಅವರನ್ನು ಸರಿದಾರಿಗೆ ತರುವಂತಹ ಶಕ್ತಿಯನ್ನು ಕೂಡ ಅವರು ಪಡೆದುಕೊಳ್ಳುತ್ತಿದ್ದಾರೆ. ಇದಕ್ಕೆ ಮುಖ್ಯ ಕಾರಣ ಅವರಲ್ಲಿನ ಆರ್ಥಿಕ ಸ್ವಾಲಂಭಾನೆ, ಸ್ವಾತಂತ್ರ್ಯ, ಸ್ವಾಭಿಮಾನದ ಬದುಕು ಅವರಿಗಿಂದು ಬೇಕಾಗಿದೆ. ಮಹಿಳೆ ಎಂದೂ ಅಬಲೆಯಲ್ಲ ಎಂದು ಅವರು ತೋರಿಸುತ್ತಿದ್ದಾರೆ. ಒಂದು ಕಾಲದಲ್ಲಿ ಹಲವು ರೀತಿಯ ಶೋಷಣೆಗೆ ಗುರಿಯಾಗಿದ್ದರೂ ಅದಕ್ಕೆ ಎದುರಾಡದೆ ಅನುಭವಿಸಿ ತಮ್ಮ ಪ್ರಾಣಗಳನ್ನು ಸಮರ್ಪಿಸಿಕೊಂಡಂತಹ ಮಹಿಳೆಯರು ಇದ್ದಾರೆ. ಆದರೆ ಈಗ ಸಮಸ್ಯೆಗಳನ್ನು ಹೇಗೆ ಬಗೆಹರಿಸಬೇಕೆಂಬ ಮಾರ್ಗಗಳನ್ನು ಕಂಡುಕೊಳ್ಳುತ್ತಿದ್ದಾರೆ. ಇದಕ್ಕೆ ಮುಖ್ಯ ಕಾರಣ ಅವರ ಆರ್ಥಿಕ ಸ್ವಾವಲಂಬನೆ ಹಾಗೂ ಶಿಕ್ಷಣ.

[illegible]

ಈ ಮೂಲಕ ಅವರಿಂದು ಸಶಕ್ತತೆಯನ್ನು ಪಡೆದುಕೊಳ್ಳುತ್ತಿದ್ದಾರೆ. ಅಲ್ಲದೆ ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಪುರುಷರಿಗೆ ಸಮನಾದ ಅನೇಕ ಜವಾಬ್ದಾರಿಗಳನ್ನು ಇಂದು ಹೊಂದಿದ್ದಾರೆ. ಈ ಜವಾಬ್ದಾರಿಗಳನ್ನು ನಿಭಾಯಿಸುವಲ್ಲಿ ಕೂಡ ತಾವು ಸಮರ್ಥರೆಂದು ಇಂದು ತೋರಿಸಿಕೊಡುತ್ತಿದ್ದಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಇದ್ದಂತಹ ಮಹಿಳೆಯರ ಸ್ಥಾನಮಾನಗಳು ಇಂದು ಬದಲಾಗಿದೆ. ಅವರ ಬದುಕು ಸಮಾಜದ ಎಲ್ಲಾ ದಿಕ್ಕಿನಲ್ಲಿಯೂ ಸಂಪರ್ಕ ಹೊಂದಿದೆ. ಸಮಾಜದಲ್ಲಿ, ಕುಟುಂಬದಲ್ಲಿ ಪುರುಷರಿಗಿಂತಲೂ ಹೆಚ್ಚಿನ ಜವಾಬ್ದಾರಿಗಳನ್ನು ಹೊರುವ ಹಾಗೂ ಅವರಿಗಿಂತಲೂ ಹೆಚ್ಚು ಕೆಲಸ ಮಾಡುವ ಅಥವಾ ಕರ್ತವ್ಯಗಳನ್ನು ನಿಭಾಯಿಸುವ ಸಾಮರ್ಥ್ಯಗಳು ಇದ್ದಾಗ್ಯೂ ಇವೆಲ್ಲಾ ಅಂಶಗಳು ಗಣನೆಗೆಬಾರದೆ, ನವನಾಗರೀಕತೆಯ ಸೋಂಕಿನಿಂದಾಗಿ ಇವರ ಸಾಮರ್ಥ್ಯತೆಯು ಅಗೋಚರವಾಗಿಯೇ ಉಳಿಯುತ್ತಿರುವುದು ಅವರ ಪಾಲಿನ ದುರಂತವಾಗಿದೆ.

ಬುಡಕಟ್ಟು ಮಹಿಳೆಯರ ಆರ್ಥಿಕ ಸುಧಾರಣೆಯಲ್ಲಿ ಸ್ವ-ಶಕ್ತಿ ಯೋಜನೆಯ ಪಾತ್ರ ಎನ್ನುವ ಶೀರ್ಷಿಕೆಯಡಿಯಲ್ಲಿ ಸಂಶೋಧನೆಯನ್ನು ಕೈಗೊಂಡಾಗ ಹಲವಾರು ಅಂಶಗಳು ಕಂಡು ಬಂದವು. ಸ್ವ-ಶಕ್ತಿ ಯೋಜನೆಯಲ್ಲಿರುವ ಸ್ವ-ಸಹಾಯ ಸಂಘಗಳ ಸದಸ್ಯರಲ್ಲಿ ಕೆಲವು ಸಮಸ್ಯೆಗಳು ಇವೆ. ಆ ಸಮಸ್ಯೆಗಳನ್ನು ಪರಿಪರಿಸಲು ಹಲವು ಸಲಹೆಗಳನ್ನು ನೀಡಲಾಗಿದೆ. ಈ ಸಲಹೆಗಳಿಂದ ಸ್ವ-ಸಹಾಯ ಸಂಘಗಳ ಮಹಿಳೆಯರ ಜೀವನ ವಿಧಾನಕ್ಕೆ ಉಪಯುಕ್ತವಾಗಿವೆ. ಈ ಮಹಿಳೆಯರಿಗೆ ಸರ್ಕಾರ ಮತ್ತು ಬ್ಯಾಂಕುಗಳ ಮೂಲಕ ಸಾಲ ಸೌಲಭ್ಯಗಳು ಅಗತ್ಯವಾಗಿ ದೊರೆಯ ಬೇಕಾಗುವುದು. ಸ್ವ-ಶಕ್ತಿ ಯೋಜನೆಯ ಸ್ವ-ಸಹಾಯ ಸಂಘಗಳಲ್ಲಿ ತೊಡಗಿರುವ ಮಹಿಳೆಯರು ಹೆಚ್ಚಾಗಿ ಅನಕ್ಷರಸ್ಥರಾಗಿದ್ದು, ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳು ಇರುವುದು ಕಂಡು ಬರುತ್ತದೆ. ಕೆಲವು ಕುಟುಂಬಗಳಲ್ಲಿ ಮಹಿಳೆಯರ ಗಂಡಂದಿರು ಕುಡಿದು ಗಲಾಟೆ ಮಾಡುವವರಿದ್ದಾರೆ. ಆದರೆ ಈ ಮಹಿಳಾ ಸದಸ್ಯರು ತಮ್ಮ ಸಂಘಗಳನ್ನು ಬಿಡದೆ ನಿರಂತರ ಉಳಿತಾಯ ಮಾಡುತ್ತಾರೆ. ಇದರಂತೆ ಇನ್ನು ಕೆಲವು ಮಹಿಳೆಯರನ್ನು ತಮ್ಮ ಗಂಡಂದಿರ ಹಾಗೂ ಹಿರಿಯರ ಪ್ರೋತ್ಸಾಹ ಕೂಡ ಇರುವುದು ಕಂಡುಬರುತ್ತದೆ.

ಮಾನವ ಅಭಿವೃದ್ಧಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿ ಶ್ರಮ ಸಂಪತ್ತು ಉತ್ತಮವಾಗಿ ಬಳಕೆಯಾಗುವಂತೆ ಮಾಡಬೇಕಿದೆ.

ಮಹಿಳೆಯರಲ್ಲಿ ಇನ್ನು ಹೆಚ್ಚಿನ ಮಟ್ಟದಲ್ಲಿ ಸ್ವ-ಶಕ್ತಿ ಯೋಜನೆಗಳು ಉಳಿತಾಯದ ಬಗ್ಗೆ ಹೆಚ್ಚಿನ ಅರಿವು ಮೂಡಿಸಬೇಕಿದೆ.

* ಬ್ಯಾಂಕಿನಿಂದ ಇನ್ನು ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡಬೇಕಾಗಿದೆ.

* ವಿಶೇಷವಾಗಿ ಸ್ವ-ಸಹಾಯ ಸಂಘಗಳ ಸದಸ್ಯರಿಗೆ ವಯಸ್ಕರ ಶಿಕ್ಷಣ ಒದಗಿಸಿಕೊಡಬೇಕು.

* ಸ್ವ-ಸಹಾಯ ಸಂಘದ ಸದಸ್ಯರಿಗೆ ಇನ್ನು ಹೆಚ್ಚಿನ ಮಟ್ಟದಲ್ಲಿ ಉಳಿತಾಯವನ್ನು ಮೂಡುವಂತೆ ಸೂಚಿಸುವುದು.

* ಸದಸ್ಯರುಗಳಿಗೆ ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಸರ್ವತೋಮುಖ ಅಭಿವೃದ್ಧಿ ಸಾಧಿಸುವಂತೆ ಪ್ರೇರೆಪಿಸುವುದು.

ಈ ಮೇಲಿನ ಎಲ್ಲಾ ಕ್ರಮಗಳು ಮಹಿಳೆಯರನ್ನು ಎಲ್ಲಾ ಆರ್ಥಿಕ ರಂಗದಲ್ಲಿ ತೀವ್ರಗತಿಯ ಪ್ರಗತಿಯನ್ನು ಕಾಣಲು ಸಹಾಯವಾಗುವುದು. ಇದರಿಂದ ಬುಡಕಟ್ಟು ಮಹಿಳೆಯರ ಬಡತನ ಬೇಗೆಯಿಂದ ಹೊರಬಂದು ಉತ್ತಮ ಸ್ಥಿತಿಯ ಭವಿಷ್ಯವನ್ನು ಕಾಣುತ್ತದೆ ಎಂದು ಹೇಳಿದರೆ ತಪ್ಪಾಗಲಾರದು.

ಪ್ರಸ್ತುತ ಅಧ್ಯಯನದಲ್ಲಿ ಕೂಡ್ಲಿಗಿ ತಾಲೂಕಿನ 'ಬುಡಕಟ್ಟು ಮಹಿಳೆಯರ ಆರ್ಥಿಕ ಸುಧಾರಣೆಯಲ್ಲಿ ಸ್ವ-ಶಕ್ತಿ ಯೋಜನೆ'ಯಡಿ ಸ್ವ-ಸಹಾಯ ಸಂಘಗಳಲ್ಲಿನ, ಆರ್ಥಿಕವಾಗಿ ಹಿಂದುಳಿದ ಮಹಿಳೆಯರು ಯಾವರೀತಿ ಅಭಿವೃದ್ಧಿ ಹೊಂದುತ್ತಿದ್ದಾರೆ, ಎಂಬುದನ್ನು ಕ್ಷೇತ್ರ ಕಾರ್ಯ ಸಂದರ್ಭದಲ್ಲಿ ಪ್ರತ್ಯಕ್ಷವಾಗಿ ನೋಡಲಾಗಿದೆ. ಈ ಅಧ್ಯಯನದಲ್ಲಿ ಬುಡಕಟ್ಟು ಮಹಿಳೆಯರನ್ನು ಮತ್ತು ಇತರೆ ಆರ್ಥಿಕವಾಗಿ ಹಿಂದುಳಿದ ಸ್ವ-ಸಹಾಯ ಸಂಘಗಳ ಸದಸ್ಯರನ್ನು ಒಂದು ಯೋಜನೆಗೆ ಸೀಮಿತಗೊಳಿಸಲಾಗಿದೆ. ತದ ನಂತರ ಒಂದು ನಿರ್ದಿಷ್ಟ ಕ್ಷೇತ್ರವನ್ನು ಅಳವಡಿಸಿಕೊಂಡು ಈ ಯೋಜನೆ ಅಂದರೆ ಸ್ವ-ಶಕ್ತಿ ಯೋಜನೆಯಲ್ಲಿನ ಮಹಿಳಾ ಸದಸ್ಯರು ಯಾವ ರೀತಿ ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಸ್ವಾವಲಂಬಿಗಳಾಗಿದ್ದಾರೆ ಎಂಬುದನ್ನು ತಿಳಿದುಕೊಳ್ಳಲಾಗಿದೆ. ಈ ಅಧ್ಯಯನದಲ್ಲಿ ಒಟ್ಟು ಐದು ಮುಖ್ಯವಾದ ಅಧ್ಯಾಯಗಳಿವೆ. ಕೊನೆಯ ಅಧ್ಯಾಯ ಸಮಾರೋಪವಾಗಿರುತ್ತದೆ. ಇದರ ಮೊದಲ ಅಧ್ಯಾಯವು ಅಧ್ಯಾಯನದ ಉದ್ದೇಶ, ವ್ಯಾಪ್ತಿ ಹಾಗೂ ಮಹಿಳೆಯರ ಮಹತ್ವ ಮತ್ತು ವಿಧಾನವನ್ನು ಒಳಗೊಂಡಿರುತ್ತದೆ.

ಎರಡನೆಯ ಅಧ್ಯಾಯದಲ್ಲಿ ಬುಡಕಟ್ಟು ಮಹಿಳೆಯರ ಪರಂಪರಾಗತ ಆರ್ಥಿಕ ಹಿನ್ನೆಲೆಯನ್ನು ಚರ್ಚಿಸಲಾಗಿದೆ. ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರ ಮಹಿಳೆಯರ ಸ್ಥಿತಿಗತಿಯನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ. ಮೂರನೆಯ ಅಧ್ಯಾಯದಲ್ಲಿ ಕೂಡ್ಲಿಗಿ ತಾಲೂಕಿನ ಕ್ಷೇತ್ರದ ಪರಿಚಯವನ್ನು ಕೊಟ್ಟಿದ್ದು, ಕೂಡ್ಲಗಿ ತಾಲೂಕಿನ ಒಟ್ಟು ಜನಸಂಖ್ಯೆಯ ಮಾಹಿತಿ ಸಂಗ್ರಹಿಸಿ ಕೊಡಲಾಗಿದೆ. ನಂತರ ಮಾಹಿತಿದಾರರ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯನ್ನು ಕೊಟ್ಟು ಮತ್ತು ಇವರ ವೈಯಕ್ತಿಕವಾದ ಜಾತಿ, ಶಿಕ್ಷಣ, ಗಂಡಂದಿರ ಶಿಕ್ಷಣ ಹಾಗೂ ಮಕ್ಕಳ ಶಿಕ್ಷಣವನ್ನು ಸಹ ಸಂಗ್ರಹಿಸಿ ನೀಡಲಾಗಿದೆ. ನಾಲ್ಕನೆಯ ಅಧ್ಯಾಯದಲ್ಲಿ ಮಹಿಳೆಯರ ಅಭಿವೃದ್ಧಿಗೆ ಸರ್ಕಾರದ ಯೋಜನೆಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡುತ್ತದೆ. ಅದರಂತೆ ಐದನೆಯ ಅಧ್ಯಾಯದಲ್ಲಿ

ವರ್ತಮಾನದಲ್ಲಿ ಸ್ವ-ಶಕ್ತಿ ಯೋಜನೆಯ ಮತ್ತು ಬುಡಕಟ್ಟು ಮಹಿಳೆಯರ ಆರ್ಥಿಕ ಸ್ಥಿತಿಗತಿಯನ್ನು ಅಳವಡಿಸಲಾಗಿದೆ. ಇದರಲ್ಲಿ ಇವರು ವೈಯಕ್ತಿಕವಾಗಿ ಉಳಿತಾಯ ಮಾಡಿದ ಹಣವು ಎಷ್ಟಿದೆ, ಯಾವ ಬ್ಯಾಂಕಿನಿಂದ ಸಾಲ ಸಂಪರ್ಕ ಪಡೆದುಕೊಂಡಿದ್ದಾರೆ ಎಂಬುದನ್ನು ತಿಳಿಸುತ್ತದೆ. ನಂತರ ಗುಂಪಿನ ಉಳಿತಾಯ ಎಷ್ಟಾಗಿದೆ ಹಾಗೂ ಸಾಲ ಸಂಪರ್ಕದ ಮೊತ್ತ ಎಷ್ಟಿದೆ, ಎಂಬುದನ್ನು ಕ್ಷೇತ್ರಕಾರ್ಯದ ಮೂಲಕ ಮಾಹಿತಿ ಸಂಗ್ರಹಿಸಿ, ಐದನೆಯ ಅಧ್ಯಾಯದಲ್ಲಿ ಇದನ್ನು ಸೇರಿಸಲಾಗಿದೆ. ನಂತರ ಕೊನೆಯ ಅಧ್ಯಾಯ ಸಮಾರೋಪವನ್ನು ಹೊಂದಿರುತ್ತದೆ. ಈ ರೀತಿಯಾಗಿ "ಕೂಡ್ಲಿಗಿ ತಾಲೂಕಿನ ಬುಡಕಟ್ಟು ಮಹಿಳೆಯರ ಆರ್ಥಿಕ ಸುಧಾರಣೆಯಲ್ಲಿ ಸ್ವ-ಶಕ್ತಿ ಯೋಜನೆಯ ಪಾತ್ರ"ದ ಅಧ್ಯಯನವು ಮೇಲಿನಂತೆ ವಿಭಾಗೀಕರಣಗಳನ್ನು ಹೊಂದಿರುತ್ತದೆ.

ಅನುಬಂಧ

ಗ್ರಂಥಋಣ

೧. ಕಮಲಾದೇವಿ ಚಟೋಪಾಧ್ಯಾಯ., (೧೯೮೪) ಭಾರತೀಯ ಮಹಿಳೆಯ ಸ್ವಾತಂತ್ರ್ಯ ಹೋರಾಟ (ಅನು) ವೈದೇಹಿ, ಅಕ್ಷರ ಪ್ರಕಾಶನ, ಹೆಗ್ಗೋಡ.

೨. ಖಾಜ ಮಸೂದ್., ಸ್ವ ಸಹಾಯ ಸಂಘಗಳ ಬೆಳವಣಿಗೆಯಲ್ಲಿ ಬ್ಯಾಂಕುಗಳ ಪಾತ್ರ, ಕರ್ನಾಟಕ ವಿಕಾಸ ತಿಂಗಳ ಪತ್ರಿಕೆ ಜನವರಿ ೨೦೦೦.

೩. ಚಂದ್ರಶೇಖರ್ ಟಿ. ಆರ್, ಮತ್ತು ಎಂ. ಚಂದ್ರ ಪೂಜಾರಿ., ಅಭಿವೃದ್ಧಿ ಅಧ್ಯಯನ ಸಮಾಜ ವಿಜ್ಞಾನ ಪತ್ರಿಕೆ ಕನ್ನಡ ವಿಶ್ವವಿದ್ಯಾಲಯ, ಹಂಪಿ. ಸಂಚಿಕೆ-೧, ಸಂಪುಟ-೧, ೨೦೦೧.

೪. ಚಂದ್ರಶೇಖರ್ ಟಿ. ಆರ್, ಮತ್ತು ಎಂ. ಚಂದ್ರ ಪೂಜಾರಿ., ಅಭಿವೃದ್ಧಿ ಅಧ್ಯಯನ ಸಮಾಜ ವಿಜ್ಞಾನ ಪತ್ರಿಕೆ ಕನ್ನಡ ವಿಶ್ವವಿದ್ಯಾಲಯ, ಹಂಪಿ. ಸಂಚಿಕೆ-೧, ಸಂಪುಟ-೨, ಜೂನ್ ೨೦೦೧.

೫. ಚಂದ್ರಶೇಖರ್ ಟಿ ಆರ್., ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬. ಜೆರಾಲ್ಡಿನ್ ಫೋಬ್ಸ್., (ಇಂಗ್ಲೀಷ್ ಮೂಲ), ಆಧುನಿಕ ಭಾರತದಲ್ಲಿ ಮಹಿಳೆ ೨೦೦೧ (ಅನು) ಡಾ. ಎಚ್.ಎಸ್. ಶ್ರೀಮತಿ., ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭. ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ. ಅಚಲ ತಿಂಗಳ ಪತ್ರಿಕೆ, ೨೦೦೧

೮. ದೊರೆಸ್ವಾಮಿ., ಕರ್ನಾಟಕ ವಿಕಾಸ ತಿಂಗಳ ಪತ್ರಿಕೆ, ೨೦೦೧

೯. ನಂಜಣ್ಣನವರ್ ಎಸ್.ಎಸ್., ಮಾನವ ಭೂಗೋಳಶಾಸ್ತ್ರ

೧೦. ನಾಯಕ್ ಎಸ್.ಎನ್., ಕರ್ನಾಟಕ ರಾಜ್ಯದ ಆರ್ಥಿಕ ವ್ಯವಸ್ಥೆ

೧೧. ಪ್ರಭಾಕರ ಎ.ಎಸ್., ಬುಡಕಟ್ಟು ಬದುಕಿನ ಸ್ಥಿತ್ಯಂತರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೨. ಪ್ರಭಾಕರ ಶಿಶಿಲ., ಅಭಿವೃದ್ಧಿ ಮತ್ತು ಯೋಜನಾ ಅರ್ಥಶಾಸ್ತ್ರ

೧೩. ಬೋರಲಿಂಗಯ್ಯ ಹಿ.ಚಿ., ವಿಸ್ಮೃತಿ ಮತ್ತು ಸಂಸ್ಕೃತಿ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೪. ಮಂಗಳಾ ಎಸ್. ಎಂ., ಅಭಿವೃದ್ಧಿಯಲ್ಲಿ ಮಹಿಳೆ ಡಾ. ಅಮರ್ತ್ಯಾಸೇನ್‌ರ ಒಂದು ವಿಚಾರ

೧೫. ಮಂಗಳಾ ಎಸ್. ಎಂ., ಮಹಿಳೆಯ ಬದುಕಿನಲ್ಲಿ ಆರ್ಥಿಕ ಸ್ವಾವಲಂಬನೆಯ ಅವಶ್ಯಕತೆ, ಮಾನಸ ತಿಂಗಳ ಪತ್ರಿಕೆ ೧೯೯೯

೧೬. ಮಾರ್ಗನ್ ಎಚ್., ಎಂಗಲ್ಸ್‌ರ ಕುಟುಂಬ, ಖಾಸಗಿ ಆಸ್ತಿ ಹಾಗೂ ರಾಜ್ಯ ಇವುಗಳ ಉಗಮ (ಅನು) ಕೆ. ಎಲ್. ಗೋಪಾಲಕೃಷ್ಣರಾವ್.

೧೭. ಯೋಜನಾ ತಿಂಗಳ ಪತ್ರಿಕೆಯ ಕೆಲವು ಸಂಚಿಕೆಗಳು, ಕನ್ನಡ ಪ್ರಕಾಶನ ವಾರ್ತಾ ಮತ್ತು ಪ್ರಸಾರ ಸಚಿವಾಲಯ ಬೆಂಗಳೂರು

೧೮. ಯೋಜನಾ ತಿಂಗಳ ಪತ್ರಿಕೆ ನವಂಬರ್ ೨೦೦೦

೧೯. ರಂಗಸ್ವಾಮಯ್ಯ ಎಂ.ಆರ್., ಅಭಿವೃದ್ಧಿ ಯೋಜನೆಗಳು ಕರ್ನಾಟಕ ವಿಕಾಸ ಮಾರ್ಚ್, ೨೦೦೦

೨೦. ವೆಂಕಟಯ್ಯ ಅಪ್ಪಗೆರೆ ಸ್ವ-ಸಹಾಯ ಸಂಘಗಳ ದಸ್ತಾಮೇಜು ಮತ್ತು ಲೆಕ್ಕ ಪತ್ರಗಳ ನಮೂನೆಗಳು

೨೧. ಸರೋಜ ಕೆ., ಮಹಿಳೆ ಮತ್ತು ಆರೋಗ್ಯ -೨೦೦೧, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೨. ಶ್ರೀಮತಿ ಹೆಚ್. ಎಸ್., ಮಹಿಳಾ ಅಧ್ಯಯನ ಉತ್ತರಾಯಣ ಸಂಚಿಕೆ, ಸಂಪುಟ ೧ಸಂಚಿಕೆ-೧ ಜನವರಿ ೯೯ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೩. ಶ್ರೀಮತಿ ಹೆಚ್. ಎಸ್., ಮಹಿಳಾ ಅಧ್ಯಯನ ದಕ್ಷಿಣಾಯಣ ಸಂಚಿಕೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೪. ಶ್ರೀಮತಿ ಹೆಚ್. ಎಸ್., ಮಹಿಳಾ ಅಧ್ಯಯನ ಉತ್ತರಾಯಣ ಸಂಚಿಕೆ, ಸಂಪುಟ-೨, ಸಂಚಿಕೆ-೧, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೫. ಇಂಗ್ಲೀಷ್ (ಮೂಲ) ಶ್ರೀಪಾದ ಅಮೃತಪಾಂಗೆ, ಭಾರತ ಸಂಘಜೀವನದಿಂದ ಗುಲಾಮಗಿರಿಗೆ, (ಅನು) ಎಂ.ಅನಂತಕೃಷ್ಣ ಹೆಬ್ಬಾರ್, ಎನ್. ರಾಮಚಂದ್ರ ಉಡುಪ

೨೬. ಸರಸ್ವತಿ, ರಿಸಬೂಡ್ : ೧೯೯೨, ಸ್ತ್ರೀ ಪುರುಷ, (ಇಳಾ ಪ್ರಕಾಶನ : ಬೆಂಗಳೂರು)

೨೭. ಸ್ವ-ಶಕ್ತಿ ಯೋಜನೆಯ ಪರಿಚಯ, ಮಹಿಳಾ ಅಭಿವೃದ್ಧಿ ನಿಗಮ : ಬೆಂಗಳೂರು

೨೮. ಸಂಯುಕ್ತ ಕರ್ನಾಟಕದ ಭಾನುವಾರದ ಸಾಪ್ತಾಯಿಕ ಸೌಲಭ್ಯ ವಿಶೇಷ ಪುರವಣಿ ಕೆಲವು ಪತ್ರಿಕೆಗಳು

೨೯. ಶರಣಪ್ಪ. ಎಸ್ ಭಾರತದ ಆರ್ಥಿಕ ವ್ಯವಸ್ಥೆ

೩೦. ಕರ್ನಾಟಕ ವಿಕಾಸ ಮಾಸ ಪತ್ರಿಕೆಗಳ ಕೆಲವು ಸಂಚಿಕೆಗಳು

೩೧. ಮಾನಸ ಮಾಸ ಪತ್ರಿಕೆಯ ಕೆಲವು ಸಂಚಿಕೆಗಳು

೩೨. ಶೈಲಜಾ ಎಂ. ಸಿ., ಮಹಿಳೆಯರನ್ನು ಸಶಕ್ತಗೊಳಿಸುವಿಕೆಯಲ್ಲಿ ಸ್ವ-ಸಹಾಯ ಸಂಘಗಳು, ಕರ್ನಾಟಕ ವಿಕಾಸ ತಿಂಗಳ ಪತ್ರಿಕೆ, ಏಪ್ರಿಲ್-೨೦೦೧

೩೩. ಸ್ವ-ಶಕ್ತಿ ಯೋಜನೆಯ ಪರಿಚಯ ಡಿ.ಪಿ.ಜಿ. ಸಂಸ್ಥೆ ಕೂಡ್ಲಿಗಿ

೩೪. ಬೋರಲಿಂಗಯ್ಯ ಹಿ.ಚಿ., ಕಾಡು ಕಾಂಕ್ರಿಟ್ ಮತ್ತು ಜಾನಪದ ಅಕ್ಷರ ಪ್ರಕಾಶನ, ಹೆಗ್ಗೋಡು ೧೯೯೬


೩೫. ಬೋರಲಿಂಗಯ್ಯ ಹಿ.ಚಿ., ಗಿರಿಜನ ನಾಡಿಗೆ ಪಯಣ, ರಾಗಿರೊಟ್ಟಿ ಪ್ರಕಾಶನ, ಬೆಂಗಳೂರು, ೧೯೯೧

ವಕ್ತೃವಿವರ

ಕ್ರ.ಸಂ.	ಹೆಸರು	ವಯಸ್ಸು	ಜಾತಿ	ಊರು
೧.	ಜಯಮ್ಮ	೩೨	ನಾಯಕ	ಕಾಮಯ್ಯನಹಟ್ಟಿ
೨.	ಲಕ್ಷ್ಮಿ	೨೬	ನಾಯಕ	ಕಾಮಯ್ಯನಹಟ್ಟಿ
೩.	ಕಮಲಮ್ಮ	೩೩	ನಾಯಕ	ಕಾಮಯ್ಯನಹಟ್ಟಿ
೪.	ಪಿ.ಪಾಲಮ್ಮ	೪೦	ನಾಯಕ	ಕಾಮಯ್ಯನಹಟ್ಟಿ
೫.	ಲಕ್ಷ್ಮಮ್ಮ	೩೩	ನಾಯಕ	ಸೂಲದಹಳ್ಳಿ
೬.	ಮಂಜಮ್ಮ	೩೦	ನಾಯಕ	ಸೂಲದಹಳ್ಳಿ
೭.	ತಿಪ್ಪಕ್ಕ	೩೨	ನಾಯಕ	ಸೂಲದಹಳ್ಳಿ
೮.	ಓಬಕ್ಕ	೩೦	ನಾಯಕ	ಸೂಲದಹಳ್ಳಿ
೯.	ಮಾರಮ್ಮ	೨೯	ಹಿಂದೂ ಮಾದಿಗ	ಸೂಲದಹಳ್ಳಿ
೧೦.	ದುರುಗಮ್ಮ	೩೧	ಹಿಂದೂ ಮಾದಿಗ	ಸೂಲದಹಳ್ಳಿ
೧೧.	ಸತ್ಯಮ್ಮ	೩೫	ಹಿಂದೂ ಮಾದಿಗ	ಸೂಲದಹಳ್ಳಿ
೧೨.	ಓಬಕ್ಕ	೩೮	ಹಿಂದೂ ಮಾದಿಗ	ಸೂಲದಹಳ್ಳಿ
೧೩.	ಪಾರ್ವತಮ್ಮ	೩೮	ನಾಯಕ	ಸೂಲದಹಳ್ಳಿ
೧೪.	ಮಾರಕ್ಕ	೩೮	ನಾಯಕ	ಸೂಲದಹಳ್ಳಿ
೧೫.	ಪ್ರೇಮಕ್ಕ	೩೬	ನಾಯಕ	ಸೂಲದಹಳ್ಳಿ
೧೬.	ತಿಪ್ಪಮ್ಮ	೩೮	ನಾಯಕ	ಸೂಲದಹಳ್ಳಿ
೧೭.	ಓಬಮ್ಮ	೩೫	ನಾಯಕ	ಸೂಲದಹಳ್ಳಿ
೧೮.	ಗಂಗಮ್ಮ	೩೦	ನಾಯಕ	ಸೂಲದಹಳ್ಳಿ
೧೯.	ಬಸಮ್ಮ	೩೧	ನಾಯಕ	ಗುಣಸಾಗರ
೨೦.	ಹನುಮಕ್ಕ	೩೦	ನಾಯಕ	ಗುಣಸಾಗರ
೨೧.	ರಾಜಮ್ಮ	೩೫	ನಾಯಕ	ಗುಣಸಾಗರ
೨೨.	ಲಕ್ಷ್ಮಿದೇವಿ	೩೬	ವೈಷ್ಣವರು	ಗುಣಸಾಗರ
೨೩.	ಚಂದ್ರಮ್ಮ	೩೮	ಆಚಾರಿ	ಗುಣಸಾಗರ
೨೪.	ಮಾರಮ್ಮ	೩೫	ನಾಯಕ	ಗುಣಸಾಗರ
೨೫.	ಲಕ್ಕಮ್ಮ	೩೫	ನಾಯಕ	ಗಂಗಮ್ಮನಹಳ್ಳಿ
೨೬.	ಮಾರಮ್ಮ	೩೫	ನಾಯಕ	ಗಂಗಮ್ಮನಹಳ್ಳಿ
೨೭.	ಲಕ್ಷ್ಮಮ್ಮ	೩೬	ನಾಯಕ	ಗಂಗಮ್ಮನಹಳ್ಳಿ

೨೮.	ಕೆ.ಬಿ.ನಾಗಮ್ಮ	೩೮	ನಾಯಕ	ಗಂಗಮ್ಮನಹಳ್ಳಿ
೨೯.	ಪ್ರೇಮಕ್ಕ	೪೦	ಲಿಂಗಾಯತ	ಕುಪ್ಪನಕೇರಿ
೩೦.	ಶಾಂತಮ್ಮ	೩೮	ನಾಯಕ	ಕುಪ್ಪನಕೇರಿ
೩೧.	ಗೌರಮ್ಮ	೩೩	ನಾಯಕ	ಕುಪ್ಪನಕೇರಿ
೩೨.	ಲಕ್ಷ್ಮಿ	೩೪	ನಾಯಕ	ಕುಪ್ಪನಕೇರಿ
೩೩.	ಕೆಂಚಮ್ಮ	೩೨	ಕುರುಬರು	ಈಚಲ ಬೊಮ್ಮನಹಳ್ಳಿ
೩೪.	ಸಿದ್ದಮ್ಮ	೩೫	ಕುರುಬರು	ಈಚಲ ಬೊಮ್ಮನಹಳ್ಳಿ
೩೫.	ಕೊಟ್ರಮ್ಮ	೩೦	ನಾಯಕ	ಹ್ಯಾಳ್ಯಾ
೩೬.	ಗೋಣಮ್ಮ	೩೫	ಆದಿ ದ್ರಾವಿಡ	ಹ್ಯಾಳ್ಯಾ
೩೭.	ಪ್ರೇಮಾ	೩೦	ನಾಯಕ	ಹ್ಯಾಳ್ಯಾ
೩೮.	ಕಮಲಮ್ಮ	೩೪	ಹಿಂದೂ ಮಾದಿಗ	ಹ್ಯಾಳ್ಯಾ
೩೯.	ಬೊಮ್ಮಕ್ಕ	೩೫	ನಾಯಕ	ಬಣವಿಕಲ್ಲು
೪೦.	ಓಬಮ್ಮ	೩೩	ನಾಯಕ	ಬಣವಿಕಲ್ಲು
೪೧.	ಮಾರಕ್ಕ	೪೫	ಹಿಂದೂ ಮಾದಿಗ	ಬಡಲಡುಕು
೪೨.	ಮಂಗಳಮ್ಮ	೩೦	ಹಿಂದೂ ಮಾದಿಗ	ಬಡಲಡುಕು
೪೩.	ವಿ. ರುಕುಮಾ	೨೮	ಸುಡಗಾಡು ಸಿದ್ದರು	ಬಡಲಡುಕು
೪೪.	ಕೆ. ಲಕ್ಷ್ಮಿ	೩೦	ಸುಡಗಾಡು ಸಿದ್ದರು	ಬಡಲಡುಕು
೪೫.	ಪಿ.ನಾಗಮ್ಮ	೪೦	ನಾಯಕ	೬ನೇ ವಾರ್ಡ್, ಕೂಡ್ಲಿಗಿ
೪೬.	ಎಸ್.ಮುನ್ನಿ	೩೦	ಮುಸ್ಲಿಂ	೬ನೇ ವಾರ್ಡ್, ಕೂಡ್ಲಿಗಿ
೪೭.	ಭಾಗ್ಯಮ್ಮ	೨೯	ನಾಯಕ	೪ನೇ ವಾರ್ಡ್, ಕೂಡ್ಲಿಗಿ
೪೮.	ಮಾರಮ್ಮ	೩೫	ನಾಯಕ	೪ನೇ ವಾರ್ಡ್, ಕೂಡ್ಲಿಗಿ
೪೯.	ಬಿ.ಸರೋಜ	೩೪	ನಾಯಕ	೩ನೇ ವಾರ್ಡ್, ಕೂಡ್ಲಿಗಿ
೫೦.	ಕೆ.ಹನುಮಕ್ಕ	೪೦	ನಾಯಕ	೩ನೇ ವಾರ್ಡ್, ಕೂಡ್ಲಿಗಿ
೫೧.	ಮಲಿಯಮ್ಮ	೪೦	ನಾಯಕ	ಮರಬನಹಳ್ಳಿ
೫೨.	ನಿಂಗಮ್ಮ	೨೫	ನಾಯಕ	ಮರಬನಹಳ್ಳಿ
೫೩.	ರಾಮಕ್ಕ	೨೮	ನಾಯಕ	ಮರಬ
೫೪.	ರಂಗಮ್ಮ	೩೦	ಮಡಿವಾಳ	ಮರಬ
೫೫.	ಸೊಂಡಿ ಗಂಗಮ್ಮ	೩೨	ನಾಯಕ	ಮರಬ
೫೬.	ನೂರುಜಾನ್‌ಬಿ	೩೩	ಮುಸ್ಲಿಂ	ಮರಬ
೫೭.	ಜಿ.ಎ. ಕರಿಯಮ್ಮ	೩೫	ಕಾಡುಗೊಲ್ಲರು	ಮರಬ


೫೮.	ಕೆ. ಈರಮ್ಮ	೨೨	ಕಾಡುಗೊಲ್ಲರು	ಮರಬ
೫೯.	ರೋಜಲಕ್ಷ್ಮಿ	೨೯	ಬಾರಿಕರು	ಶಿವಪುರ
೬೦.	ಟಿ.ಲಕ್ಷ್ಮಿ	೨೮	ನಾಯಕ	ಶಿವಪುರ
೬೧.	ರೇಣುಕ	೨೦	ಒ.ಬಿ.ಸಿ.	ಶಿವಪುರ
೬೨.	ಬಿ. ಬಸಮ್ಮ	೩೦	ಲಿಂಗಾಯತ	ಶಿವಪುರ
೬೩.	ಚಂದ್ರಶೇಖರ	೩೨	ನಾಯಕ	ಡಿ.ಪಿ.ಜಿ.ಸಂಸ್ಥೆ, ಕೂಡ್ಲಿಗಿ
೬೪.	ಸುರೇಶ	೩೪		ಡಿ.ಪಿ.ಜಿ.ಸಂಸ್ಥೆ, ಕೂಡ್ಲಿಗಿ
೬೫.	ಶಿವಕುಮಾರ	೩೫		ಡಿ.ಪಿ.ಜಿ.ಸಂಸ್ಥೆ, ಕೂಡ್ಲಿಗಿ
೬೬.	ಈಶಪ್ಪ	೩೦	ನಾಯಕ	ಡಿ.ಪಿ.ಜಿ.ಸಂಸ್ಥೆ, ಕೂಡ್ಲಿಗಿ
೬೭.	ಕೃಷ್ಣಪ್ಪ	೩೦	ನಾಯಕ	ಡಿ.ಪಿ.ಜಿ.ಸಂಸ್ಥೆ, ಕೂಡ್ಲಿಗಿ
೬೮.	ಸ್ವ-ಶಕ್ತಿ, ಸಂಘದ ಕಾರ್ಯಕರ್ತರು			ಡಿ.ಪಿ.ಜಿ.ಸಂಸ್ಥೆ, ಕೂಡ್ಲಿಗಿ




1)ಸೋಲದಹಳ್ಳಿ, ಮಹಿಳಾ ಸ್ವ-ಸಹಾಯ ಸಂಘದ ಸದಸ್ಯರಿಗೆ ಸಂಘದ ಕಾರ್ಯಕರ್ತರು ಉಳಿತಾಯದ ಬಗ್ಗೆ ತಿಳುವಳಿಕೆ ನೀಡುತ್ತಿರುವುದು



2) ಗುಣ ಸಾಗರ ಮಹಿಳಾ ಸ್ವ-ಸಹಾಯ ಸಂಘದ ಸದಸ್ಯರು



3)ಸ್ವ-ಶಕ್ತಿ ಯೋಜನೆಯ ಜಿಲ್ಲಾ ಯೋಜನಾ ವ್ಯವಸ್ಥಾಪಕರು ಮಹಿಳಾ ಸದಸ್ಯರಿಗೆ ಜ್ಞಾನ ಮತ್ತು ತಿಳುವಳಿಕೆ ನೀಡುತ್ತಿರುವುದು.



4)ಸೋಲದಹಳ್ಳಿ ಮಹಿಳಾ ಸದಸ್ಯರು ಸ್ವ-ಶಕ್ತಿಯ ಯೋಜನೆಯ ಸ್ವ-ಸಂಘದ ಸ್ಥಾಪನೆಯ ಫಲಕ

AKSHARA GRANTHALAYA
ACC.NO. 054693

MAHEBOOB Book Binders
CHITWADGI - 583 211
(HOSPET TALUK)